ಕರ್ಮವೀರ

ಹುಬ್ಬಳ್ಳಿ ತಾ. ೧೯—೭—

ಸಂಪುಟ ೨೦] [ಸಂಚಿಕೆ ೧

ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು:
ಹ. ರಾ. ಪುರೋಹಿತ]

[ಸಂಸ್ಥಾಪಕರು— ನಿರ್ದೇಶಕರು:
ರಂ. ರಾ. ದಿವಾಕರ

ಗಾಂಧೀ ಸೂತ್ರ

ಜೀವನದ ಕೆನೆಯೆನಿಸುವ ಶಾಂತಿಯನ್ನು ಅಹಿಂಸೆಯ ಕಡೆಗೋಲಿನಿಂದಲೇ ಕಡೆದು ತೆಗೆಯತಕ್ಕದ್ದು. ಇಂಥ ಕಡೆಗೋಲನ್ನು ಬಳಸುವ ಯೋಗ್ಯತೆಯನ್ನು ಪಡೆಯಬೇಕಾದರೆ ಕೆಳಗಿನ ನಿಯಮಗಳನ್ನು ಚಿಕ್ಕಂದಿನಿಂದಲೂ ಅಭ್ಯಸಿಸಬೇಕು:

೧. ಪವಿತ್ರತಮವಾದ ವಿಚಾರವನ್ನು ಹೃದಯದಲ್ಲಿಡು; ಆಲಸ ಮತ್ತು ಅಪವಿತ್ರ ಭಾವನೆಗಳನ್ನು ದೂರೀಕರಿಸು.


೨. ಹಗಲೂ ರಾತ್ರಿಯೂ ಶುದ್ಧತಮ ಗಾಳಿಯನ್ನು ಸೇವಿಸು.

೩. ಮಾನಸಿಕ ಮತ್ತು ಶಾರೀರಿಕ ಕಾರ್ಯಗಳಲ್ಲಿ ಒಂದು ಸಮತೋಲವಾದ ಹೊಂದಿಕೆಯನ್ನಿಡು.

೪. ನೆಟ್ಟಗೆ ನಿಲ್ಲು, ನೆಟ್ಟಗೆ ಕುಳಿತುಕೋ ಪ್ರತಿ ಕಾರ್ಯದಲ್ಲೂ ಶಿಸ್ತು ಮತ್ತು ರುಚಿಯಿರಲಿ, ಅದು ನಿನ್ನ ಆತ್ಮಸೌಂದರ್ಯ ಪ್ರಕಾಶಕವಾಗಿರಲಿ.

೫. ಸಹಜೀವಿಗಳ ಸೇವೆಗಾಗಿ ಬದುಕಲು ಉಣ್ಣು, ಸ್ವವಿಲಾಸಕ್ಕಾಗಿ ಬದುಕಬೇಡ. ಆದುದರಿಂದ ದೇಹ ಮತ್ತು ಮನಸ್ಸುಗಳನ್ನು ನೆಟ್ಟಗೆ ಇಟ್ಟಿರಲು ಅಗತ್ಯವಿದ್ದಷ್ಟು ಮಾತ್ರ ಉಣ್ಣಬೇಕು. ಮನುಷ್ಯನು ಏನು ತಿನ್ನುತ್ತಾನೋ ಅದೇ ಆಗುತ್ತಾನೆ.

೬. ನಿನ್ನ ಆಹಾರ, ನೀರು, ಗಾಳಿಗಳು ಚೊಕ್ಕವಾಗಿರಬೇಕು ನೀನೊಬ್ಬನೇ (ಳೇ) ಹೀಗೆ ಶ್ರಮುಖವಾಗಿ ಚೊಕ್ಕವಿದ್ದರೆ ಸಾಲದು. ನಿನ್ನ ಸುತ್ತುಮುತ್ತಲೂ ಈ ಚೊಕ್ಕತನವನ್ನು ಹರಡಬೇಕು.



ದ್ವಾರಕಾನಾಥನ ಗುಡಿ

ಭಾರತದ ಅತ್ಯಂತ ಪವಿತ್ರ ಕ್ಷೇತ್ರಗಳಲ್ಲೊಂದಾದ ದ್ವಾರಕೆಯ ಕೃಷ್ಣಮಂದಿರವಿದು. ಗೋಮತೀ ನದೀತೀರದಲ್ಲಿ ಕಟ್ಟಲ್ಪಟ್ಟ ಈ ಮಂದಿರ ಬಡೋದಾ ಸಂಸ್ಥಾನದಲ್ಲಿದೆ. ಒಂದೇ ರಾತ್ರಿಯಲ್ಲಿ ಈ ದೇವಾಲಯ ದೇವತೆಗಳಿಂದ ನಿರ್ಮಿಸಲ್ಪಟ್ಟಿತೆಂದು ಹಿಂದುಗಳು ನಂಬುತ್ತಾರೆ.



ಬಾಯಿಂದ ಕಿವಿಗೆ!

ನಾ. ಕಸ್ತೂರಿ, ಎಂ. ಎ., ಬಿ. ಎಲ್.

ಮೊನ್ನೆ ನಾನು ಒಂದು ಇದ್ದಿಲು ಬಸ್ಸನ್ನು ಹತ್ತಲೇ ಬೇಕಾಗಿ ಬಂತು; ಗತ್ಯಂತರವಿರಲಿಲ್ಲ; ೪೦ ಮೈಲಿಯ ನರಕಯಾತನೆಗೆ ಸಿದ್ಧನಾದೆ. ಆದರೆ, ನನ್ನ ಬಲಪಕ್ಕದ ಸಹಪ್ರಯಾಣಿಕ ಆ ಯಾತನೆಯನ್ನೂ ಯಮಭಯಂಕರ ಮಾಡಿದ.... ಮತ್ತೇನೂ ಇಲ್ಲ. ಉದ್ದಕ್ಕೂ ತನ್ನ ಬಾಯಿಂದ ನನ್ನ ಕಿವಿಗೆ—ನೆಹರು ಸರ್ಕಾರ, ಕರ್ನಾಟಕದ ಏಕೀಕರಣದಿಂದಾಗುವ ಪ್ರಥಕ್ಕರಣಗಳು, ಕಮ್ಯುನಿಜಮ್ಮಿನ ಜಂಭ, ರಜ್ಯೀತಂತ್ರ, ಅಣುಬಾಂಬು, ಹೈದರಾಲಿಯನ್ನು ಸೋಲಿಸಿದ ಹೈದರಾಬಾದು—ಮುಂತಾದ ನೂರೆಂಟು ಜಟಿಲ ಸಮಸ್ಯೆಗಳನ್ನು ಕುರಿತ 'ವದಂತಿ'ಗಳನ್ನು ಉದ್ದಕ್ಕೂ ತುಂಬುತ್ತಲೇ ಇದ್ದ. ನನಗೆ ತಲೆಸಿಡಿತ ಪ್ರಾರಂಭವಾಯಿತು. ಆದರೆ, ಆತ ಗ್ಯಾಸ್ ಬಸ್ಸಿನ ಗಡಗಡ ಸದ್ದನ್ನೂ ಮೀರಿ ಇಡೀ ಜನಸ್ತೋಮಕ್ಕೆಲ್ಲ ಕೇಳಿಸುವಷ್ಟು ಗಟ್ಟಿಯಾಗಿ, ಕೂಗುತ್ತಲೇ ಇದ್ದ. ನಡುನಡುವೆ ಅಶ್ಲೀಲ ಮಿಶ್ರಣದಿಂದ ಸ್ವಾರಸ್ಯವಾಗಿಸಲಾದ ಹಲವಾರು ಕಥೆಗಳನ್ನೂ ಮುಖ್ಯ ವ್ಯಕ್ತಿಗಳನ್ನು ಕುರಿತು ಹೇಳಿದ್ದರಿಂದ ಎಲ್ಲರೂ ಆತನ ಕಡೆ ಕಿವಿನೀಡಿದ್ದರು. "ನಾನು ಬೊಂಬಾಯಿಯಲ್ಲಿದ್ದಾಗ," "ಮೊನ್ನೆ ರಂಗಾರವರು ನನ್ನ ಸೋದರಳಿಯನಿಗೆ," "ನನ್ನ ಚಿಕ್ಕಪ್ಪನ ಮಗ ಮಿಲಿಟರಿಯಲ್ಲಿದ್ದಾನೆ," "ನನ್ನ ಮಾತು ನಿಜ! ನೋಡುತ್ತಿರಿ!" "ನನ್ನಾಕೀ ಅಣ್ಣನ ಮಾವ ಸ್ಟೇಷನ್ ಮಾಸ್ತರು, ಅಲ್ಲೇ, ನಾಲ್ಕೈದು ಊರು ಈಚೆ," ಎಂದೆಲ್ಲ ಆತ ಆಗಾಗ ಒಗ್ಗರಣೆ ಇಟ್ಟಾಗಲಂತೂ ಜನರ ನೀಳ್ಗಿವಿ ಕುತೂಹಲದಿಂದ ಅತ್ತಿತ್ತ ತೂಗುತ್ತಿದ್ದುವು! ೩೯ನೆಯ ಮೈಲಿಕಲ್ಲಿನ ಹತ್ತಿರಕ್ಕೆ ಬಸ್ಸು ಬಂದಾಗ, ಅಂದರೆ, ಸಂಜೆಯಾದಾಗ, ಆತ ಇಳಿದು ಮುಸುಕಿನಲ್ಲಿ ಮಾಯವಾದ.... ಆತ ಒಬ್ಬ ರಾಜಕಾರಣಪಟು! ಆದರೂ, ಬಸ್ಸಿಗರೆಲ್ಲರೂ ಅವನನ್ನು ಪಟು ಎಂದೇ ಕೊಂಡಾಡಿದರು.

ಇಂಥವರು ಈಚೆಗೆ ನಮ್ಮ ದೇಶದಲ್ಲಿ ಗಲ್ಲಿಗಲ್ಲಿಯಲ್ಲೂ ಸೊಂಪಾಗಿ ಬೆಳೆಯುಹತ್ತಿದ್ದಾರೆ. ಸಾಮಾನ್ಯವಾಗಿ ಜನಾಭಿಪ್ರಾಯವನ್ನು ರೂಪುಗೊಳಿಸುವವರೆಲ್ಲ ಇವರೇ. ಚಹದಂಗಡಿ ಸರ್ವರ, ರೀಡಿಂಗ್ ರೂಂ ಕಾರಕೂನ, ಪಕ್ಕದ ಮನೆ ಸೀತವ್ವ, ಪಗಡೆಯಾಡುವ ಪೆನ್‌ಶನ್‌ದಾರರು, ಕರ್ಮಮಾಡಿಸುವ ಪುರೋಹಿತರು, ಟಾಂಗಾ ಹೊಡೆಯುವ ಸಾರಥಿ, ಆಯುಷ್ಕರ್ಮದ ನಾಪಿತ್ಯಗಳು, ರಿಟೈರಾದ ನೌಕರರು, ಓಂದಕ್ಕೆ ಬಂದ ಶಿಪಾಯಿಗಳು, ಎಲ್ಲರೂ ಕಂಠಕಂಠೆಯಾಗಿ ವದಂತಿಗಳನ್ನು ಬೆಳೆಸಿ ಹಬ್ಬುತ್ತಿರುವ ಕಾಲ ಇದು. ಬಾಯಿಂದ ಕಿವಿಗೆ ವದಂತಿಗಳು ಅತಿಶೀಘ್ರವಾಗಿ ಹರಡುತ್ತಿವೆ.

ವದಂತಿಕಾರರನ್ನು ಮೂರು ಪಂಗಡವಾಗಿ ವಿಂಗಡಿಸಬಹುದು: (೧) ಹೆದರಿದವರ ಮೇಲೆ ಹಾವೆಸೆಯುವವರು. (೨) ಹೆದರಿದವರ ಮೇಲೆ ತಾವೇ ಬೀಳುವವರು. (೩) ಹೆದರಿದವರನ್ನು ಹೊಗಳುವವರು.

ನೂರಕ್ಕೆ ನೂರು ಜನರೂ ಸಾಮಾನ್ಯವಾಗಿ ಹೆದರು ಜೀವನವನ್ನೇ ನಡೆಯಿಸಿಕೊಂಡು ಬರುತ್ತಿರುವರು. ಹೆದರಿಕೆ ಎಂಬುದು ಮಾನವನ ರಕ್ಷಣೆಗಾಗಿ ದೇವದತ್ತವಾಗಿ ಬಂದಿರುವ ಒಂದು ಗುಣ. ಆದರೆ, ಅದನ್ನು ನಾವು ಅತೀ ಹೆಚ್ಚಾಗಿ ಬಳಸಿ ಬೆಳೆಸಿಬಿಟ್ಟಿದೇವೆ. ಬೆಕ್ಕು ಅಡ್ಡ ಹಾಯ್ದರೆ, ಬೆದರುವೆವು! ರಾಹುಕಾಲ ಎಂದರೆ, ಷಷ್ಠಿ ತಿಥಿ ಎಂದರೆ, ಆಗ, ಅಂದು, ಪ್ರಯಾಣ ಮಾಡುವುದೇ ಪ್ರಯಾಸ! ಭರಣಿ ನಕ್ಷತ್ರವೆಂದು ಪಂಚಾಂಗದಲ್ಲಿ ಕಂಡರೆ ಭಯ, ಕಾಲಚಕ್ರ ದೋಷಗಳಿಂದ ಪ್ರಾಣಭೀತಿಯೂ ಕಳ್ಳಕಾಕರಿಂದ ಪೀಢೆಗಳೂ ಸಂಭವಿಸುತ್ತವೆ, ಎಂದು ಭವಿಷ್ಯದ ಕಾಲಂನಲ್ಲಿ ಕಂಡರೆ, ನಿಮಿಷನಿಮಿಷಕ್ಕೂ ನಡುಕ! ಚಿಕ್ಕಂದಿನಿಂದಲೂ ತಾಯಿತಂದೆಯರು ನಮಗೆ ಹೆದರಿಕೆಯನ್ನೇ ಬೋಧಿಸುತ್ತಿರುವರು. ನೀರಿಗಿಳಿಯಬೇಡ, ಕತ್ತಲೆಯಲ್ಲಿ ಪಿಶಾಚಿ ಇದೆ, ಮಾಸ್ತರು ಹೊಡೆಯುತ್ತಾರೆ, ಪೋಲೀಸಿನವ ಹಿಡಿದುಕೊಂಡು ಹೋಗುತ್ತಾನೆ, ಮರ ಹತ್ತಬೇಡ ಬೀಳುತ್ತೀಯೇ, ನೀರಿಗಿಳಿಯಬೇಡ ಮುಳುಗುತ್ತೀಯೇ, ನಾರು ಮುಟ್ಟಬೇಡ ನೇಣು ಹಾಕಿಕೊಳ್ಳುತ್ತೀಯೇ, ಪರೀಕ್ಷೆಗೆ ಕೂರಬೇಡ ಸೋಲುತ್ತೀಯೇ, ಇತರ ಜಾತಿಯವರೊಂದಿಗೆ ಸಂಸರ್ಗ ಬೇಡ, ಸ್ವರ್ಗ ತಪ್ಪುತ್ತೆ; ಇತರ ಮತೀಯರನ್ನು ಮಾತನಾಡಿಸಿದರೆ, ನರಕ ಸಿದ್ಧ, ಎಂದು ಮುಂತಾಗಿ ಅವರು ಪ್ರೇಮಪೂರಿತ ಲಾಲನೆ ಮಾಡುತ್ತಾರೆ. ಇದರಿಂದಾಗಿ, ನಾವು ಎಷ್ಟು ಬೆಳೆದರೂ, ಎಳೆಗರು ಎತ್ತಾದರೂ ಭಯ ಭೀತಿಗಳು ನಾಶವಾಗುವುದೇ ಇಲ್ಲ. ಹೊಸ ಹೊಸ ಗುಮ್ಮಯ್ಯಗಳನ್ನು ಕಲ್ಪಿಸಿಕೊಂಡು ನಾವು ಕಂಗಾಲಾಗುತ್ತಿರುತ್ತೇವೆ. ಪತ್ತೇದಾರಿ ಕಾದಂಬರಿಗಳೂ ಪಿಶಾಚಿ ಕಥೆಗಳೂ ಕೊಲೆ ಖೂನಿ ಚಿತ್ರ ಹಿಂಸೆ ಪಂಚಮದಳ ಗುಪ್ತಚಾರರು ಇವನ್ನು ವಿವರಿಸುವ ಸಿನಿಮಗಳೂ ಗ್ರಂಥಗಳೂ ಜನಪ್ರಿಯವಾಗಲು ಇದೇ ಕಾರಣ.

(೧) ಹೆದರಿದವರ ಮೇಲೆ ಹಾವೆಸೆಯುವದೆಂದರೆ ಸಂತೋಷದ ಕೆಲಸ. ಓಡುತ್ತಿರುವ ಹಸುವನ್ನು ಅಟ್ಟಿಸಿಕೊಂಡು ಹೋಗಿ ಪೆಟ್ಟು ಕೊಡಲು ಎಲ್ಲರೂ ಮುಂಬರುತ್ತಾರೆ. ಬಸ್ಸಿನಲ್ಲಿ ಕುಳಿತು ಪಕ್ಕದ ಮಹನೀಯನನ್ನು "ಸ್ವಾಮಿ! ಈ ವರ್ಷ ಊಟಕ್ಕೆ ಇನ್ನೂ ತೊಂದರೆಯಂತಲ್ಲಾ, ನಿಜವೆ?" ಅನ್ನಿ! ಅಥವಾ, "ಸ್ವಾಮಿ! ಇನ್ನೇನು ಯುದ್ಧ ಪ್ರಾರಂಭವಾಗಿಯೇ ಬಿಡುತ್ತದಾ?" ಅನ್ನಿ!... ಆಯಿತು ಅವನಿಗೆ ಪರಮಾನಂದ! ಆತ ತನ್ನ ವದಂತಿ ಬುಟ್ಟಿಗಳನ್ನು ಬಿಚ್ಚಿ, ಒಂದೊಂದಾಗಿ ನಮ್ಮ ಮೇಲೆ ಹಾವುಗಳನ್ನೆಸೆಯುತ್ತಾನೆ. ಸಣ್ಣ ಮಕ್ಕಳನ್ನು "ಲೋ! ನಿನ್ನ ಟೊಪ್ಪಿಗೆ ಯಾರೋ ಕದ್ದರಲ್ಲೋ," "ಲೋ! ಕಿಟ್ಟಣ್ಣ ಮಾವ ಊರಿಗೆ ಹೊರಟು ಹೋದನಲ್ಲೋ" "ಲೋ ನಿನಗೆ ಸಂಜೆ ಹಾಲೇ ಇಲ್ಲವಲ್ಲೊ" ಎಂದು ವಿನಾಕಾರಣ ಹೆದರಿಸಿ ಕೀಟಲೆ ಎಬ್ಬಿಸಿ ಹಿರಿಯರು ಆನಂದಪಡುವುದಿಲ್ಲವೆ? ಹಾಗೆಯೇ, ಇಂಥವರು ಕೂಡ ತಮ್ಮ ಜಾಣ್ಮೆ ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳುವುದಕ್ಕೋಸ್ಕರ ನಮ್ಮಂಥವರನ್ನು ಬೆದರಿಸುತ್ತಾರೆ. "ಹೌದ್ರಿ! ಮೊನ್ನೆ ನಾನು ಕಲೆಕ್ಟರ ಕಚೇರಿಗೆ ಹೋಗಿದ್ದೆ! ಅವರಲ್ಲಿದ್ದ ಗೋಧಿ ಜೋಳ ಎಲ್ಲ ಹುಳ ಹೊಡೆದು..... ಎಂದೋ "ಹೌದ್ರಿ! ನಾಳೇನೇ ಬರ್ಲಿನದಲ್ಲಿ ಲಟಾಪಟೀ ಆರಂಭಾಯಿತು ಅಂತೇನೇ.. ನಾಳೆ ಯಾಕೆ ಈಗ ಆಗೇ ಆಗಿರಬಹುದು" ಎಂದೂ ಉತ್ತರ ಕೊಡುತ್ತಾರೆ. ಒಳಗೊಳಗೆ ನಗುತ್ತ!

(೨) ಇನ್ನು ಕೆಲವರಿದಾರೆ. ಅವರಿಗೆ ಬೇಕಾದದ್ದು ಒಂದೇ ತಿಳಿವಳಿಕೆ. ತಮ್ಮಂತೆಯೇ ಇತರರೂ ಹೆದರಿ ನಡಗುತಿದಾರೆ, ಎಂಬ ಅರಿವು! ಆದರಿಂದಾಗುವ ಧೈರ್ಯ, ಸಮಾಧಾನ. 'ಇಲ್ಲ' ಎರಡು ಕೂಡಿದರೆ, 'ಉಂಟು' ಎಂಬುದು ಉದ್ಭವ—ಎಂದು ಇಂಗ್ಲೀಷರು ಹೇಳುತ್ತಾರೆ. ಅಂತೆಯೇ, ಭಯಗ್ರಸ್ತರು ಇಬ್ಬರು ಸೇರಿದರೆ, ಅವರಿಬ್ಬರಿಗೂ ಒಂದು ರೀತಿಯ ಕುರುಡು ಧೈರ್ಯ! "ಏನಪಾ! ರಷ್ಯಾದವನು ಅಣುಬಾಂಬುಗಳ ರಾಶಿ..." ಎಂದು ಒಬ್ಬ ತೊದಲುತ್ತಾನೆ. ಆಗ ಮತ್ತೊಬ್ಬ "ಬಿಡಣ್ಣ! ಅಣು ಬಾಂಬು ಯಾವ ಮೂಲೆಗೆ..., ಅದರ ಅಪ್ಪನಂಥದ್ದು ಪರಮಾಣು ಬಾಂಬಂತೆ... ಅದನ್ನು ಆಗಲೇ ತಂದು ಹಿಮಾಲಯದ ಹತ್ತಿರ.." ಎಂದು ಗದ್ದಿಸುತ್ತಾನೆ. "ಹಿಮಾಲಯ ಅಂದರೆ ತೀರಿತು ನಮ್ಮ ಗತಿ! ಪಠಾಣರ ಕೈಗೆ ಅವು ಸಿಕ್ಕಿತೆಂದರೆ,.." ಎಂದು ಮೊದಲಿನವನ ಮಂಡಿ ನಡಗುತ್ತದೆ. "ಸಿಕ್ಕಿತೆಂದರೆ? ಎಂದರೆ, ಗಿಂದರೆ ಮಾತು ಎಲ್ಲ ಹಿಂದಕ್ಕೆ! ಸಿಕ್ಕೇಬಿಟ್ಟಿವೆಯಂತೆ.. ಲಾಹೋರ್ ಪೇಪರಿನಲ್ಲಿದೆಯಂತೆ. ನನ್ನ ಭಾವ ಮೈದನನ ಮಗ ಹೇಳಿದ. ಅವನಿಗೆ ಅಲ್ಪ ಸ್ವಲ್ಪ ಉರ್ದು ಬರುತ್ತದೆ.." ಎನ್ನುತ್ತಾನೆ ಎರಡನೆಯವ. ಆಗ, ಮೊದಲಿನವ "ಅವನಿಗೆ ಬರೋ ಅಲ್ಪಸ್ವಲ್ಪ ಉರ್ದುವಿನಲ್ಲೇ ಅಷ್ಟು ಅವನು ಗೊತ್ತುಹಚ್ಚಿದ್ದರೆ, ಇನ್ನು ಪೂರ್ತ ಓದಬಲ್ಲವನ ಗತಿ ಏನು?" ಎಂದು ಮೂಗಿನ ಮೇಲೆ ಬೆರಳಿಡುವನು. ಭಯದ ಭರಾಟಿಯಲ್ಲಿ ಆ ಮೂಗು ಆಗಲೇ ತಣ್ಣಗಾಗಿರುತ್ತೆ, ಈ ಇಬ್ಬರ ಪಿಸು ಪಿಸು ಗುಸುಗುಸಗಳನ್ನು ಕೇಳಿದ ಇತರರು ಗಾಬರಿಗೊಂಡು "ಏನದು? ನಮಗೂ ಹೇಳಿ.. ನಾವು ಯಾರಿಗೂ ಹೇಳುವುದಿಲ್ಲ" ಎಂದು ಕತ್ತು ಕೊಂಕಿಸುತ್ತಾರೆ. ಸರಿ! ಗಿಡವಾಗಿ ಹುಟ್ಟಿದ ವದಂತಿ ಮರವಾಗಿ ಬೆಳೆಯುತ್ತದೆ.

(೩) ಕಲಿಯುಗ ಕಡೇ ಘಟ್ಟಕ್ಕೆ ಬಂತು. ಹಿಂದೂ ಧರ್ಮ ಹಾಳಾಗುವ ಸಮಯ ಬಂತು ಲೋಕವೇ ಪುಡಿಪುಡಿಯಾಗುತ್ತದೆ. ಪ್ರಾಣಮಾನ ಎರಡೂ ಇನ್ನು ಉಳಿಯುವಂತಿಲ್ಲ. ಮುಸಲವೇ ನಾಳೆಯ ಲೇಖಣಿ, ಎಲ್ಲ ನಮ್ಮ ಕಾಲಕ್ಕೇ ಮುಗಿದು ಹೋಯ್ತು. ನಮ್ಮ ಮಕ್ಕಳ ಕೈಗೆ ಕರಟವೇ ಗತಿ—ಎಂದು ಹೆದರುವ ಜನ ಬಹಳ ಇದ್ದಾರೆ. ಅವರಿಗೆ ಅದರಿಂದ ಒಂದು ರೀತಿಯ ಆತ್ಮಾಭಿಮಾನ. "ಏನೋ, ಅಪ್ಪ! ಇದುವರೆಗೂ ನಾವು ಎಲ್ಲವನ್ನೂ ಕಾಪಾಡಿಕೊಂಡು ಉಳಿಸಿಕೊಂಡು ಬಂದೆವು. ನಮ್ಮ ಬಲ ಕುಂದಿತು. ಮುಂದೆ ಎಲ್ಲವೂ ಸರ್ವನಾಶ! ಅಧಿಕಾರಸೂತ್ರ ಯಾರಾರೋ ವಹಿಸಿಕೊಂಡರು; ಲೋಕವೇ ತಲೆಕೆಳಗಾಯಿತು! ನಾವಲ್ಲಿದ್ದಿದ್ದರೆ..." ಎಂಬ ಪ್ರತಿಷ್ಠೆ, ಇಂಥವರಿಗೆ ಸಾಮಾನ್ಯವಾಗಿ. ಇವರು ಪುರಾತನಬುದ್ಧಿಯವರು, ಪುರಾಣಜೀವಿಗಳು; ಹಿನ್ನೋಟದವರು. ಇಂಥವರ ಸುತ್ತ, ಕಾರ್ಯಸಿದ್ಧಿಗಾಗಿ ಹಲವಾರು ಜನ ಸೇರಿಕೊಂಡು, ತಮ್ಮ ಯಜಮಾನರಿಗೆ ರುಚಿಸುವಂಥ ಕಥೆಗಳ ಅಂತೆ ಕಂತೆಗಳನ್ನು ಕಟ್ಟುತ್ತಾರೆ. ಅವುಗಳನ್ನೇ ನಿಜವೆಂದು ನಂಬಿ, ಇತರರು ಮೋಸಹೋಗುತ್ತಾರೆ.

ಅಂತು, ಬಾಯಿಂದ ಕಿವಿಗೆ ವ್ಯಾಪಿಸುವ ಈ ವದಂತಿ ವಾಯು ಕ್ರೋಧ ದ್ವೇಷ ಅಸೂಯೆಗಳ ಬೆಂಕಿಯನ್ನು ಉರಿಗೊಳಿಸುತ್ತ ಮುಂಬರಿಯುತ್ತದೆ. ನಮ್ಮ ಬುದ್ಧಿಯನ್ನು ನಮ್ಮ ಹತೋಟಿಯಲ್ಲಿರಿಸಲು ಶಕ್ಯವಿಲ್ಲದ ಜೊಳ್ ಜೀವಿಗಳು ಅದರಿಂದ ಕಲುಷಿತರಾಗುತ್ತಾರೆ. ವೃತ್ತಪತ್ರಿಕೆಗಳ ಮೂಲಕವೂ ರೇಡಿಯೊ, ಭಾಷಣ, ಮುಂತಾದ ಉಪಾಯಗಳಿಂದಲೂ ಅನೇಕ ಅರ್ಧವಿದ್ಯಾವಂತರಾಗಿರುವ ಜನರಿಗೆ ಕಂಡದ್ದೆಲ್ಲ ಕೆಂಡವಾಗಿ ಕಾಣುವ ಕಾಲ ಇದು. ಇಂಥ ಆಪತ್ಕಾಲದಲ್ಲಿ ಬುದ್ಧಿನಾಶವಮಾಡಿಕೊಳ್ಳದೆ, ವದಂತಿಕಾರರ ತಂಡಕ್ಕೆ ಅವರ ತಕ್ಕ ಸ್ಥಾನವನ್ನು ತೋರಿಸಿ ತೆಪ್ಪಗಿರಬೇಕಾದ ಕರ್ತವ್ಯ ನಮ್ಮದು.

ದರೋಡೆ ಬುದ್ಧಿ

ಲಿಂಕನ್ ನಗರದಲ್ಲಿ ಅರ್ಲೀನ್ ಗಿಬ್ಸನ್ ಎಂಬ ಪೋಲೀಸು ಅಧಿಕಾರಿಯೊಬ್ಬನು ನೃತ್ಯಮಂಡಲಕ್ಕೆ ಕದ್ದ ಆಭರಣ ಹಾಕಿಕೊಂಡು ಹೋಗಿ ಸಿಕ್ಕಿಬಿದ್ದು ಆ ತಪ್ಪಿಗಾಗಿ ಜೈಲಿಗೆ ದಯಮಾಡಿಸಿದನಂತೆ.

ದೇವನೆಲ್ಲಿ?

ದೇವನಿಹನೆನ್ನುತಿವೆ ಧರ್ಮಶಾಸ್ತ್ರಗಳೆನಿತೊ!
ಬುವಿಯ ವಿಷಮಯ ಬಾಳ್ಕೆಯದಕೆಗುರುತೊ?
॥ಪಲ್ಲ॥
ಸಿಡಿಲೆರಗೆ ಕಡಲುಕ್ಕೆ ನೆಲನಡುಗಿಸಿಂ ಭೂಮಿ—
ಯೊಡಲೊಡೆದು ಭುಗಿಲೆನುತ ಜ್ವಾಲೆ ಹರಡೆ
ಕಾಡಕಿಚ್ಚಿನ ಶಿಖೆಗೆ ಜೀವಕುಲ ತಲ್ಲಣಿಸೆ
ಕಾಡುತ ನಿಸರ್ಗರಕ್ಕಸಿ ನಾಟ್ಯವಾಡೆ ॥ ೧ ॥

ಧರ್ಮದಾಮುದಿರೆಯಲಿಮತ್ತೇರಿಮನುಜಕುಲ
ತಮ್ಮತಮ್ಮೊಳು ಹೋರಿ ರಕುತ ಹೀರೆ
ಲಕ್ಷೋಪಲಕ್ಷದಲಿ ಮಾನಿನಿಯರಭಿಮಾನ
ಸೂರೆಗೊಳಲಾರ್ತಮೊರೆ ಬಾನಿಗೇರೆ ॥ ೨ ॥

ಹೆಜ್ಜೆಹೆಜ್ಜೆಗೆ ನೋಡೆ ಸಜ್ಜನರೆ ರುಜೆಗೆ ಬಲಿ,
ಅಜ್ಞ ಬಾಲಿಕೆಯರಿಗಕಾಲವಿಧಿಯು
ಧೌರ್ಜನ್ಯದುರುಬೆಯಲಿ ಬಡಜೀವಿಗಳಹೋಳಿ
ಸೋಜಿಗವಿದಲ್ತೆ! ಜಗದೆದೆಯುಕುದಿಯು!॥೩॥

ನೆರೆನಂಬಿ ಭಜಿಸುವರ, ಪರರಿಗುಪಕಾರಿಗಳ
ಸರಳ ಶ್ರದ್ಧಾನ್ವಿತರ ಸರುವನಾಶ
ಕರುಣೆ ಸೋಂಕದ ಧರುಮ—ಕರುಮ—ಸೇವಾ ಭಾವ—
ವಿರದ ಪಶುತೆಗೆ ಧರಣಿ ಸುಖನಿವಾಸ ॥೪॥

ಈ ಪಂಚಭೂತದೀ ರೋಗ—ಖಲರಬ್ಬರದ
ತಾಪದ ನಿಯಂತ್ರಿತಗೆ ಕರುಣೆ ಮಾಜೆ
ಪಾಪ-ಪುಣ್ಯದ ನೋಳ್ಪ ಕಣ್ ಕುರುಡೆ!
ನಿದ್ರಿಪನೆ!
ಕಾಪಿಡದ ದೇವನವಗಾವ ಪೂಜೆ? ॥೫॥

ರಾಜಾರಾಮ ಚಿತ್ರಿಗೆಮಠ, ಕಾರವಾರ

ವಿಯೆನ್ನದಲ್ಲಿ ಒಂದು ಸಂಗತಿ ನಡೆಯಿತು. ೧೯೧೬ ರಲ್ಲಿ ಅಲ್ಲಿ ಮಾಥಿಲ್ಡೆ ಕೋವ್ಯಾಕ್ಸ್ ಎಂಬೊಬ್ಬ ಶ್ರೀಮಂತ ಹೆಂಗಸಿದ್ದಳು. ಅವಳಿಗೆ ಬೆಕ್ಕುಗಳೆಂದರೆ ಪ್ರಾಣ. ಆದರೆ ಅವಳ ಸಂಬಂಧಿಕರಿಗೆ ಬೆಕ್ಕುಗಳನ್ನು ಕಂಡರೆ ಅಷ್ಟಕಷ್ಟೇ; ಅವರು ಅವಳ ಬೆಕ್ಕುಗಳಿಗೆ ಆದರ ತೋರಲಿಲ್ಲ; ಆದರಿಂದ ಸಿಟ್ಟಾಗಿ ಸಾವ ಮೊದಲು ತನ್ನಲ್ಲಿದ್ದ ೫೦ ಕೋಟಿ ಕ್ರೋನಿನ್ ನೋಟು ಸುಟ್ಟು ಹಾಕಿದಳು.

ದೇಶಾಂತರಗಳಿಂದ

ಯೆಹೂದಿಗಳ ಉತ್ಕ್ರಮಣ

ಕಳೆದ ೯ ಕ್ಕೆ ತಾತ್ಕಾಲಿಕ ಶಾಂತಿಯ ಅವಧಿ ಮುಗಿದೊಡನೆ ಯೆಹೂದಿಗಳು ಉತ್ಕ್ರಮಣ ವನ್ನಾರಂಭಿಸಿದರು. ಇಬ್ಬಣದವರೂ ಗೆದ್ದೆವೆಂದು ಹೇಳುತ್ತಿದ್ದಾರೆ. ನೈಋತ್ಯ ಪಾಲಿಸ್ತಾನದಲ್ಲಿ ಕೈ ಕೈ ಹತ್ತಿತ್ತು. ಪಾಲಿಸ್ತಾನದ ಅತಿ ದೊಡ್ಡ ವಿಮಾನದ ಬಂದರೆನಿಸಿದ ಲಿಡ್ಡಾ ಯೆಹೂದಿಗಳ ಕೈಸೇರಿತೆಂದು ತಿಳಿಯುತ್ತದೆ. ನಿಸ್ಮಾರ್ ಪರ್ಯಾಸರ್ನನ್ನು ಆಕ್ರಮಿಸಬಂದಾಗ ೫೦೦ ಯೆಹೂದಿಗಳನ್ನು ಕೊಂದು ಉಳಿದವರನ್ನು ದಿಕ್ಕಾಪಾಲು ಮಾಡಲಾಯಿತೆಂದು ಅರಬರ ಹೇಳಿಕೆ. ಉತ್ತರ ರಂಗದಲ್ಲಿ ಸಿರಿಯದ ಬಲವನ್ನು ಹಿಮ್ಮೆಟ್ಟಿಸಲಾಯಿತೆಂದು ಯೆಹೂದಿಗಳೆನ್ನುತ್ತಾರೆ. ಬ್ರಿಟಿಶ್ ಕಾನ್ಸಲ್ಲನ ಬಂಗಲೆಗೆ ಯೆಹೂದಿ ಬಾಂಬು ಬಿತ್ತು; ಆದರೆ ಯಾರಿಗೂ ಏನೂ ಆಗಿಲ್ಲ.

● ಕೌಂಟ್ ಬರ್ನದೊತ್ತೆಯವರು ಕೊನೆಯದಾಗಿ ಮತ್ತೆ ೧೦ ದಿನ ತಾತ್ಕಾಲಿಕ ಶಾಂತಿಯ ಅವಧಿಯನ್ನು ಬೆಳೆಸಬೇಕೆಂದು ಅರಬ ಮತ್ತು ಯೆಹೂದಿ ಮುಖಂಡರಿಗೆ ವಿನಂತಿ ಮಾಡಿಕೊಂಡು ಉತ್ತರವನ್ನು ನಿರೀಕ್ಷಿಸದೆ ರೋಡ್ಸಿನಿಂದ ಲೇಕ್‌ಸಕ್ಸೆಸ್ಸಿಗೆ ವಿಮಾನಾರೂಢರಾಗಿ ತೆರಳಿದರು.

● ಜೆರೂಸಲೇಮಿನಲ್ಲಿ ಹಣಾಹಣಿ ನಡೆಯಿತು. ಮದ್ದುಗುಂಡುಗಳ ಅರ್ಭಟ ನಡೆಯಿತು. ಉಭಯ ಸೇನೆಗಳೂ ಉತ್ಸಾಹ ಗುಂದಿಲ್ಲ. ಸಮೀಪದಲ್ಲಿಯ ಅರಬವಸತಿಗಳನ್ನು ಯೆಹೂದಿಗಳು ಸ್ಫೋಟಕವನ್ನು ಪ್ರಯೋಗಿಸಿ ಉರುಳಿಸಿದರು. ದಕ್ಷಿಣದಲ್ಲಿ ಯೆಹೂದಿ ಸೇನೆ ೩೦೦ ಇಜಿಪ್ತ ಸೈನಿಕರನ್ನು ಕೊಂದು ಮುನ್ನುಗ್ಗಿ ೨೦೦ ಜನರನ್ನು ಕೈಸೆರೆ ಹಿಡಿಯಿತು. ದಾರು ಶಿಬಿರದಿಂದ ಇಜಿಪ್ತಿನವರು ಓಡಿಹೋದರು. ಇಷ್ಟಾದರೂ ಪವಿತ್ರ ನಗರವಾದ ಜೆರೂಸಲೇಮನ್ನು ಉಳಿಸಲು ಮತ್ತೆ ತಾತ್ಕಾಲಿಕ ಒಪ್ಪಂದವಾಗಬಹುದೆಂದು ಊಹಿಸಲಾಗಿದೆ. ಸಂ. ರಾ. ಸಂಘದ ಪ್ರತಿನಿಧಿಯು ಅರಬ ಲೀಗಿನ ಸೇನಾಪತಿಯೊಡನೆ ಮಾತುಕತೆ ನಡೆಸಿದ ಸುದ್ದಿಯಿದೆ.

● ಇತ್ತೀಚಿನ ವಾರ್ತೆಯಂತೆ ಬರ್ನದೊತ್ತೆಯವರ ೧೦ ದಿನದ ಶಸ್ತ್ರತ್ಯಾಗಕ್ಕೆ ಯೆಹೂದಿಗಳು ಒಪ್ಪಬಹುದೆಂದೂ ಅರಬರಲ್ಲಿ ಆ ಬಗ್ಗೆ ಇನ್ನು ತವಾಗಿದೆಯೆಂದೂ ಹೇಳಲಾಗಿದೆ. ಅರಬ ಲೀಗಿನ ರಾಜಕೀಯ ಸಮಿತಿಯು ಪಾಲಿಸ್ತಾನದಲ್ಲಿ ತಾತ್ಕಾಲಿಕ ಮುಲ್ಕಿ ಆಡಳಿತ ಸ್ಥಾಪಿಸಲು ಅರಬ ಮಿಲಿಟರಿ ಗವರ್ನರ ಅಸ್ಮದ್ ಹೆಲ್ಮಿ ಪಾಶಾನಿಗೆ ಅಧ್ಯಕ್ಷಪದವಿಯನ್ನು ಕೊಡಲಾಗಿದೆಯೆಂದು ತಿಳಿದುಬರುತ್ತದೆ.

ಕೋರಿಯದ ಪರಿಸ್ಥಿತಿ

ಕಮ್ಯುನಿಸ್ಟ ಪಕ್ಷವು ಪ್ರಬಲವಿರುವ ಉತ್ತರ ಕೊರಿಯದಲ್ಲಿ ಸಂ. ರಾ. ಸಂಘವನ್ನು ಮೀರಿ ಆಗಸ್ಟ ೨೫ ಕ್ಕೆ ಚುನಾವಣೆ ನಡೆಸಿ ಒಂದು ಶಾಸನ ಸಭೆಯನ್ನು ರಚಿಸಿ ತನ್ಮೂಲಕ ಇಡೀ ಕೊರಿಯದ ಮೇಲೆ ಕಮ್ಯುನಿಸ್ಟರು ಪ್ರಭುತ್ವವನ್ನು ಸ್ಥಾಪಿಸಬೇಕೆಂದಿದ್ದಾರೆ. ಅಮೇರಿಕ ಹಿಡಿದ ಕೊರಿಯದ ಭಾಗದಲ್ಲಿ ಸಂ. ರಾ. ಸಂಘವು ಮೇ ೧೦ ರಲ್ಲಿ ನಡೆದ ಪ್ರಜಾತಂತ್ರಾತ್ಮಕ ಚುನಾವಣೆಯನ್ನು ಒಪ್ಪಿದ್ದು, ಅದಕ್ಕೆ ಇದು ಅದ್ವಿತೀಯಾಗಿ ಗೊಂದಲಕ್ಕೆ ಅವಕಾಶ ಕೊಟ್ಟಿದೆ.

ಗುಪ್ತ ಮತದಾನಕ್ಕೆ ವ್ಯವಸ್ಥೆಮಾಡಿ ಅನುಕೂಲ ಮತಗಳನ್ನು ಬಿಳಿಯ ಪೆಟ್ಟಿಗೆಯಲ್ಲೂ ಪ್ರತಿಕೂಲ ಮತಗಳನ್ನು ಕರಿಯ ಪೆಟ್ಟಿಗೆಯಲ್ಲೂ ಹಾಕುವ ಯೋಜನೆಯನ್ನು ಪ್ರಕಟಿಸಲಾಗಿದೆ. ಒಂದು ಪಕ್ಷಕ್ಕೆ ಜಿಲ್ಹೆಗೊಬ್ಬನನ್ನು ಚುನಾವಣೆಗೆ ನಿಲ್ಲಿಸುವ ಹಕ್ಕನ್ನು ಕೊಡಲಾಗಿದೆ. ಇಡೀ ಚುನಾವಣೆಯ ಆಡಳಿತವು ಒಬ್ಬ ಕಮ್ಯುನಿಸ್ಟ ಮುಖಂಡನ ಕೈಯಲ್ಲಿರುವುದು ಎಂದು ಉತ್ತರ ಕೊರಿಯದ ಜನಪದ ಸಮಿತಿ ಸಾರಿದೆ. ಚುನಾವಣೆಯಾದ ಕೂಡಲೆ ಮೊದಲೇ ಸಿದ್ಧವಾದ ಘಟನೆಯನ್ನು ಜಾರಿಗೆ ತರಲಾಗುವುದೆಂದು ಪ್ರಕಟಿಸಲಾಗಿದೆ.

ಬರ್ಲಿನ್ನಿನ ಕಗ್ಗಂಟು

ದಿಗ್ಬಂಧನಕ್ಕೊಳಗಾದ ಬರ್ಲಿನ್ನಿನ ಕೊನೆಯ ಮಿತ್ರ ವಿಮಾನ ಶಿಬಿರದಲ್ಲಿ ಬೇಕಾದ ಹಾಗೆ ವಿಮಾನದ ಓಡಾಟ ನಡೆಸುವೆನೆಂದು ರಶಿಯನ್ನರು ಎಚ್ಚರಿಕೆಯಿತ್ತಿದ್ದಾರೆ. ಇದರಿಂದ ಬ್ರಿಟಿಶ ಮತ್ತು ಸೋವಿಯಟ್ ಸೇನಾನಾಯಕರನ್ನು ತಂತಮ್ಮ ರಾಜಧಾನಿಗಳಿಗೆ ಬಿಕ್ಕಟ್ಟಿನಬಗ್ಗೆ ಮಾತಾಡಲು ಕರೆಸಿಕೊಳ್ಳಲಾಗಿದೆಯೆಂದು ತಿಳಿದುಬರುತ್ತದೆ. ಮಾರ್ಶಲ್ ಸೊಕೊಲೋವಸ್ಕಿಯು ಇದೇ ನಿಮಿತ್ತವಾಗಿ ಮಾಸ್ಕೋವಿಗೆ ತೆರಳಿದ್ದಾನೆ. ಬರ್ಲಿನ್ನಿನ ವಿಮಾನಯಾನದಲ್ಲಿ ಬ್ರಿಟಿಶರು ಕರಾರು ಮುರಿದರೆಂದು ರಶಿಯವು ಅವರಿಗೆ ತನ್ನ ಪ್ರತಿಭಟನೆಯನ್ನು ಕಳಿಸಿದೆ.

ಮಾರ್ಶಲ್ ಸೊಕೊಲೋವಸ್ಕಿ
(ರಶಿಯನ್ ಬರ್ಲಿನ್ನಿನ ಮಿಲಿಟರಿ ಗವರ್ನರ್)

● ಅಂಗ್ಲ–ಅಮೇರಿಕ–ಫ್ರೆಂಚ ಪ್ರತಿಭಟನೆಗೆ ಮಾಸ್ಕೋದಿಂದ ಯಾವ ಉತ್ತರವೂ ಬಂದಿಲ್ಲ.

● ಮಳೆಬರುತ್ತಿದ್ದರೂ ಬ್ರಿಟನ್ನಿನಿಂದ ಬರ್ಲಿನ್ನಿಗೆ ಆಹಾರಸಾಮಗ್ರಿಯನ್ನು ವಿಮಾನಗಳ ಮೂಲಕ ಒಂದೇ ಸಮನಾಗಿ ಒಯ್ಯಲಾಗುತ್ತಿದೆ. ಪಶ್ಚಿಮ ಭಾಗದ ೨೨ ಲಕ್ಷ ಜನಸಂಖ್ಯೆಯ ಪ್ರದೇಶಕ್ಕೆ ರಶಿಯನ್ನರು ವಿದ್ಯುತ್ತು ಮತ್ತು ವಾಹನಸಂಚಾರಗಳನ್ನು ಉಗ್ರತರವಾಗಿ ನಿರ್ಬಂಧಿಸಿದ್ದಾರೆ. ಅಲ್ಲದೆ ಸೋವಿಯಟ್ ವಲಯದ ವಾಹನಗಳಲ್ಲಿ ರೂರ್ ಪ್ರದೇಶದಿಂದ ಮ್ಯಾಂಗನೀಸನ್ನು ತುಂಬಿ ಕಳಿಸುವುದನ್ನು ಬಿಟ್ಟು ಬರ್ಲಿನ್ನಿಗೆ ಕಲ್ಲಿದ್ದಲನ್ನು ಬ್ರಿಟಿಶರು ತುಂಬಿಕಳಿಸಿದ್ದನ್ನು ರಶಿಯವು ಪ್ರತಿಭಟಿಸಿದೆ.

● ಬ್ರಿಟನ್ನಿನ ಹಿಂದಿನ ಮುಖ್ಯ ಮಂತ್ರಿಯಾದ ಚರ್ಚಿಲ್ಲರು ಸೋವಿಯಟ್ ಒಕ್ಕೂಟದ ಮುಂಖಂಡರನ್ನು ಉಗ್ರವಾಗಿ ಟೀಕಿಸಿ, ಬರ್ಲಿನ್ನಿನಲ್ಲಿ ಬ್ರಿಟನ್ನು ಒಂದಂಗುಲದಷ್ಟೂ ಹಿಂಜರಿಯಕೂಡದೆಂದು ಸಾರಿದರು. ರಶಿಯದ ಜನರನ್ನು ಕ್ರೆಮ್ಲಿನ್ನಿನ ಕೇವಲ ೧೪ ಜನರು ತಮ್ಮ ಇಷ್ಟಬಂದಂತೆ ಆಳುತ್ತಿರುವರೆಂದೂ ಅವರಿಗೆ ನ್ಯಾಯನೀತಿ ಎಂಬುದರ ಬಗ್ಗೆ ಗೌರವವೇ ಇಲ್ಲವೆಂದೂ ಚರ್ಚಿಲ್ಲರು ಬೈದರು.

ಬ್ರಿ. ವಿದೇಶ ಮಂತ್ರಿ ಬೆವಿನ್ನರ ಸಹಾಯಕರಾದ ಹೆಕ್ಟರ್ ಮೆಕ್ ನೀಲರು 'ಬರ್ಲಿನ್ನಿನ ಕಗ್ಗಂಟು ಒಂದೇ ಅಲ್ಲ, ಇದಕ್ಕೆ ಸುತ್ತು ಮುತ್ತು ಇನ್ನೂ ಗಂಟುಗಳಿವೆ' ಎಂದು ಹೇಳಿದರು.

ಇಂಡೋನೇಶಿಯದ ಕಲಹ

ಜೋಗಜಕಾರ್ತದ ಹತ್ತಿರ ಮೊನ್ನೆ ಡಚ್ ಮತ್ತು ಇಂಡೊನೇಶಿಯದ ಪ್ರತಿನಿಧಿಗಳು ಸೇರಿ ಮಾತುಕತೆ ನಡೆಸಿ ಯಾವ ಇತ್ಯರ್ಥಕ್ಕೂ ಬರದೆ ಹಿಂದಿರುಗಿದರೆಂದು ಭದ್ರತಾ ಮಂಡಲದ ಸತ್ಕಾರ್ಯ ಸಮಿತಿಯು ವರದಿ ಮಾಡಿದೆ. ಇಂಡೊನೇಶಿಯ ಪ್ರಜಾರಾಜ್ಯದ ಪ್ರತಿನಿಧಿಗಳ ಮುಖಂಡನಾದ ಡಾ. ಮಹಮ್ಮದ್ ರೋಯಿಯವರು, 'ಹೇಗಿನಲ್ಲಿಹೊಸ ಮಂತ್ರಿಮಂಡಲ ರಚಿತವಾದೊಡನೆ ಮತ್ತೆ ತೀವ್ರವಾಗಿ ಸಂಪೂರ್ಣ ಸಂಧಾನ ನಡೆಸಲು ಅವಕಾಶ ದೊರೆಕಬಹುದು' ಎಂದರು.

ಭದ್ರತಾ ಮಂಡಲದಲ್ಲಿ ಡಚ್ ದಿಗ್ಬಂಧನದ ವಿಷಯವನ್ನು ಎತ್ತಿ ಪ್ರಜಾರಾಜ್ಯವು ಸತ್ಕಾರ್ಯ ಸಮಿತಿಯ ಮಾತನ್ನು ಅಲಕ್ಷಿಸಿ ಅಕ್ರಮ ವರ್ತನೆಯನ್ನು ಪ್ರದರ್ಶಿಸಿತೆಂಬ ಆರೋಪವನ್ನು ಡಾ. ಮಹಮ್ಮದರು ಅಲ್ಲಗಳೆದರು. ಪ್ರಜಾರಾಜ್ಯದ ಇಲ್ಲವೆ ತಾತ್ಪೂರ್ತಿಕ ಸಂಯುಕ್ತ ಸರಕಾರದ ಅಧಿಕಾರಕ್ಕೆ ಅಗತ್ಯವಾದ ಖಾತ್ರಿಯನ್ನು ಕೊಡದ ಮೂಲಕ ಡಚ್ಚರ ಸಲಹೆಗಳನ್ನು ತ್ಯಜಿಸಲಾಯಿತೆಂದು ಪ್ರಜಾರಾಜ್ಯದವರ ಹೇಳಿಕೆ. ಮಧ್ಯಕಾಲದಲ್ಲಿ ಇಂಡೊನೇಶಿಯನ್ನರಿಗೆ ಅಧಿಕಾರ ದಾನ ಮಾಡಲು ಡಾ. ವ್ಯಾನ್‌ಮೂಕರು ಮತ್ತೊಂದು ಯೋಜನೆಯನ್ನು ಸಿದ್ಧಮಾಡುತ್ತಿರುವರೆಂದೂ ಆ ಹೇಳಿಕೆಯಲ್ಲಿದೆ. ಈ ಹೊಸ ಯೋಜನೆಯನ್ನು ಹೊಸ ಡಚ್ ಸರಕಾರದ ಅವಗಾಹನೆಗೆ ಒಪ್ಪಿಸಬಹುದೆಂದೂ ಹೇಳಲಾಗಿದೆ.

ಚೀನೀ ಕದನಕಾಂಡ

ಈಗ ಮಧ್ಯಶಾನ್ಸಿ ಮತ್ತು ಉತ್ತರ ಹೂಪೆಗಳಲ್ಲಿ ಸರಕಾರೀ ದಳಗಳು ಕಮ್ಯುನಿಸ್ಟರಿಂದ ಪರಾಜಿತವಾದವೆಂದು ಸರಕಾರೀ ವರದಿಯಿಂದ ತಿಳಿದು ಬರುತ್ತದೆ. ಫ್ಯಾನ್‌ಚೆಂಗ್ ನಗರವು ಆಗಲೇ ಸರಕಾರದ ಕೈಬಿಟ್ಟು ಹೋಗಿತ್ತು. ಅಂಥ ಸಮಯದಲ್ಲಿ ಅರ್ಧಲಕ್ಷ ಕಮ್ಯುನಿಸ್ಟರು ಮೇಲೇರಿ ಬಂದು ಸರಕಾರೀ ದಲಗಳನ್ನು ಹಿಮ್ಮೆಟ್ಟಿಸಿದವೆಂದು ಸುದ್ದಿ.

೧ ಲಕ್ಷಕ್ಕಿಂತ ಹೆಚ್ಚು ಕಮ್ಯುನಿಸ್ಟ್ ಸೈನಿಕರಿರುವ ೪ ಕಮ್ಯುನಿಸ್ಟ್ ದಲಗಳು ಹೂಪೆಯಲ್ಲಿಯ ತಮ್ಮ ಸೈನಿಕರಿಗೆ ನೆರವಾಗಲು ಸರಕಾರೀ ಸೈನಿಕರು ಹೋಗದಂತೆ ತಡೆಯಲು ಮುಂದೊತ್ತಿ ಬಂದಿವೆ. ಅವೀಗ ಪೀಪಿಂಗ್–ಹ್ಯಾಂಕೋ ರೈಲು ದಾರಿಯಲ್ಲಿ ೬೦ ಮೈಲುಗಳ ಉದ್ದ ದಾಳಿ ನಡೆಸುತ್ತಿವೆ. ಆದರೆ ೧೦ ಸಾವಿರ ಕಮ್ಯುನಿಸ್ಟರನ್ನು ಯಮಲೋಕಕ್ಕೆ ಕಳಿಸಲಾಗಿದೆಯೆಂದು ಸರಕಾರೀ ದಲಗಳ ಮುಖಂಡರು ಹೇಳುತ್ತಾರೆ. ಸುತ್ತುಮುತ್ತಲಿನ ಹಲವು ಗಟ್ಟಿಗುತ್ತುಗಳನ್ನು ಹಿಡಿದು ನಾನ್‌ಕಿಂಗಿನ ಸನಿಹದ ಹ್ಯೂಯಿಂಗಿನತ ಕಮ್ಯುನಿಸ್ಟ್ ಕೂಟಯೋಧರು ಹಾಯುತ್ತಿದ್ದಾರೆ. ಇವರನ್ನು ಎದುರಿಸಲು ೨ ಸರಕಾರೀ ದಲಗಳು ನ್ಯಾನ್‌ಕಿಂಗಿನಿಂದ ಆಗಲೇ ಧಾವಿಸುತ್ತಲಿವೆ.

ಟಿಟೋ ಅವರ ಮಹತ್ವಾಕಾಂಕ್ಷೆ?

ಅಂತಃರಾಷ್ಟ್ರೀಯ ಕಮ್ಯುನಿಸ್ಟ್ ಸಂಘದಿಂದ ಟಿಟೋ ಅವರನ್ನು ಉಚ್ಚಾಟನೆ ಮಾಡಲು ಅವರು ಕಮ್ಯುನಿಸ್ಟ್ ಚಳವಳದ ನಾಯಕತ್ವವನ್ನು ಜೊಸೆಫ್ ಸ್ಟಾಲಿನ್ನರಿಂದ ಕಸಿದುಕೊಳ್ಳಬೇಕೆಂಬ ಮಹತ್ವಾಕಾಂಕ್ಷೆ ಇಟ್ಟುಕೊಂಡದ್ದೇ ಕಾರಣ ಎಂದು ಲಂಡನ್ ಪತ್ರಿಕೆಗಳೆರಡರಲ್ಲಿ ಪ್ರಸಿದ್ಧವಾಗಿದೆ. ಈ ಸುದ್ದಿ ಒಳಗಿನ ಸಂಗತಿಗಳಿಂದ ತಿಳಿದು ಬಂದಿದೆಯೆಂದು ಅವು ಹೇಳುತ್ತವೆ.

ಒಂದು ವರ್ಷದ ಹಿಂದೆಯೇ ಸ್ಟಾಲಿನ್ನರಿಗೆ ಈ ವಿಷಯದ ವಾಸನೆ ಬಡಿದಿದ್ದು, ಅವರು ಟಿಟೋ ಅವರ ಸುತ್ತು ಗುಪ್ತಚಾರರನ್ನು ಇಟ್ಟರಂತೆ. ಅವರನ್ನು ಟಿಟೋ ನಾಶ ಪಡಿಸಿದರು. 'ಸಂಡೆ ಡಿಸ್ಪ್ಯಾಚ'ನ ಪ್ರಕಾರ ಕ್ರೆಮ್ಲಿನ್ನಿನ ೧೪ ಮುಖಂಡರ ಹೆದರಿಕೆಯೇ ಟಿಟೋ ಅವರನ್ನು ಕೆಳಗೆ ದೂಡಲು ಕಾರಣವಾಯಿತು. ಅದೇ ಪತ್ರಿಕೆಯಲ್ಲಿ ಟಿಟೋ ಹೇಳಿದ ಬಾಲ್ಕನ್ ಸಂಯುಕ್ತ ರಾಜ್ಯದ ಯೋಜನೆ, ಅವರ ಟ್ರೀಸ್ಟೆಯ ಮೇಲಿನ ಅಭಿಪ್ರಾಯ, ಮ್ಯಾಸಿಡೋನಿಯದ ಮೇಲಿನ ಅವರ ಆಸೆ ಸ್ಟಾಲಿನ್ನರಿಗೆ ರುಚಿಸಲಿಲ್ಲವಂತೆ!

ಮಲಯದಲ್ಲಿ ಕಮ್ಯುನಿಸ್ಟರು

ಮಲಯದ ಕ್ರಾಂತಿಕಾರ ಮುಖಂಡರಲ್ಲಿ ಹಲವರನ್ನು ಬ್ರಿ. ಸೈನಿಕರು ಹಿಡಿದಿದ್ದಾರೆ. ಮಲಯದ ಸಂಯುಕ್ತ ರಾಜ್ಯದ ರಾಜಧಾನಿಯಿಂದ ಕೌಲಾಲುಂಪುರದಿಂದ ೮ ಮೈಲಿನ ವಿಸ್ತಾರದಲ್ಲಿ ಕದನ ಸಾಗಿದೆ. ಗೂರ್ಖ ಸೈನಿಕರೂ ಬ್ರಿಟಿಶ ಶಿಪಾಯಿಗಳಿಗೆ ನೆರವಾಗಿ ನಿಂತು ಹೋರಾಡುತ್ತಿದ್ದಾರೆ.

ಬಿಕ್ಕಟ್ಟಿನ ಪ್ರಸಂಗದ ಕಾಯದೆಗಳನ್ವಯ ಕೊಲೆಗಡಿಕರನ್ನು ಕಂಡಲ್ಲಿ ಹಿಡಿದು ಶಿಕ್ಷಿಸಲಾಗುತ್ತದೆ. ಕಮ್ಯುನಿಸ್ಟರಲ್ಲಿ ಬಹುಸಂಖ್ಯಾಕರು ಚೀನಿಯರಿದ್ದಾರೆಂದು ನಂಬಲಾಗಿದೆ ಅವರು ಮಲಯದಿಂದ ಬ್ರಿಟಿಶರನ್ನು ಓಡಿಸಬೇಕೆಂಬುದು ತಮ್ಮ ಗುರಿಯೆಂದು ಸಾರುತ್ತಿದ್ದಾರೆ. ಅಲ್ಲದೆ, ತಮ್ಮ ಸಂಖ್ಯೆ ೧ ಲಕ್ಷವಿದೆಯೆಂದೂ ಅವರು ಹೇಳುತ್ತಾರೆ. ಅಲ್ಲಲ್ಲಿ ಯುರೋಪಿಯನ್ ರಬ್ಬರ್ ತೋಟಗರ ಮೇಲೆ ಬೀಳುವುದು ನಡೆದಿದ್ದರೂ ಪರಿಸ್ಥಿತಿಯು ಕೈಮೀರಿ ಹೋಗಿಲ್ಲ.

ನಗೆಯ ಸೂರೆ

ಅವಳು – ನಾನು ನಿನಗೆ ಮುತ್ತುಕೊಡಲು ಪ್ರಯತ್ನಿಸಿದರೆ ನೀನೇನು ಮಾಡುವೆ?

ಅವನು – ಅದನ್ನು ಮುಖಾಮುಖಿ ಎದುರಿಸುತ್ತೇನೆ!

× × ×

ಅವನು – ನಮ್ಮೂರಿನಲ್ಲಿ ಒಂದು ಬಹಳ ಮೋಜಿನ ಕೆಲಸ ನಡೆಯಿತು!

ಅವಳು – ಅದೇನದು?

ಅವನು – ಒಬ್ಬ ಜಗನ್ಮೋಹಿನಿಯೆಂದು ಜಂಭ ಹೊಡೆದುಕೊಳ್ಳುತ್ತಿದ್ದವಳನ್ನು ನಮ್ಮೂರಿನ ಸೋಮಸುಂದರನೆಂಬ ಸುಂದರ ತರುಣ ಬ್ರಹ್ಮಚಾರಿ ಅಂಗಲಾಚಿದರೂ ಮದುವೆಯಾಗಲೊಲ್ಲೆನೆಂದ!

× × ×

೧ ನೆಯವಳು – ನಾನು ನಿನಗೆ ಅವಳಿಗೆ ಹೇಳಬಾರದೆಂದು ಹೇಳಿದ ಗುಟ್ಟನ್ನು ನೀನು ಅವಳಿಗೆ ಹೇಳಿದೆ ಎಂದು ಅವಳು ನನಗೆ ಹೇಳಿದಳು.

೨ ನೆಯವಳು – ಅಲ್ಲವೆ, ನಾನು ಹೇಳಿದೆನೆಂದು ನಿನಗೆ ಹೇಳಬೇಡವೆಂದು ನಾನು ಅವಳಿಗೆ ಹೇಳಿದ್ದೆ.

೧ ನೆಯವಳು — ಅಯ್ಯೋ ಗೆಳತಿ, ಹಾಗೇನು? ಹಾಗಾದರೆ, ಅವಳು ನನಗೆ ಹೇಳಿದಳೆಂಬುದನ್ನು ನಾನು ನಿನಗೆ ಹೇಳಿದೆ ಎಂದು ಮಾತ್ರ ದಯವಿಟ್ಟು ಅವಳಿಗೆ ಹೇಳಬೇಡ. ತಿಳಿಯಿತೇನೇ?

× × ×

ಚಲಚ್ಚಿತ್ರಾಲಯವೊಂದರಲ್ಲಿ ಒಬ್ಬ ಚಿಕ್ಕ ತಾರೆಗೆ ಸನ್ಮಾನಭೋಜನವನ್ನೇರ್ಪಡಿಸಲಾಗಿತ್ತು. ಆಗ ಸಿನೆಮ ನಿರ್ಮಾಪಕನೆದ್ದು ಆ ಹುಡುಗಿಯ ತಲೆಯ ಮೇಲೆ ಕೈಯಿಟ್ಟು, "ನಮ್ಮ ಚಿಕ್ಕ ತಾರೆಗೆ ಸನ್ಮಾನಮಾಡಬೇಕೆಂದು ನಮ್ಮ ಇಷ್ಟ" ಎಂದು, ಬಳಿಕ ಅಲ್ಲೇ ನಿಂತಿದ್ದ ಅವಳ ತಾಯಿಯ ಭುಜದ ಮೇಲೆ ಕೈ ಹಾಕಿ, "ಅದರೆ ನಾವು ಚಿನ್ನದ ಮೊಟ್ಟೆಯನ್ನಿಟ್ಟ ಹೇಂಟೆಯನ್ನು ಮರೆಯಲು ಇಷ್ಟಪಡುವುದಿಲ್ಲ" ಎಂದನಂತೆ!

ಒಗಟು

ಪ್ರತಿನಿತ್ಯವೂ ಒಬ್ಬ ಡಾಕ್ಟರರು ಮತ್ತು ಒಬ್ಬ ಲಾಯರರು ಒಟ್ಟಿಗೆ ಊಟ ಮಾಡುತ್ತಿದ್ದರು. ಡಾಕ್ಟರರೇ ಯಾವಾಗಲೂ ಊಟದ ಕ್ರಯವನ್ನು ಕೊಡುತ್ತಿದ್ದರು. ಪಹರೆಯವನೊಬ್ಬನು ಒಂದು ದಿನ ಡಾಕ್ಟರರನ್ನು ಕರೆಯಲು ಓಡಿಬಂದನು. ಡಾಕ್ಟರರು ಧಾವಿಸಿ ಹೊರಗೆ ಹೋಗಲಾಗಿ ಗಂಭೀರ ಅಪಾಯಕ್ಕೆ ಗುರಿಯಾಗಿ ಒಬ್ಬ ಹೆಂಗಸು ಬೋರಲು ಬಿದ್ದಿರುವುದನ್ನು ಕಂಡರು. ಅವಳನ್ನು ಅಂಗಾತ ತಿರುಗಿಸಿ ಅವರು ಚೀರಿದರು: 'ಅಯ್ಯೋ ದೇವರೇ, ಇವಳು ನನ್ನ ಹೆಂಡತಿ!' ಅಕ್ಷಣ ಲಾಯರರು ಕೋವಿತೆಗೆದುಕೊಂಡು ಗುಂಡು ಹಾರಿಸಿ ಡಾಕ್ಟರರನ್ನು ಕೊಂದುಬಿಟ್ಟರು. ಏಕೆ ಹೇಳುವಿರಾ? ಲಾಯರರೊಬ್ಬ ಅವಿವಾಹಿತ ತರುಣಿಯಾಗಿದ್ದರು!

ಹೆಂಗಸರ ತರ್ಕ

ಅವಳು, 'ನಿತ್ಯ ಉಡಲು ನೆರೆಮನೆಯ ಶಾರದೆ ಉಟ್ಟಂಥ ಒಂದು ಸೀರೆಯನ್ನು ತಂದು ಕೊಡುವಿರಾ?' ಎಂದು ಕೇಳಲು, ಅದಕ್ಕೊಪ್ಪಿ ಅವಳ ಗಂಡನು ಮಧ್ಯಾಹ್ನ ಆಫೀಸಿನಿಂದ ಬರುವಾಗ ಪೇಟೆಯಿಂದ ಅಂಥ ಸೀರೆಯಿದ್ದ ಅಂಗಡಿಯನ್ನು ಹೊಕ್ಕು ಸಂಜೆ ಕೊಳ್ಳೋಣ ಎಂದು ನಿರ್ಧರಿಸಿ ಮನೆಗೆ ಬಂದನು. ಅಷ್ಟರಲ್ಲಿ ಅವಳು ಶಾರದೆಯ ಅಣ್ಣನ ಮೂಲಕ ಅವಳು ಉಟ್ಟಂಥದೇ ಅದರೂ ರೇಶಿಮೆಯ (ಹತ್ತಿಯದಲ್ಲ) ದನ್ನು ತಂದಿಟ್ಟಿದ್ದಳು. ಅದನ್ನು ಕಂಡು ಅವನಿಗೆ ಬೇಸರವಾಯಿತು. ಅದಕ್ಕೆ ಅವಳು, 'ಬೇಜಾರ ಮಾಡಿಕೊಳ್ಳಬೇಡಿ ಕಣ್ರಿ, ಹತ್ತಿಯದಕ್ಕಿಂತ ಅಷ್ಟೇನೂ ಬೆಲೆ ಹೆಚ್ಚಿಲ್ಲ. ಹತ್ತಿಯದಕ್ಕೆ ನಾವೀಗ ಒಮ್ಮೆಲೇ ೨೫ ರೂಪಾಯಿ ಕೊಡಬೇಕು. ಇದಕ್ಕೆ ನಿಧಾನವಾಗಿ ಪ್ರತಿ ತಿಂಗಳು ೧೦ ರಂತೆ ೬ ತಿಂಗಳು ಕೊಟ್ಟರೆ ಸರಿ' ಎಂದಳು!

ಅವಳು — ಅನೇಕರು ನನ್ನನ್ನು ತ್ರಿಲೋಕ ಸುಂದರಿಯೆನ್ನುತ್ತಾರೆ.

ಅವನು — ಹಾಗಾದರೆ ಅವರಾರೂ ನಿನ್ನನ್ನು ಪ್ರೀತಿಸರು—ನೀನು ನಿನ್ನನ್ನಲ್ಲದೆ ಅನ್ಯರನ್ನು ಪ್ರೀತಿಸಲಾರೆಯಾದುದರಿಂದ!

ಮಹಿಳಾ ಲೋಕ

ಸಂಗ್ರಹಕಾರ್ತಿ : "ಹಿರಿಯಕ್ಕ"

ಬಾಲಕರ ಜೋಪಾನ

ಲೇಖಿಕೆ :— ಕು. ಕೃಷ್ಣಾ ಬಿ. ಎ.

ಪ್ರತಿ ಮನೆಯಲ್ಲಿಯೂ ಬಾಲಕರಿರುವದುಂಟು. ಅವರು ಬೆಳೆದು ದೊಡ್ಡವರಾಗುವದೂ ಉಂಟು. ಆದರೆ ಬಾಲಕನು ಬೆಳೆದು ಕೇವಲ ದೊಡ್ಡವನಾದರೆ ಅಲ್ಲಿಗೆ ತಾಯಿ ತಂದೆಗಳ ಕರ್ತವ್ಯ ಮುಗಿಯಲಿಲ್ಲ. ಅವನ ಶಾರೀರಿಕ, ಮಾನಸಿಕ ವಿಕಾಸವು ಚನ್ನಾಗಿ ಆಗುವಂತೆ ಅಸ್ಪದ ಕೊಟ್ಟು ವಿಶೇಷ ಜಾಗರೂಕತೆಯಿಂದ ಅವನನ್ನು ಜೋಪಾನಮಾಡಬೇಕು.

ಬಾಲಕನಿಗೆ ಮನಸು ಎಂಬ ಒಂದು ವಸ್ತು ಇರುತ್ತದೆ ಎಂಬ ಕಲ್ಪನೆಯು ಹಿರಿಯರಿಗೆ ಇರುವದಿಲ್ಲ. ಅವನ ಮನಸಿನ ಕಡೆಗೆ ಗಮನಿಸದೆ, ಅವನ ಅಂತಿಮ ಹಿತಕ್ಕೆ ಏನು ಯೋಗ್ಯ ಎಂಬುದರ ಬಗ್ಗೆ ವಿಚಾರಿಸದೇನೇ ಅವನ ಜೋಪಾನವು ನಡೆಯುತ್ತದೆ. ಹಲವೊಂದು ಕಡೆಗೆ ಅವನ ಪ್ರತಿ ಮನೀಷೆಯನ್ನು ಪೂರೈಸಲಾಗುತ್ತದೆ. ಹಲವು ಕಡೆಗೆ ಶಿಸ್ತಿನ ಹೆಸರಿನಲ್ಲಿ ಪ್ರತಿ ಮಾತಿಗೆ ಅವನನ್ನು ಜಬರಿಸಲಾಗುತ್ತದೆ. ಬಾಲಕನು ದೊಡ್ಡವನಾದ ಮೇಲೆ ತಮ್ಮ ಮಾತು ಕೇಳಲಿಕ್ಕಿಲ್ಲವೆಂಬ ಭಯದಿಂದ ಚಿಕ್ಕಂದಿನಿಂದ ಅವನ ಸ್ವತಂತ್ರ ವಿಚಾರಕ್ಕೆ ಅಸ್ಪದವನ್ನೆ ಕೊಡಲಾಗುವದಿಲ್ಲ. ಹೀಗೇಕೆ ಮಾಡಬೇಕೆಂದು ಅವನು ಕೇಳಿದರೆ 'ಹಿರಿಯರು ಹೇಳತಾರಂತ ಮಾಡಬೇಕು, ಎಂದು ಅವನಿಗೆ ಉತ್ತರ ದೊರೆಯುತ್ತದೆ. ಅವನ ಕುತೂಹಲವನ್ನು ಶಮಿಸಲಾಗುವದಿಲ್ಲ. 'ಹೋಗೊ ನಿನ ಸುದ್ದಿ' ಬಾಯಿ ಮುಚಗೊಂಡು ಸುಮ್ಮ ಕೂಡ ಇನ್ನ. ಇಲ್ಲದ ಕಾರಭಾರನ ಬಾಳು, ಅಂತ ಇವನ ಕುತೂಹುಲ ಮಿಶ್ರಿತ ಪ್ರಶ್ನೆಯನ್ನು ಹತ್ತಿಕ್ಕಲಾಗುತ್ತಿದೆ. ಇದು ಸರಿಯಲ್ಲ. ತಮ್ಮ ಬಾಲಕರು ಸದ್ಗುಣಿಗಳೂ ಜಾಣರೂ ಸದೃಢರೂ ಇರಬೇಕೆಂದು ಅನಿಸುವದು ಸಹಜವಿದೆ. ಆದರೆ ಕೇವಲ ಅನಿಸಿ ಪ್ರಯೋಜನವೇನು! ಅದಕ್ಕಾಗಿ ವಿಶೇಷ ಶ್ರಮ ಪಡಬೇಕಾಗುತ್ತದೆ.

'ಓದು, ಬರಾ ಎನಾನಾರೆ ಯಾಕ ಆಗವಲ್ಲತು! ಯತ್ಲಾಗಾರೆ ಗಟ್ಟಿಮುಟ್ಟಯಾಗಿ ಇರಲಿ ಸಾಕು' ಎಂಬ ಮಾತನ್ನು ಅನೇಕ ಮಾತಾಪಿತೃಗಳ ಮುಖದಿಂದ ಕೇಳಿದ್ದುಂಟು. ಮಕ್ಕಳು ಗಟ್ಟಿಮುಟ್ಟಿಯಾಗಿ ಬೆಳೆಯುವಂತೆ ದಕ್ಷತೆಯನ್ನು ವಹಿಸಬೇಕು. 'ಆರೋಗ್ಯವೇ ಸಂಪತ್ತು' ಎಂಬಾಶಯದ ಒಂದು ಗಾದೆ ಇಂಗ್ಲೀಷದಲ್ಲಿ ಇದೆ. ಬಾಲಕನು ಸದೃಢನಾಗಿ ಬೆಳೆಯದಿದ್ದರೆ ಅವನ ಭಾವೀ ಜೀವನಕೆ ವಿಶೇಷ ಹಾನಿ ತಟ್ಟುತ್ತಿದೆ. ಶಾರೀರಿಕ ವಿಕಾಸ ಮತ್ತು ಮಾನಸಿಕ ವಿಕಾಸ ಎರಡೂ ಪರಸ್ಪರರ ಮೇಲೆ ಅವಲಂಬಿಸಿರುತ್ತವೆ. ಅನಾರೋಗ್ಯವು ಒಂದು ದೊಡ್ಡ ಕುಂದು. ಆದರೆ ಕೇವಲ ಶಾರೀರಿಕ ವಿಕಾಸದತ್ತ ಗಮನಿಸಿ, ಮಾನಸಿಕ ವಿಕಾಸವನ್ನು ಅಲಕ್ಷಿಸುವದು ತಪ್ಪು. ಬಾಲಕನು ಕೇವಲ ಸದೃಢನಾಗಿ ಬೆಳೆಯುವದರಲ್ಲಿ ತಾಯಿ ತಂದೆಗಳಿಗೆ ತೃಪ್ತಿ ಇದ್ದರೆ 'ವರಮೇಕೋ ಗುಣೀ ಪುತ್ರೋನಚ ಮೂರ್ಖ ಶತೈರಪಿ' ಎಂದು ಏಕೆ ಬೇಡಿಕೊಳ್ಳಲಾಗುತ್ತಿತ್ತು.

ಬಾಲಕನ ಮಾನಸಿಕ ವಿಕಾಸವು ಚಿಕ್ಕಂದಿನಿಂದಲೆ ಆಗುತ್ತದೆ. ಬಾಲಕನ ಎಳೆಯ ಮನಸಿನ ಮೇಲೆ ಹಿರಿಯರ ವರ್ತನದ, ಮಾತುಕತೆಗಳ ಪರಿಣಾಮವು ಶೀಘ್ರ ಆಗುತ್ತದೆ. ಬಾಲಕನೆದುರು ಇಲ್ಲದ ಸಲ್ಲದ ಮಾತುಗಳನ್ನು ಆಡಬಾರದು. ಮನೆಯ ರಾಜಕಾರಣ, ಜಗಳ ಮುಂತಾದವುಗಳನ್ನು ಅವನೆದುರು ವ್ಯಕ್ತಪಡಿಸಬಾರದು. ಹಿರಿಯರು ತಮ್ಮ ನಡಾವಳಿಯಲ್ಲಿ ಬಹಳ ಜಾಗರೂಕರಾಗಿರಬೇಕು. ಇಲ್ಲವಾದರೆ ಅದರ ಅನಿಷ್ಟ ಪರಿಣಾಮವು ಬಾಲಕನ ಮನಸಿನ ಮೇಲೆ ಆಗದೆ ಇರಲಾರದು.

ಚಿಕ್ಕಮಕ್ಕಳಲ್ಲಿಯೂ ಕುತೂಹಲ, ಆಶೆ ಆಕಾಂಕ್ಷೆಗಳು ಹಿರಿಯರಂತೆಯೆ ತುಂಬಿತುಳುಕುತ್ತವೆ. ಇವುಗಳ ಸಂಬಂಧದಲ್ಲಿ ಬಾಲಕರನ್ನು ಪ್ರೋತ್ಸಾಹಿಸುವದು ಹಿರಿಯರ ಕರ್ತವ್ಯವಾಗಿದೆ.

ಚಿಕ್ಕ ಬಾಲಕನ ಮನಸು ನಿರಾಕಾರವಿರುತ್ತದೆ. ಚಿಕ್ಕಂದಿನಲ್ಲಿ ಅವನು ಯಾವ ವಾತಾವರಣದಲ್ಲಿ ಬೆಳೆಯುತ್ತಾನೊ, ಎಂಥ ಶಿಕ್ಷಣವನ್ನು ಪಡೆಯುತ್ತಾನೊ ಅದರಂತೆ ಅವನ ಮನಸು ರೂಪ ತಾಳುತ್ತದೆ. ಅಂದ ಮೇಲೆ ಬಾಲಕನು ದುರ್ಗುಣಿಯಾಗಿ ಬೆಳೆದರೆ ಅದರ ಹೊಣೆಯು ಹೆಚ್ಚಾಗಿ ಹಿರಿಯರದೆಂದು ಹೇಳಬಹುದಲ್ಲವೆ? ಇನ್ನು ಹಲವು ಬಾಲಕರು ಯೋಗ್ಯವಾತಾವರಣದಲ್ಲಿ ಬೆಳೆದರೂ ದುರ್ಗುಣಿಗಳಾಗುವದುಂಟು.

ಬಾಲಕನ ಜೋಪಾನದಲ್ಲಿ ಮುಖ್ಯವಾಗಿ ತಾಳ್ಮೆ ಬೇಕು. ಬಾಲಕರು ಅನೇಕ ವಿಷಯಗಳಲ್ಲಿ ಹಟತೊಡುವದುಂಟು. ಇಂಥ ಪ್ರಸಂಗಗಳಲ್ಲಿ ಅವನನ್ನು ಸಮಾಧಾನಗೊಳಿಸಬೇಕು. ಇಲ್ಲವಾದರೆ ಬಾಲಕರಿಗೆ ಸಹಜವಾದ ಹಟಮಾರಿತನವು ಚಂಡಿತನದಲ್ಲಿ ಪರಿಣಮಿಸುವ ಭಯವಿರುತ್ತದೆ.

ಬಾಲಕನು ಅಳಹತ್ತಿದರೆ ಅವನು ಏಕೆ ಅಳುತ್ತಾನೆ ಎಂಬುದನ್ನು ಕಂಡುಹಿಡಿಯಬೇಕು. ಯಾವದನ್ನೂ ವಿಚಾರಿಸದೆ, ಒಮ್ಮೆಲೆ ಅವನನ್ನು ಜಬರಿಸಿ, ಹೊಡೆದು ಬಡಿದು ಮಾಡುವದು ಸರಿಯಲ್ಲ. ಅವನು ಅಳುವ ಕಾರಣವನ್ನು ಕೇಳಿ ಅವನಿಗೆ ಸಮಾಧಾನ ಹೇಳಬೇಕು. ಹೀಗೆ ಮಾಡುತ್ತ ಹೋದರೆ ಅವನ ಅಳುಬುರುಕತನವು ಕಡಿಮೆಯಾಗುವದನ್ನು ಕಾಣಬಹುದು.

ಮತ್ತೊಂದು ವಿಷಾದದ ಸಂಗತಿ ಎಂದರೆ ನಮ್ಮಲ್ಲಿ ಬಾಲಕರಿಗೆ ಅನೇಕ ತರಹದ ಭಯವನ್ನು ತೋರಿಸಲಾಗುತ್ತದೆ. 'ಅಯ್ಯ, ಬಾವಾ ಬಂತಪ್ಪಾ, ಗಪ್ಪ ಕೂಡು; ಕತ್ಲಿಒಳಗೆ ಕೂಡ ಸತೇನಿ ನೋಡು,' ಮುಂತಾದ ಅನೇಕ ತರಹದಿಂದ ಅವನನ್ನು ಹೆದರಿಸಲಾಗುತ್ತದೆ. ಇದರಿಂದ ಅವನು ಪುಕ್ಕನಾಗಿಯೆ ಉಳಿದು ಭಾವೀ ಜೀವನದಲ್ಲಿ ಸಾಹಸದ ಕೃತ್ಯಗಳನ್ನು ನೆರವೇರಿಸಲು ಅಸಮರ್ಥನಾಗಬಹುದು.

ಹಾಗೆಯೆ ಬಾಲಕ—ಬಾಲಕರಲ್ಲಿ ಭೇದ ಮಾಡಕೂಡದು. ಇದರಿಂದ ನಿಮ್ಮ ಪ್ರೀತಿಯ ಬಾಲಕರು ದುರಭಿಮಾನಿಗಳಾಗಿ ಉಳಿದವರಲ್ಲಿ ತಾವು ಗೌಣರೆಂಬ ಭಾವನೆಯು ಹುಟ್ಟುವದು.

ಬಾಲಕರಲ್ಲಿ ಇಂಥ ಭಾವನೆಯು ಹುಟ್ಟದಂತೆ ದಕ್ಷತೆಯನ್ನು ವಹಿಸಬೇಕು 'ನಿನಗೇನ ಬರತದ' 'ಹುಚ್ಚ ಖೋಡಿ' ಅಂತ ಅವರನ್ನು ನಿರುತ್ಸಾಹಗೊಳಿಸಬಾರದು. ಹಲವು ಬಾಲಕರು ಜಾಣರಿರುತ್ತಾರೆ. ಹಲವರು ಮಂದಮತಿಗಳಿರುತ್ತಾರೆ. ಮಂದಮತಿಗಳ ಕುಚೇಷ್ಟೆ ಮಾಡದೆ, ಹೆಚ್ಚು ಪ್ರಯತ್ನ ಪಟ್ಟರೆ ತಮಗೂ ಯಾವ ಕಾರ್ಯವಾದರೂ ಸಾಧಿಸುವದೆಂಬ ಆತ್ಮವಿಶ್ವಾಸವನ್ನು ಅವರಲ್ಲಿ ಹುಟ್ಟಿಸಬೇಕು.

ಬಾಲಕರನ್ನು ಹೀಗೆ ಬೆಳೆಸಬೇಕೆಂದು ಹೇಳುವದು ಬಹಳ ಕಠಿಣವಾದ ಮಾತು. ಬಾಲಕರು ಪೂರ್ಣ ವಿಕಾಸಹೊಂದುವ ವರೆಗೆ ಅನೇಕ ಪ್ರಸಂಗಗಳು ಬರುತ್ತವೆ. ಹಿರಿಯರು ಪ್ರಸಂಗಕ್ಕೆ ಸರಿಯಾಗಿ, ಬಾಲಕರ ಅಂತಿಮ ಹಿತವನ್ನು ಲಕ್ಷದಲ್ಲಿಟ್ಟು ವರ್ತಿಸಬೇಕು.

ಆದರೆ ಮಾತಾಪಿತೃಗಳ ಆರ್ಥಿಕ ಪರಿಸ್ಥಿತಿಯು ಬಾಲಕರನ್ನು ಇಷ್ಟೊಂದು ಜಾಗರೂಕತೆಯಿಂದ ಬೆಳೆಸುವಷ್ಟು ತೃಪ್ತಿಕರವಿರುತ್ತದೆಯೇ? ಎಂದು ನೀವು ಕೇಳಬಹುದು. ಇದು ಸತ್ಯ ಸಂಗತಿ. ಆರ್ಥಿಕ ಪರಿಸ್ಥಿತಿ ಮೂಲಕ ಗೋಳಾಡುತ್ತಿರುವ ತಾಯಿ ತಂದೆಗಳು ಬಾಲಕರ ಜೋಪಾನದಲ್ಲಿ ತಾಳ್ಮೆಯನ್ನು ವಹಿಸುವದು ಬಹಳ ಕಷ್ಟಸಾಧ್ಯ ವಿಷಯ. ಆದರೂ ಬಾಲಕರ ಜೋಪಾನ ಅವರ ಕರ್ತವ್ಯವಾಗಿದ್ದರಿಂದ ತಾಳ್ಮೆಗಾಗಿ ಪ್ರಯತ್ನಿಸಿ ತಮ್ಮ ಕರ್ತವ್ಯವನ್ನು ಪಾಲಿಸಬೇಕು.

ಮುಂಬಯಿ ಪ್ರಾಂತದಲ್ಲಿ ನೂಲಿನ ಸಾಗಾಟದ ಮೇಲೆ ಇದ್ದ ಎಲ್ಲ ನಿರ್ಬಂಧಗಳನ್ನು ರದ್ದುಪಡಿಸಲಾಗಿದೆ ಎಂದು ಸರಕಾರೀ ಪ್ರಕಟನೆ ಹೊರಟಿದೆ.

ಚಿನ್ನಕ್ಕೆ ಬದಲು ಬಟ್ಟೆಬೇಕು

ಪಾಕಿಸ್ತಾನದಲ್ಲಿ ೧ ತೊ. ಚಿನ್ನಕ್ಕೆ ೮೫ ರೂ.

ಸಿಂಧದಲ್ಲಿಯ ದೊಡ್ಡ ದೊಡ್ಡ ಹಿಂದೀ ವ್ಯಾಪಾರಸ್ಥರೆಲ್ಲ ಹೊರಬಿದ್ದು ಹಿಂದುಸ್ತಾನಕ್ಕೆ ಬರುವಾಗ ಅವರ ಬಳಿಗಿದ್ದ ಬೆಳ್ಳಿ ಬಂಗಾರವನ್ನೆಲ್ಲ ಪಾಕಿಸ್ತಾನ ಸರಕಾರವು ಸುಲಿದುಕೊಂಡಿತು. ಜಾನೇವರಿ ತಿಂಗಳಲ್ಲಿ ಕರಾಚಿಯೊಳಗೆ ದಂಗೆಯಾದಾಗ ಅಲ್ಲಿಯ ಹಿಂದೂ ಶ್ರೀಮಂತರ ಬೆಳ್ಳಿಬಂಗಾರವೆಲ್ಲ ಅಪಹಾರವಾಗಿ ಹೋಯ್ತು. ಇದರಿಂದ ಪಾಕಿಸ್ತಾನದಲ್ಲಿ ಅಪಾರ ಸುವರ್ಣ ಕೂಡಿಬಿದ್ದು ಹಿಂದುಸ್ತಾನ ಪಾಕಿಸ್ತಾನಗಳಲ್ಲಿ ಬೆಳ್ಳಿ ಬಂಗಾರದ ಬೆಲೆಯಲ್ಲಿ ಬಹಳ ಅಂತರವಾಗಿ ಹೋಗಿದೆ ಪಾಕಿಸ್ತಾನದಲ್ಲಿ ಬಂಗಾರದ ಬೆಲೆಯು ೧ ತೊಲಿಗೆ ೮೫ ರೂ. ಗಳಿಗಿಂತ ಕಡಿಮೆಯಾಗಿ ಹೋಗಿದೆ. ಹೀಗಾದ್ದರಿಂದ ಪಾಕಿಸ್ತಾನದ ಬಂಗಾರವನ್ನು ಹಿಂದುಸ್ತಾನಕ್ಕೆ ತಂದು ಲಾಭ ಮಾಡಿಕೊಳ್ಳುವವರ ಸಂಖ್ಯೆ ಮಿತಿಮೀರಿ ಬೆಳೆದಿರುವದು. ಅಲ್ಲದೆ ಪಾಕಿಸ್ತಾನಕ್ಕೆ ಕಳ್ಳತನದಿಂದ ಬಟ್ಟೆ ಸಾಗಿಸುವ ಕಾರ್ಯದಲ್ಲಿ ಈ ಚಿನ್ನದ ಸಹಾಯವು ಬಹಳವಾಗಿ ಆಗುತ್ತಿದೆಯೆಂದು ವಿಶ್ವಸನೀಯವಾಗಿ ತಿಳಿದು ಬಂದಿದೆ.

ಹಿಂದುಸ್ತಾನದಲ್ಲಿ ಚಿನ್ನದ ಕಳ್ಳ ವ್ಯಾಪಾರ ಮಾಡುವ ಕೆಲವರನ್ನು ಬಂಧಿಸಲಾಗಿದೆಯೆಂದು ವಾರ್ತೆ ಬಂದಿದೆ. ಈ ಕಳ್ಳ ವ್ಯಾಪಾರಿಗಳೆಲ್ಲ ಪಾಕಿಸ್ತಾನದಿಂದ ಬಂದಮುಸಲ್ಮಾನರೇ ಆಗಿದ್ದಾರೆ. ಹಿಂದುಸ್ತಾನದಲ್ಲಿ ಚಿನ್ನವನ್ನು ತರುವದು ಆಕ್ರಮವಿದ್ದಂತೆ ಇಲ್ಲಿಯ ಗಿರಣಿಯ ಬಟ್ಟೆಯನ್ನು ನಿರ್ಯಾತ ಮಾಡುವದೂ ಅಪರಾಧವಾಗಿದೆ. ಈ ಕಳ್ಳ ವ್ಯಾಪಾರಿಗಳು ತಮ್ಮ ಚಿನ್ನದಿಂದ ಬಟ್ಟೆ ಕೊಂಡು ಸಾಗಿಸಹತ್ತಿದ್ದರು. ಹಿಂದುಸ್ತಾನದ ಸುಂಕದ ಖಾತೆಯವರ ಉಗ್ರ ಉಪಾಯಗಳ ಫಲವಾಗಿ ಈ ಕಳ್ಳ ನಿರ್ಯಾತ ನಿಂತಂತಾಗಿದೆ.

ಹಿಂದಕ್ಕೆ ಮಧ್ಯಪೂರ್ವದ ಅರಬರು ಹಿಂದುಸ್ತಾನಕ್ಕೆ ಚಿನ್ನವನ್ನು ತರುವ ಕಾಯಕ ನಡೆಸಿದ್ದರು. ಈಗ ಪಾಕಿಸ್ತಾನಿಗಳು ಈ ಮಾರ್ಗ ಅನುಸರಿಸುತ್ತಿದ್ದಾರೆ. ಕರಾಚಿಯಲ್ಲಿ ಕೆಲವೊಂದು ವರ್ಗದವರು ಹಿಂದುಗಳ ಸುಲಿಗೆ ನಡೆಸಿ ಒಂದೇ ರಾತ್ರಿಯಲ್ಲಿ ಶ್ರೀಮಂತರಾಗಿ ಈಗ ವೈಭವದಲ್ಲಿ ಕಾಲ ಕಳೆಯಹತ್ತಿದ್ದಾರೆ.

ಹಿಂದುಸ್ತಾನದಿಂದ ಕಾಶ್ಮೀರಕ್ಕೆ ಹೊಸ ಮಾರ್ಗ

ಪಂ. ನೆಹರೂರಿಂದ ಉದ್ಘಾಟನೆ

ಹಿಂದುಸ್ತಾನದ ಮುಖ್ಯ ಮಂತ್ರಿಗಳಾದ ಪಂ. ಜವಾಹರಲಾಲರು ತಾ. ೭ ರಂದು ಪಠಾಣಕೋಟಿ—ಜಮ್ಮು ರಸ್ತೆಯ ಉದ್ಘಾಟನೆ ಮಾಡಿದರು. ಆಗ ಅವರು, 'ಈ ಮಾರ್ಗವೂ ಪೂಲುಗಳೂ ಹಿಂದುಸ್ತಾನ ಕಾಶ್ಮೀರ ಜನತೆಯ ಅಂತಃಕರಣಗಳನ್ನು ಒಂದುಗೂಡಿಸುವ ಸಾಧನವಾಗಲಿ' ಎಂದು ನುಡಿದರು. ಈ ಸಮಾರಂಭ ನೋಡಲು ೩೦ ಸಾವಿರ ಜನರು ನೆರೆದಿದ್ದರು.

ಒಂದು ತಾಸಿನ ನಂತರ ಮೋಟಾರಗಾಡಿಗಳು ಮಧುಪುರದ ಬಳಿಗೆ ಬಂದು ನಿಂತವು. ಅಲ್ಲಿ ರಾವಿ ನದಿಗೆ ೨೪೦೦ ಫೂಟು ಉದ್ದದ ಪೂಲು ಕಟ್ಟಲಾಗಿದೆ. ಪಂ. ನೆಹರೂ ಅವರು ಬೆಳ್ಳಿಯ ಕತ್ತರಿಯಿಂದ ಪೂಲಿನ ಮೇಲೆ ಕಟ್ಟಿದ ದಾರವನ್ನು ಕತ್ತರಿಸಿ ಪೂಲಿನ ಉದ್ಘಾಟನೆಯನ್ನು ಮಾಡಿದರು. ಆ ಮೇಲೆ ೧೦ ಟನ್ನ ಭಾರದ ೫೦ ಟ್ರಕ್ಕುಗಳು ಪೆಟ್ರೋಲ, ಆಹಾರ ಧಾನ್ಯ ಮೊದಲಾದ್ದು ಹೇರಿಕೊಂಡು ಪೂಲಿನ ಮೇಲಿಂದ ಹಾದು ಕಾಶ್ಮೀರ ಪ್ರದೇಶಕ್ಕೆ ಹೋದವು. ಮುಖ್ಯ ಮಂತ್ರಿ ಪಂ. ನೆಹರು ಅವರು ಹಾದು ಹೋಗುವ ಟ್ರಕ್ಕುಗಳತ್ತ ಕೈ ಬೀಸಿ ಸಂತೋಷ ವ್ಯಕ್ತಪಡಿಸಿದರು.

ಗಾಂಧೀ ಸ್ಮಾರಕ ನಿಧಿ

ಹಿಂದೀ ಜವಳಿ ಉದ್ದಿಮೆದಾರರು ಗಾಂಧೀ ಸ್ಮಾರಕ ನಿಧಿಗೆ ಇದೇ ಸಪ್ಟಂಬರ ೧೫ರೊಳಗಾಗಿ ೩ ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ನಿರ್ಧರಿಸಿರುವದಾಗಿ ತಿಳಿಯುತ್ತದೆ. ಗಾಂಧಿ ಸ್ಮಾರಕ ಉದ್ದಿಮೆದಾರರ ಸಭೆಯು ಶ್ರೀ. ಜಿ. ಡಿ. ಬಿರ್ಲಾರ ಅಧ್ಯಕ್ಷತೆಯಲ್ಲಿ ಸೇರಿ ಮೇಲಿನಂತೆ ನಿರ್ಧರಿಸಿತು. ಸಕ್ಕರೆ ಸಣಬಿನ ಉದ್ದಿಮೆದಾರರು ೫೦ ಲಕ್ಷ ರೂಪಾಯಿಗಳನ್ನು ಸಲ್ಲಿಸಲು ನಿರ್ಧರಿಸಿದ್ದಾರೆ. ಇನ್ನೂ ಬೇರೆ ಉದ್ದಿಮೆದಾರರು [illegible] ಇಲ್ಲವೆ [illegible]ರಲ್ಲಿಯ ೫% ಲಾಭವನ್ನೇ ಕೊಡಬೇಕೆಂದು ಗೊತ್ತುಮಾಡಿರುವರೆಂದು ತಿಳಿಯುತ್ತದೆ.

ಅ. ಭಾ. ವಿದ್ಯಾರ್ಥಿ ಕಾಂಗ್ರೆಸಿನ ಅಧಿವೇಶನ

ಬೆಂಗಳೂರಲ್ಲಿ

ಅ. ಭಾ. ವಿದ್ಯಾರ್ಥಿ ಕಾಂಗ್ರೆಸಿನ ೧೦ನೆಯ ಅಧಿವೇಶನವು ಬೆಂಗಳೂರಲ್ಲಿ ತಾ. ೭ಕ್ಕೆ ಸಂಜೆ ಲಾಲಬಾಗಿನಲ್ಲಿ ಶ್ರೀ ರವೀಂದ್ರ ವರ್ಮರ ಅಧ್ಯಕ್ಷತೆಯಲ್ಲಿ ನೆರೆದಿತ್ತು. ಅದರ ಆರಂಭೋತ್ಸವವನ್ನು ಡಾ ರಾಮ ಮನೋಹರಲೋಹಿಯ ಅವರು ನೆರವೇರಿಸಿದರು. ಅಧಿವೇಶನಕ್ಕೆ ೩೦೦ ಕ್ಕಿಂತಲೂ ಹೆಚ್ಚು ಪ್ರತಿನಿಧಿಗಳು ಬಂದಿದ್ದರು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಟಿ. ಸಿದ್ಧಲಿಂಗಯ್ಯನವರು ಪ್ರತಿನಿಧಿಗಳನ್ನು ಸ್ವಾಗತಿಸುತ್ತ ಇನ್ನು ಮೇಲೆ ವಿದ್ಯಾರ್ಥಿಗಳು ವಿನಾಶಕ ಚಟುವಟಿಕೆಗಳನ್ನು ನಿಲ್ಲಿಸಿ ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ತೊಡಗಬೇಕೆಂದೂ ಅದಕ್ಕೆ ರಾಷ್ಟ್ರಪಿತ ಗಾಂಧೀಜಿ ತೋರಿದ ರಚನಾತ್ಮಕ ಕಾರ್ಯಕ್ರಮವೇ ತಕ್ಕುದಾದುದೆಂದೂ ಹೇಳಿದರು. ಡಾ. ಲೋಹಿಯಾ ಅವರೂ ಕೂಡ ವಿದ್ಯಾರ್ಥಿಗಳು ಪಕ್ಷ ಪಂಗಡ ಪ್ರಭಾವಕ್ಕೆ ಒಳಗಾಗದೆ ರಚನಾತ್ಮಕ ಕಾರ್ಯ ಕೈಕೊಳ್ಳಬೇಕೆಂದು ಹೇಳಿದರು. ಆಚಾರ್ಯ ಕೃಪಲಾನಿಯವರು ಶ್ರೀಮತಿ ಸುಚೇಲಾ ಕೃಪಲಾನಿಯವರೊಡನೆ ಈ ಅಧಿವೇಶನಕ್ಕಾಗಿಯೇ ಬೆಂಗಳೂರಿಗೆ ತಾ ೭ಕ್ಕೆ ಮಧ್ಯಾಹ್ನ ಆಗಮಿಸಿದರು ಮತ್ತು ೮ ನೇ ತಾ. ಸಂಜೆ ಅಧಿವೇಶನದಲ್ಲಿ ಭಾಷಣಮಾಡಿ ವಿದ್ಯಾರ್ಥಿಗಳು ರಾಜಕೀಯದ ಗೊಡವೆಗೆ ಹೋಗಕೂಡದೆಂದೂ ಸಾಮಾಜಿಕ ನೈತಿಕ ಕ್ರಾಂತಿಯಾದ ಹೊರತು ದೇಶೋದ್ಧಾರವಾಗದೆಂದೂ ಅದಕ್ಕೆ ಯುವಕ ವಿದ್ಯಾರ್ಥಿಗಳೇ ನಡ ಕಟ್ಟಬೇಕೆಂದೂ ರಚನಾತ್ಮಕ ಕಾರ್ಯವೇ ತರಣೋಪಾಯವೆಂದೂ ಸಾರಿದರು. ಅಧಿವೇಶನಕ್ಕೆ ಮೈಸೂರಿನ ಮುಖ್ಯಪ್ರಧಾನರೇ ಮೊದಲಾದವರು ಬಂದಿದ್ದರು.

ಅಧಿವೇಶನದಲ್ಲಿ ಕಾಶ್ಮೀರದ ಬಗ್ಗೆ ಮತ್ತು ಪಾಕಿಸ್ತಾನ ವಿದ್ಯಾರ್ಥಿಗಳ ಬಗ್ಗೆ ಹೀಗೆ ಎರಡು ಗೊತ್ತುವಳಿಗಳು ಪಾಸಾದವು. ಸ್ವಾತಂತ್ರ್ಯಾನಂತರ ವಿದ್ಯಾರ್ಥಿ ಕಾಂಗ್ರೆಸ್ಸು ತನ್ನ ಚಟುವಟಿಕೆಗಳನ್ನು ಹಿಂದೀ ಒಕ್ಕೂಟಕ್ಕೆ ಮಾತ್ರ ನಿಯಮಿತಗೊಳಿಸಬೇಕೆಂದು ನಿರ್ಣಯವಾಯಿತು. ಕಾಶ್ಮೀರದ ವಿಷಯಕ್ಕೆ ಭಾರತ ಸರಕಾರವು ಕೈಕೊಂಡ ಕ್ರಮದ ಬಗ್ಗೆ ಸರಕಾರವನ್ನು ಅಭಿನಂದಿಸಲಾಯಿತು ಮತ್ತು ಯು. ರಾ. ಸಭೆಯ ಕಾಶ್ಮೀರ ಸಮಿತಿಗೆ ಭಾರತದ ತರುಣರು ಬಹಿಷ್ಕಾರಹಾಕಬೇಕೆಂದು ಗೊತ್ತುಪಾಡಲಾಯಿತು. ಕೊನೆಯ ದಿನ ವಿದ್ಯಾರ್ಥಿಗಳ ಚಟುವಟಿಕೆಗಳ ಪುನರ್ಯೋಜನೆಯ ಬಗ್ಗೆ ಮತಭೇದವಾಗಿ ವಿದ್ಯಾರ್ಥಿಗಳ ಕಾಂಗ್ರೆಸ್ಸಿನಲ್ಲಿ ಕೆಲವು ಬಣಗಳಾಗುವ ಪ್ರಸಂಗ ಬಂದಿತು. ಆದ್ದರಿಂದ ಅಧಿವೇಶನದ ಮುಕ್ತಾಯವು ತುಸು ಪ್ರಕ್ಷುಬ್ಧ ವಾತಾವರಣದಲ್ಲಿ ಆಯಿತೆಂದು ಹೇಳಬೇಕಾಗುತ್ತದೆ. ಆಂಧ್ರ ಮದ್ರಾಸ ಪಟ್ಟಣ ಮತ್ತು ದಿಲ್ಲಿ ಇವು ಈ ಕಾಂಗ್ರೆಸಿನ ಪರಲು ಹರಿದುಕೊಂಡವು.

ಹೊಸ ವರ್ಷಕ್ಕೆ ಅಧಿಕಾರಿ ವರ್ಗವನ್ನು ಆಯಲಾಯ್ತು ಶ್ರೀ ರವೀಂದ್ರವರ್ಮರೇ ಮತ್ತೆ ಅಧ್ಯಕ್ಷರಾಗಿ ಆಯ್ಕೆ ಹೊಂದಿದರು.

ಪ್ರೊ. ಭನಸಾಲಿಯವರ ಆಮರಣ ಉಪವಾಸ

ನಿಜಾಮ ಸೈನಿಕರು ಮತ್ತು ರಜಾಕಾರರು ನಡೆಸಿದ ಅತ್ಯಾಚಾರಗಳನ್ನೂ ಸ್ತ್ರೀ ಮಾನಭಂಗವನ್ನೂ ನಿಷೇಧಿಸುವದಕ್ಕಾಗಿ ಮಹಾತ್ಮಾ ಗಾಂಧಿಯವರ ಏಕನಿಷ್ಠ ಅನುಯಾಯಿಗಳಾದ ಪ್ರೊ. ಭನಸಾಲಿಯವರು ತಾ. ೧೦ರಿಂದ ಆಮರಣ ಉಪವಾಸ ಕೈಕೊಂಡಿದ್ದಾರೆ.

ರಜಾಕಾರರ ದಬ್ಬಾಳಿಕೆಯಿಂದ ಸ್ತ್ರೀಯರನ್ನು ಉಳಿಸಲೆಂದು ತಾ. ೯ಕ್ಕೆ ಪ್ರೊ. ಭನಸಾಲಿಯವರು ನಿಜಾಮ ಗಡಿಯಲ್ಲಿ ಹೋಗಿದ್ದರು. ಆದರೆ ನಿಜಾಮ ಪೋಲೀಸರು ಅವರನ್ನು ಬಲಾತ್ಕಾರದಿಂದ ಗಡಿಬಿಟ್ಟು ಹೊರದೂಡಿದರು. ಪ್ರೊ ಭನಸಾಲಿಯವರು ವಿಜಯವಾಡಕ್ಕೆ ಬಂದು ಉಪವಾಸ ಪ್ರಾರಂಭಿಸಿದರು. ಮತ್ತು ತಾ. ೧೧ರ ಸಂಜೆ ಗಾಡಿಗೆ ವರ್ಧಾಕ್ಕೆ ತೆರಳಿದರು. ನೂಲುವದರಲ್ಲಿಯೇ ಮೊದಲಿನ ೨ ದಿನ ಕಳೆದರು. ಆಗ ಬಳಲಿಕೆಯ ಲಕ್ಷಣ ಇರಲಿಲ್ಲ.

ನಿಜಾಮ ಸರಕಾರದವರು ಪ್ರಕಟನೆ ಹೊರಡಿಸಿ ತಮ್ಮ ಪೋಲೀಸರು ಅವರನ್ನು ಹೊರಗೆ ಹಾಕಲಿಲ್ಲೆಂದೂ ಸ್ತ್ರೀ ಮಾನಭಂಗ ಮೊದಲಾದ್ದು ಸುಳ್ಳೆಂದು ವಿಚಾರಾಂತ್ಯದಲ್ಲಿ ತಿಳಿದುಬಂದಿದೆಂದೂ ಸಾರಿದ್ದಾರೆ.

ಭಾರತದ ರಾಜ್ಯಘಟನೆಯ ರೂಪರೇಷೆಗಳು

ಘಟನಾ ಕರಡಿನ ಬಗ್ಗೆ ಪ್ರೊ. ವೆಂಕಟರಂಗಯ್ಯನವರ ವಿಚಾರಗಳು

ನಾಳೆ ಅಕ್ಟೋಬರದಲ್ಲಿ ಕೂಡಲಿರುವ ಹಿಂದೀ ಘಟನಾ ಸಮಿತಿಯ ಅಧಿವೇಶನದಲ್ಲಿ ನಮ್ಮ ಭಾವೀ ರಾಜ್ಯಘಟನೆಯ ಬಗ್ಗೆ ಕೊನೆಯ ನಿರ್ಣಯವಾಗುವದೆಂದು ತೋರುತ್ತದೆ. ಈ ಬಗ್ಗೆ ಅಂಬೇಡಕರ ಸಮಿತಿಯವರು ಸಿದ್ಧಗೊಳಿಸಿದ ಘಟನೆಯ ಕರಡು ಈಗ ಕೆಲ ವಾರಗಳಿಂದ ಜನತೆಯ ಮುಂದಿದೆ. ಪ್ರಸಿದ್ಧ ರಾಜಕಾರಣಶಾಸ್ತ್ರಿಗಳಾದ ಶ್ರೀ ವೆಂಕಟರಂಗ ಅಯ್ಯಂಗಾರರು ಈ ಕರಡನ್ನು ಕೂಲಂಕಷವಾಗಿ ಅಭ್ಯಸಿಸಿ ಅದರ ಬಗ್ಗೆ ತಮ್ಮ ವಿಚಾರಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಿದ್ದಾರೆ.* ನಮ್ಮ ಓದುಗರಿಗೆ ಭಾರತ ರಾಜ್ಯಘಟನೆಯ ಕರಡಿನ ಸ್ಥೂಲ ಪರಿಚಯವಾಗಲೆಂದು ಆ ಪುಸ್ತಕದ ಸಾರವನ್ನು ಎರಡು ಲೇಖಾಂಕಗಳಲ್ಲಿ ಪ್ರಕಟಿಸಲಾಗುವದು. ಕೊನೆಯಲ್ಲಿ ನಮ್ಮ ಅಭಿಪ್ರಾಯವನ್ನು ಉಲ್ಲೇಖಿಸುವೆವು.

[ಲೇಖಾಂಕ ೧]

ಭಾರತದ ಭಾವೀ ರಾಜ್ಯಪದ್ಧತಿಯನ್ನು ವಿಧಿಸುವ ರಾಜ್ಯಘಟನೆಯ ಕರಡು ಅಂಬೇಡಕರ ಸಮಿತಿಯವರಿಂದ ಸಿದ್ಧಗೊಳಿಸಲ್ಪಟ್ಟು ಪ್ರಕಟವಾಗಿದೆ. ಕೇವಲ ಹಿಂದೀಯರಿಂದಲೇ ತುಂಬಿರುವ ಸರ್ವತಂತ್ರ ಸ್ವತಂತ್ರ ಘಟನಾ ಸಮಿತಿಯೊಂದು ಇದನ್ನು ಸಿದ್ಧಗೊಳಿಸಿದೆ- ಇದೇ ಆ ಘಟನೆಯಲ್ಲಿರುವ ಐತಿಹಾಸಿಕ ವೈಶಿಷ್ಟ್ಯ. ಭಾರತದಲ್ಲಿ ಸ್ವಾತಂತ್ರ್ಯದ ಆಕಾಂಕ್ಷೆ ಮೂಡಿದಂದಿನಿಂದಲೂ ಈ ದೇಶದ ಘಟನಾತ್ಮಕ ಪ್ರಗತಿ ಮುಖ್ಯವಾಗಿ ಬ್ರಿಟಿಶ ಪಾರ್ಲಿಮೆಂಟಿನ ಹೊಣೆಯಿಂದೇ ಬ್ರಿಟಿಶರು ಸಾಧಿಸುತ್ತ ಬಂದಿದ್ದರು. ವೈಸರಾಯ ಲಿನ್‌ಲಿತ್‌ಗೋರ (೧೯೪೦) ಆಗಸ್ಟ ಘೋಷಣೆಯಲ್ಲಿ ಕೂಡ ಇದೇ ಮಾತನ್ನು ಪುನರುಚ್ಚರಿಸಲಾಗಿತ್ತು. ಆದರೆ ೧೯೪೨ ರ ಚಳವಳಿಯ ಸ್ವರೂಪ, ಭಾರತೀಯ ಸೈನ್ಯ ಮತ್ತು ನೌಕಾಪಡೆಯಲ್ಲಾದ ಬಂಡಾಯಗಳು ಮೊದಲಾದ ಘಟನೆಗಳಿಂದ ಬ್ರಿಟಿಶರಿಗೆ ಇನ್ನು ಈ ದೇಶವನ್ನು ಹಿಡಿತದಲ್ಲಿಟ್ಟುಕೊಳ್ಳುವದು ಅಸಾಧ್ಯವೆಂದು ಮನವರಿಕೆಯಾಗಿಹೋಯಿತು. ಜಗತ್ತಿನಲ್ಲಿ ಬ್ರಿಟಿಶ ಪ್ರಾಬಲ್ಯ ಕಡಿಮೆಯಾದುದೇ



ಡಾ. ಅಂಬೇಡಕರ
ಕರಡಿನ ಸಮಿತಿಯ ಅಧ್ಯಕ್ಷರು

ಮೊದಲಾದ ಯುದ್ಧಜನ್ಯ ವಿದ್ಯಮಾನಗಳೂ ಬ್ರಿಟಿಶರ ಮನೋವೃತ್ತಿ ಬದಲಾಗಲು ಕಾರಣವಾದವು. ಬ್ರಿಟಿಶ ಮಂತ್ರಿತ್ರಯ ಯೋಜನೆಯನ್ವಯ ೧೯೪೬ ರಲ್ಲಿ ಭಾರತದ ಭವಿತವ್ಯ ನಿರ್ಣಯಕ್ಕಾಗಿ ಒಂದು ಘಟನಾ ಸಮಿತಿಯನ್ನು ಅಸ್ತಿತ್ವದಲ್ಲಿ ತರಲು ಬ್ರಿಟನ್ನು ಒಪ್ಪಿ ಭಾರತದ ಸ್ವಯಂನಿರ್ಣಯಾಧಿಕಾರಕ್ಕೆ ಮನ್ನಣೆಯೀಯಿತು.

ಸರ್ವತಂತ್ರ ಸ್ವತಂತ್ರ, ಅಶೇಷ-ಭಾರತೀಯ ಘಟನಾ ಸಮಿತಿಯದು ಸಿದ್ಧಗೊಳಿಸಿದ ಈ ಘಟನೆಯ ಕರಡಿನಲ್ಲಿ, ವಿಚಿತ್ರನೆನಿಸುವಂತೆ, ''ಸ್ವದೇಶಿ'' ಅಂಶವೇನೂ ಇಲ್ಲವೆಂದು ಹೇಳಬಹುದು. ಗಾಂಧೀಜಿಯವರು ಪದೇ ಪದೇ ಒತ್ತಿ ಬರೆಯುತ್ತಿದ್ದ ''ಪಂಚಾಯತ ರಾಜ್ಯ''ದ ಕುರುಹುಗಳೂ ಇದರಲ್ಲಿ ಕಾಣಿಸುವದಿಲ್ಲ. ಅಮೇರಿಕೆಯ ಸಂಯುಕ್ತ ಸಂಸ್ಥಾನ, ಕೆನಡಾ, ಆಸ್ಟ್ರೇಲಿಯ, ಆಯರ್ಲಂಡ, ಮೊದಲಾದ ದೇಶಗಳ ಘಟನೆಗಳಿಂದಲೂ ಅವಕ್ಕಿಂತ ಹೆಚ್ಚಾಗಿ ೧೯೩೫ ರ ಹಿಂದುಸ್ತಾನ ಕಾಯಿದೆಯಿಂದಲೂ ಅನೇಕ ಅಂಶಗಳನ್ನು ಇದ್ದಕ್ಕಿದ್ದಂತೆ ಇದರಲ್ಲಿ ಸೇರಿಸಿಕೊಂಡದ್ದುಂಟು. ಅನುಭವದಿಂದ ಉಪಯುಕ್ತವೆಂದು ಸಿದ್ಧವಾದ ವಿಷಯಗಳನ್ನು ಆರಿಸಿಕೊಳ್ಳುವದರಲ್ಲಿ ಯಾವ ತಪ್ಪೂ ಇಲ್ಲ. ಹೊಸ ಮಾದರಿಯ ರಾಜ್ಯಘಟನೆಗಳನ್ನು ನಿರ್ಮಿಸುವದರಲ್ಲಿ ನಿಜವಾಗಿ ಮನುಷ್ಯಬುದ್ಧಿಶಕ್ತಿ ತೀರ ಮಿತವಾಗಿದೆ. ಆದರೆ ಈ ಘಟನೆಗೆ ಕಾರಣರಾದ ಮುಂದಾಳುಗಳೆಲ್ಲರೂ ಪಾಶ್ಚಿಮಾತ್ಯ ರಾಜಕೀಯ ವಿಚಾರಗಳನ್ನೇ ಮೈಗೂಡಿಸಿಕೊಂಡವರು. ''ಸ್ವದೇಶಿ'' ರೂಪದ ಘಟನೆಯನ್ನು ಸಿದ್ಧಗೊಳಿಸುವದು ಅವರಿಗೆ ಸಾಧ್ಯವೇ ಇದ್ದಿಲ್ಲವೆಂಬದನ್ನು ನಾವು ಮರೆಯಕೂಡದು.

ಸಾರ್ವಭೌಮ, ಪ್ರಜಾತಂತ್ರಾತ್ಮಕ ಪ್ರಜಾರಾಜ್ಯ

೧೮ ವಿಭಾಗಗಳೂ ೩೧೫ ಕಲಮುಗಳೂ ೮ ಪರಿಶಿಷ್ಟಗಳೂ ಉಳ್ಳ ಅಂಬೇಡಕರ ಘಟನಾ ಕರಡು ಸ್ವತಂತ್ರ ಭಾರತದ ರಾಜ್ಯಾಡಳಿತ ಹೇಗಿರಬಹುದೆಂಬ ಸ್ಥೂಲವಾದ ಕಲ್ಪನೆಯನ್ನು ಕೊಡುವಷ್ಟು ಪೂರ್ಣವಾಗಿದೆ. ಕೇಂದ್ರ ಮತ್ತು ಪ್ರಾಂತಿಕ ಆಡಳಿತೆ, ನಾಗರಿಕರ ಮೂಲಭೂತ ಹಕ್ಕುಗಳು, ರಾಜನೀತಿಯ ಮೂಲತತ್ವಗಳು ಇವುಗಳನ್ನು ವಿವರವಾಗಿ ನಿರ್ದೇಶಿಸಲಾಗಿದೆ. ಆದರೆ ಮತದಾರ ಸಂಘಗಳ ಗಡಿಗಳೇ ಮೊದಲಾದ ಅನೇಕ ಮಹತ್ವದ ವಿಷಯಗಳಲ್ಲಿ ಬೇರೆಯೆ ಪೂರಕ ಕಾಯಿದೆಗಳಾಗಬೇಕಾಗಿವೆ. ಕೇಂದ್ರ ಮತ್ತು ಘಟಕಗಳ ನಡುವೆ ತೆರಿಗೆಯ ಹಂಚುವಿಕೆಯೂ ನಿರ್ಧರಿಸಲ್ಪಟ್ಟಿಲ್ಲ. ೫ ವರ್ಷಗಳ ವರೆಗೆ ಈಗಿದ್ದ ಪದ್ಧತಿಯೆ ಉಳಿಯಬೇಕೆಂದೂ ಆಮೇಲೆ ಅದನ್ನು ಪುನರ್ವಿಮರ್ಶಿಸಬೇಕೆಂದೂ ಸೂಚಿಸಲಾಗಿದೆ.

ಹಿಂದುಸ್ತಾನ "ಸಾರ್ವಭೌಮ ಪ್ರಜಾತಂತ್ರಾತ್ಮಕ ಪ್ರಜಾರಾಜ್ಯ''ವಾಗುವದೆಂದು ಕರಡಿನಲ್ಲಿ ನಿರ್ದೇಶಿಸಲಾಗಿದೆ. ''ಸಾರ್ವಭೌಮ'' ಶಬ್ದದಿಂದ ಅದು ಈ ವರೆಗಿನಂತೆ ಬ್ರಿಟಿಶರಿಗೆ ಅಧೀನವಾಗಿ ಉಳಿಯದೆ ಸರ್ವತಂತ್ರ ಸ್ವತಂತ್ರವಾಗುವದೆಂದು ಅರ್ಥವಾಗುವದು. ''ಪ್ರಜಾತಂತ್ರಾತ್ಮಕ"ವೆಂದರೆ ಫ್ಯಾಸಿಸ್ಟ ಅಥವಾ ಕಮ್ಯುನಿಸ್ಟ ಪ್ರತಿಯ ಸರ್ವಾಧಿಕಾರ ಪದ್ಧತಿಯನ್ನು ತಿರಸ್ಕರಿಸಿ ವ್ಯಕ್ತಿಗಿರುವ ಅನಪಹಾರ್ಯ ಸ್ವಾತಂತ್ರ್ಯಗಳನ್ನು ಒಪ್ಪಿಕೊಳ್ಳಲಾಗಿದೆಯೆಂದು ತಾತ್ಪರ್ಯ. ರಾಜಕೀಯ ಪಕ್ಷಗಳನ್ನು ಬೇಕಾದಷ್ಟು ಸಂಘಟಿಸಿ ಸರಕಾರವನ್ನು ಟೀಕಿಸುವದು, ಕಾಲಕಾಲಕ್ಕೆ ಜರಗುವ ಚುನಾವಣೆಗಳ ಮೂಲಕ ತಮಗೆ ಬೇಕಾದ ಪಕ್ಷದ ಸರಕಾರವನ್ನು ಅಧಿಕಾರಕ್ಕೆ ತರುವದೇ ಮೊದಲಾದ ಹಕ್ಕುಗಳು ಇದರಿಂದ ಪ್ರಜೆಗಳಿಗೆ ಸಿಕ್ಕುವವು. ಪಂ. ನೆಹರೂ ಅವರು ಮೊದಲು ಮುಂಡಿಸಿದ ಧ್ಯೇಯನಿರೂಪಕ ಗೊತ್ತುವಳಿಯಲ್ಲಿ ''ಸಾರ್ವಭೌಮ ಸ್ವತಂತ್ರ ಪ್ರಜಾರಾಜ್ಯ"ವೆಂದಿದ್ದದ್ದನ್ನು ಬದಲಿಸಿ ಕರಡು ಬರೆದವರು, ''ಸಾರ್ವಭೌಮ'' ಶಬ್ದದಲ್ಲಿ ''ಸ್ವತಂತ್ರ'' ಶಬ್ದದ ತಾತ್ಪರ್ಯ ಅಡಕವಾಗಿರುವದರಿಂದ ಅದನ್ನು ಬಿಟ್ಟು ''ಪ್ರಜಾತಂತ್ರಾತ್ಮಕ''ಶಬ್ದವನ್ನು ಇಟ್ಟರು. ಈ ಮೂಲಕ ಘಟನಾ ನಿರ್ಮಾಪಕರು ಪ್ರಜೆಗಳ "ತಂತ್ರ"ಕ್ಕೆ ಮನ್ನಣೆಕೊಟ್ಟಿದ್ದಾರೆ. ''ಪ್ರಜಾರಾಜ್ಯ''ದಿಂದ ಯಾವದೇ ಬಗೆಯ ಅರಸೊತ್ತಿಗೆಗೆ ಅವಕಾಶವಿಲ್ಲವೆಂದು ಸೂಚಿತವಾಗಿದೆ.

ಡಾ. ಅಂಬೇಡಕರರ ಅಭಿಪ್ರಾಯದಲ್ಲಿ ''ಪ್ರಜಾರಾಜ್ಯ"ದ ಬದಲು ಬರಿ ''ರಾಜ್ಯ" ಎಂದಿರಬೇಕಂತೆ. "ಪ್ರಜಾರಾಜ್ಯ" ಶಬ್ದದಿಂದ ನಮಗೆ ರಾಜಸತ್ತಾತ್ಮಕ ಬ್ರಿಟಿಶ ಸಾಮ್ರಾಜ್ಯದೊಡನೆ ಸಂಬಂಧ ತಪ್ಪಿ ಹೋದೀತೆಂದು ಅವರ ಸಂಶಯ. ಇದು ಅಕಾರಣ. ಸಾಮ್ರಾಜ್ಯದಿಂದ ಹೊರಬೀಳುವ ಹಕ್ಕು ಭಾರತಕ್ಕೆ ಕೊಡಲ್ಪಟ್ಟದೆ ಮಾತ್ರವಲ್ಲ. ಹೊರಬಿದ್ದರೂ ಇಂಗ್ಲಂಡಿನೊಡನೆ ಒಪ್ಪಂದ ಮೂಲಕ ಸಂಬಂಧವಿಟ್ಟುಕೊಂಡು ಎಲ್ಲ ಸೌಕರ್ಯಗಳನ್ನೂ ಪಡೆಯಲು ಯಾವ ಆತಂಕವೂ ಇಲ್ಲ. ಮೇಲಾಗಿ ಕಾಶ್ಮೀರ ಮತ್ತು ದಕ್ಷಿಣ ಆಫ್ರಿಕೆಯ ವಿಷಯದಲ್ಲಿ ಬ್ರಿಟಿಶ ಸರಕಾರದ ಚರ್ಯೆಯನ್ನು ನೋಡಿದರೆ ಸಾಮ್ರಾಜ್ಯದೊಳಗೆ ಉಳಿಯುವದರಿಂದ ಲಾಭಕ್ಕಿಂತ ಹಾನಿಯೇ ಹೆಚ್ಚಾಗಿದೆಯೆಂದು ತೋರುತ್ತದೆ.

ಭಾರತದ ಒಕ್ಕೂಟವೊಂದು ಸಂಯುಕ್ತ ರಾಜ್ಯ

ಭಾರತವು "ಸಂಸ್ಥಾನಗಳ ಒಕ್ಕೂಟ" ವಾಗಲಿದೆಯೆಂದು ಕರಡಿನಲ್ಲಿ ನಿರ್ದೇಶಿಸಲಾಗಿದೆ. ಆದರೆ ಘಟನೆಯ ಕಲಮುಗಳಲ್ಲಿ ಸಂಯುಕ್ತ ರಾಜ್ಯ (ಫೆಡರಲ್) ದ ಎಲ್ಲ ಲಕ್ಷಣಗಳೂ ಇವೆ. ಅವರೂ ಅದನ್ನು ಸಂಯುಕ್ತ ಒಕ್ಕೂಟವೆಂದು ಉಲ್ಲೇಖಿಸಲ್ಪಡದುದಕ್ಕೆ ಕರಡಿನ ಸಮಿತಿಯವರು ಕೊಟ್ಟ ಕಾರಣ ಅಷ್ಟು ಸಮಂಜಸವಾಗಿಲ್ಲ. ಕೆನಡಾದ ಘಟನೆಯ ಮಾರ್ಗವನ್ನು ಇಲ್ಲಿ ಅನುಸರಿಸಲಾಗಿದೆಯೆಂದು ಹೇಳಲಾಗಿದೆ. ಆದರೆ ಇದು ಸರಿಯಲ್ಲ. ಬರಿ ಒಕ್ಕೂಟವೆಂದು ನಿರ್ದೇಶಿಸುವಲ್ಲಿ ಸಮಿತಿಯವರ ಅಭಿಪ್ರಾಯ, ಕಾಲಾಂತರದಲ್ಲಿ ಈ ದೇಶವನ್ನು ಕೇಂದ್ರೀಕೃತ ರಾಜ್ಯಪದ್ಧತಿಗೆ (ಯುನಿಟರಿ) ಒಳಪಡಿಸಬೇಕೆಂದಿದಬಹುದು. ಆದರೆ ಅನೇಕ ಸಾಂಸ್ಕೃತಿಕ ಉಪರಾಷ್ಟ್ರಗಳಿಂದೊಡಗೂಡಿದ ಭಾರತದಲ್ಲಿ ಘಟಕಗಳಿಗೆ ಸ್ವಲ್ಪ ಮಟ್ಟಿಗಾದರೂ ಸ್ವಾಯತ್ತತೆ ಇರುವದವಶ್ಯ. "ಸಂಯುಕ್ತ" ಶಬ್ದದ ಪ್ರಯೋಗ ಮಾಡಿದರೇ ಒಳಿತೆಂದು ಇದರಿಂದ ಸ್ಪಷ್ಟವಾಗುತ್ತದೆ.

ಹಿಂದೀ ಒಕ್ಕೂಟದ ಘಟಕಗಳಿಗೆ "ಸಂಸ್ಥಾನಗಳು" ಎಂದು ಹೆಸರಿಡಲಾಗಿದೆ. ನರೇಂದ್ರರ ಸಂಸ್ಥಾನಗಳಿಗೆ (ಹಿಂದೀ) ಸಂಸ್ಥಾನಗಳೆಂದೂ ಈಗಿನ ಪ್ರಾಂತಗಳಿಗೆ ಬರಿ ಸಂಸ್ಥಾನಗಳೆಂದೂ ಹೆಸರು. ಹೀಗೆ ಘಟಕಗಳಿಗೆಲ್ಲ ಒಂದೇ ಹೆಸರಿಟ್ಟದ್ದು ಐಕ್ಯದ ದೃಷ್ಟಿಯಿಂದ ಯೋಗ್ಯವಾಗಿದ್ದರೂ ಈ ಎರಡರ ಅಧಿಕಾರಗಳ ವಿಷಯದಲ್ಲಿ



ಶ್ರೀ ಕೆ. ಎಂ. ಮುನಷಿ
ಘಟನೆಯನ್ನು ಸಿದ್ಧಗೊಳಿಸಿದವರಲ್ಲೊಬ್ಬರು

ಭೇದ ಮಾಡಲಾಗಿದೆ. ಇಂಥ ಭೇದ ಮಾಡಲಾಗಿದೆಯೆಂದು ೧೯೩೫ರ ಕಾಯಿದೆಯನ್ನು ವಿರೋಧಿಸಿದ ಕಾಂಗ್ರೆಸ್ಸು ಈಗ ಅದನ್ನೇ ಹೊಸ ಘಟನೆಯಲ್ಲಿ ಉಳಿಸಿದ್ದು ಶ್ಲಾಘನೀಯವಲ್ಲ.

ಎಲ್ಲ ಸಂಯುಕ್ತ ರಾಜ್ಯ ಪದ್ಧತಿಗಳಲ್ಲಿರುವಂತೆ, ಕೇಂದ್ರ ಮತ್ತು ಘಟಕಗಳ ನಡುವೆ ಅಧಿಕಾರಗಳ ವರ್ಗೀಕರಣದ ಮೂರು ಯಾದಿಗಳು ಈ ಕರಡಿನಲ್ಲಿವೆ. ಸಂರಕ್ಷಣ, ವಿದೇಶ ಸಂಬಂಧವೇ ಮೊದಲಾದ ೯೧ ವಿಷಯಗಳು ಸಂಪೂರ್ಣ ಕೇಂದ್ರದ ಕಕ್ಷೆಯಲ್ಲಿಯೂ ಸಾರ್ವಜನಿಕ ಶಾಂತಿ ಸುವ್ಯವಸ್ಥೆ, ಶಿಕ್ಷಣವೇ ಮೊದಲಾದ ೬೬ ವಿಷಯಗಳು ಸಂಸ್ಥಾನಗಳ (ಘಟಕಗಳ) ಕಕ್ಷೆಯಲ್ಲಿಯೂ ಕ್ರಿಮಿನಲ್ ಕಾಯದೆ, ಯೋಜನೆ ಮೊದಲಾದ ೩೭ ವಿಷಯಗಳು ಉಭಯ ಸಾಮಾನ್ಯ ಅಧಿಕಾರಕ್ಕೂ ಒಳಪಟ್ಟಿವೆ. ಉಭಯ ಸಾಮಾನ್ಯ ವಿಷಯಗಳಲ್ಲಿ ಘಟಕಗಳ ಕಾಯದೆಗಳು ಒಕ್ಕೂಟದ ಕಾಯದೆಗಳಿಗೆ ವಿರುದ್ಧವಾಗಿದ್ದರೆ ಘಟಕಗಳವು ರದ್ದಾಗುವವು. ಈ ಯಾದಿಗಳಲ್ಲಿ ಬದಲಾವಣೆ ಮಾಡಬೇಕಾದರೆ ಕೇಂದ್ರ ಮತ್ತು ಸಂಸ್ಥಾನಗಳೆರಡರ ಶಾಸನ ಸಭೆಗಳೂ ಒಪ್ಪಿ ಘಟನೆಯನ್ನೇ ತಿದ್ದಬೇಕು. ಅಲ್ಲದೆ ವರಿಷ್ಠ ನ್ಯಾಯಾಲಯಕ್ಕೆ ಕೇಂದ್ರ — ಘಟಕಗಳ ನಡುವೆ

—೬ನೇ ಪುಟಕ್ಕೆ



ಬ್ರಿ. ಉದ್ಯಾನದ [illegible]



ಲೇಡಿ ರಾಮರಾಯರನ್ನು (ರಾಯಭಾರಿ ಸರ್ ಬೆನಗಲ್ ರಾಮರಾಯರ ಪತ್ನಿ)
ಮುಂಬಯಿ ಮಹಿಳಾ ಸಂಘದವರು ಬೀಳ್ಕೊಟ್ಟಾಗಿನ ಚಿತ್ರ

★ *Draft Constitution of India* By Prof Venkatarangaiya M. A. (HIND KITABS Ltd., BOMBAY) 90 Pp. Rs. 2/8

ವಿವಿಧ ಪ್ರಪಂಚ

ಭಾರತದ ರಾಜ್ಯಘಟನೆಯ ರೂಪರೇಷೆಗಳು

(೫ ನೆಯ ಪುಟದಿಂದ)

ಇಟ್ಟುಕೊಂಡಾಗ ತಮ್ಮ ತೇಕುವ ಅಧಿಕಾರ ಕೊಡಲ್ಪಟ್ಟಿರುವದರಿಂದ ಕೇಂದ್ರದವರು ಮನಬಂದಂತೆ ಘಟಕಗಳ ಅಧಿಕಾರಗಳನ್ನು ಅಪಹರಿಸುವ ಭಯವಿಲ್ಲ. ಕೇಂದ್ರ ಶಾಸನ ಸಭೆಯಲ್ಲಿ ಎರಡು ಮನೆಗಳಿಷ್ಟು ಮೇಲ್ಮನೆ (ಸಂಸ್ಥಾನಗಳ ಮಂಡಳ) ಯಲ್ಲಿ ಸಂಸ್ಥಾನ (ಘಟಕ)ಗಳ ಪ್ರತಿನಿಧಿಗಳಿರುವದರಿಂದಲೂ ಕೇಂದ್ರದಲ್ಲಿ ಘಟಕಗಳಿಗೆ ಪ್ರಾತಿನಿಧ್ಯ ದೊರೆತಂತಾಗಿದೆ. ಆದರೆ ಈ ಮೇಲ್ಮನೆಯಲ್ಲಿ ಘಟಕಗಳಿಗೆ ಯಾವ ಆಧಾರದ ಮೇಲೆ ಅವುಗಳ ಜನಸಂಖ್ಯಾನುಗುಣವಾಗಿಯೋ ಪ್ರತಿಯೊಂದು ಘಟಕಕ್ಕೆ ಇಷ್ಟೆಂದೋ—ಪ್ರಾತಿನಿಧ್ಯ ಕೊಡಲಾಗುವದೆಂದು ಹೇಳಿಲ್ಲ. ಇದೊಂದು ಕೊರತೆ. ಅಲ್ಲದೆ ನರೇಂದ್ರರ ಸಂಸ್ಥಾನಗಳಿಗೆ "ನೂರಕ್ಕೆ ४೦ ಕ್ಕಿಂತಹೆಚ್ಚಾಗದಷ್ಟು" ಪ್ರಾತಿನಿಧ್ಯ ಕೊಟ್ಟು ಅವುಗಳನ್ನು ಪ್ರಟಿಕರಂತೆ ವಿಶಿಷ್ಟ ರೀತಿಯಿಂದ ನಡೆಸಿಕೊಂಡದ್ದು ಶ್ರೇಯಸ್ಕರವಲ್ಲ.

ಕೇಂದ್ರಕ್ಕೆ ಸೇರಿದ ಅಧಿಕಾರಗಳನ್ನು ನಡೆಸುವ ಬಗ್ಗೆ ಘಟಕಗಳಲ್ಲಿ— ಈಗ ಉತ್ಪನ್ನ ತೆರಿಗೆ ರೇಲ್ವೆ ಮೊದಲಾದ ಖಾತೆಗಳಿಗಿರುವಂತೆ— ಪ್ರತ್ಯೇಕ ಆಡಳಿತ ವ್ಯವಸ್ಥೆಯಿರುವದಲ್ಲದೆ ಅವಶ್ಯವಿದ್ದಾಗ ಘಟಕಗಳ ಆಡಳಿತಾಧಿಕಾರಿಗಳನ್ನೂ ಉಪಯೋಗಿಸಿಕೊಳ್ಳುವ ಅಧಿಕಾರ ಕೇಂದ್ರಕ್ಕಿದೆ. ನ್ಯಾಯಸ್ಥಾನಗಳು ಮಾತ್ರ ಬೇರೆ ಬೇರೆ ಇಲ್ಲ. ಘಟಕಗಳ ಹೈಕೋರ್ಟ್‌ಗಳನ್ನೇ ಕೇಂದ್ರವೂ ಉಪಯೋಗಿಸುವದು. ಆದರೆ ಹೈಕೋರ್ಟ್‌ಗಳ ಮುಖ್ಯ ನ್ಯಾಯಾಧೀಶರ ನೇಮಕ ಕೇಂದ್ರದಲ್ಲಿರುವ ಅಧ್ಯಕ್ಷನ ಕೈಯಲ್ಲಿರುವದರಿಂದ ಈ ನ್ಯಾಯಸ್ಥಾನಗಳು ಕೇಂದ್ರವನ್ನು ಕಡೆಗಣಿಸಿ ಘಟಕಗಳನ್ನೇ ಎತ್ತಿಹಿಡಿಯುವ ಭಯವಿಲ್ಲ. ಪ್ರತಿಯೊಂದು ಘಟಕಕ್ಕೊಂದು ಹೈಕೋರ್ಟ್ ಇದ್ದೇ ತೀರಬೇಕೆಂದು ಸ್ಪಷ್ಟವಾಗಿ ಹೇಳಿರದಿದ್ದುದರಿಂದ ಮಾತ್ರ ಕೆಲ ಘಟಕಗಳು ಹೈಕೋರ್ಟೇ ಇಲ್ಲದಂತೆ ಮಾಡಿ ಸ್ವೇಚ್ಛೆಯಂತೆ ನಡೆಯುವ ಗಂಡಾಂತರವುಂಟು.

ತೆರಿಗೆಗಳ ಪಾಲಿನ ವಿಷಯದಲ್ಲಿ ಮೊದಲೇ ಹೇಳಿದಂತೆ ೫ ವರ್ಷಗಳ ವರೆಗೆ ಸದ್ಯದ ಕ್ರಮವೇ ಮುಂದುವರಿಯುವದು. ಆದರೆ ಈಗಿರುವ ವ್ಯವಸ್ಥೆ ಅಸಮಂಜಸವಾಗಿಲ್ಲವಾದುದರಿಂದ ಘಟಕಗಳಿಗೆ ದೂರಿಕೊಳ್ಳಲೆಡೆಯಿಲ್ಲ.

ಕೇಂದ್ರ ಮತ್ತು ಘಟಕಗಳ ನಡುವೆ ಅಧಿಕಾರಗಳ ವರ್ಗೀಕರಣವೂ ಯೋಗ್ಯರೀತಿಯಲ್ಲೇ ಆಗಿದೆ.

ಆದರೆ ಈ ಭಾಗದಲ್ಲಿ ಒಂದೆರಡು ಮುಖ್ಯ ದೋಷಗಳನ್ನು ತೋರಿಸಬಹುದು. ಯಾವುದಾದರೊಂದು ವಿಷಯ ರಾಷ್ಟ್ರೀಯ ಮಹತ್ವಕ್ಕೇರಿತೆಂದರೆ ಆ ವಿಷಯ ಘಟಕಗಳ ಅಧಿಕಾರ ಕಕ್ಷೆಯೊಳಗೆ ಬಂದಿದ್ದರೂ ಘಟಕಗಳ ಒಪ್ಪಿಗೆಯಿಲ್ಲದೆ ಒಕ್ಕೂಟ ಪಾರ್ಲಿಮೆಂಟಿನ ಮೇಲ್ಮನೆಯವರು ೨/೩ ಅಂಶ ಬಹುಮತದಿಂದ ಅದರ ಬಗ್ಗೆ ಕಾಯದೆ ಮಾಡಬಹುದೆಂದು ಹೇಳಲಾಗಿದೆ; ಮೇಲ್ಮನೆ ಘಟಕಗಳ ಪ್ರತಿನಿಧಿಯೆಂದು ಭಾವಿಸಲ್ಪಟ್ಟಿದ್ದರೂ ಇದು ಘಟನೆಯ ತಿದ್ದುಪಡಿಯಿಲ್ಲದೆ ಘಟಕಗಳ ಅಧಿಕಾರವನ್ನು ಕಸಿದುಕೊಳ್ಳಲು ಕೇಂದ್ರಕ್ಕೆ ಅವಕಾಶ ಮಾಡಿಕೊಡಬಹುದು. ಗಂಡಾಂತರ ಕಾಲದಲ್ಲಿ ಇಂಥ ಕ್ರಮ ಕೈಕೊಳ್ಳಲು ಕೇಂದ್ರಕ್ಕೆ ವಿಶೇಷಾಧಿಕಾರವಿದ್ದೇ ಇದೆ. ಸಾಮಾನ್ಯ ಕಾಲದಲ್ಲಿ ಘಟನೆಯನ್ನೇ ಬದಲು ಮಾಡಲು ಸಾಕಷ್ಟು ಸಮಯವಿರುವದು. ಹೀಗಿರುವಾಗ ಈ ಕಲಮು ಅನವಶ್ಯಕ.

ಇನ್ನು ಗವರ್ನರ ಸಂಸ್ಥಾನಗಳಿಗೂ (ಈಗಿನ ಪ್ರಾಂತಗಳು) ನರೇಂದ್ರ ಸಂಸ್ಥಾನಗಳಿಗೂ ನಡುವೆ ಪಂಕ್ತಿಭೇದ ಮಾಡಿದ್ದು ದೊಡ್ಡ ಅಪಾಯ. ನರೇಂದ್ರ ಸಂಸ್ಥಾನಗಳು ಕೇಂದ್ರದೊಡನೆ ಮಾಡಿಕೊಂಡ ಒಪ್ಪಂದಗಳ ಮೂಲಕ ಅವು ಕೇಂದ್ರಕ್ಕೆ ಕೊಡಬಹುದಾದ ಅಧಿಕಾರಗಳಷ್ಟೇ ಕೇಂದ್ರಕ್ಕೆ ಬರುವವು; ಉಳಿದವು ಆಯಾ ಘಟಕಗಳಿಗೇ ಉಳಿಯುವವೆಂದು ವಿಧಿಸಲಾಗಿದೆ. ನರೇಂದ್ರ ಸಂಸ್ಥಾನಗಳೆಲ್ಲ ಒಂದೇ ರೀತಿಯ ಅಧಿಕಾರಗಳನ್ನು ಬಿಟ್ಟು ಕೊಡಲಿಕ್ಕಿಲ್ಲ. ಒಂದು ಹೆಚ್ಚಿಗೆ ಬಿಡಬಹುದು, ಇನ್ನೊಂದು ಕಡಿಮೆ ಬಿಡಬಹುದು. ಅದಕ್ಕೆ ಹೊಸ ಘಟನೆಯ ಒಕ್ಕೂಟದಲ್ಲಿ ಸೇರದಿರಬಹುದಾದ ಅಧಿಕಾರವುಂಟು. ನರೇಂದ್ರಸಂಸ್ಥಾನಗಳು ಪ್ರತ್ಯೇಕ ಘಟನಾಸಮಿತಿಯ ಮೂಲಕ ತಮ್ಮ ಘಟನೆಯನ್ನು ನಿರ್ಮಿಸಿಕೊಳ್ಳುತ್ತವೆ. ಗವರ್ನರ ಪ್ರಾಂತಗಳು ಮಾತ್ರ ಭಾರತ ಘಟನಾ ಸಮಿತಿ ಸಿದ್ಧಪಡಿಸಿದ ಘಟನೆಯನ್ನೇ ಸ್ವೀಕರಿಸಬೇಕು. ಹೀಗೆ ಗವರ್ನರ ಸಂಸ್ಥಾನ ಮತ್ತು ನರೇಂದ್ರಸಂಸ್ಥಾನಗಳ ನಡುವೆ ಮಾತ್ರವಲ್ಲ, ಒಬ್ಬ ನರೇಂದ್ರರ ಸಂಸ್ಥಾನ ಮತ್ತು ಇನ್ನೊಬ್ಬರ ಸಂಸ್ಥಾನಗಳ ನಡುವೆ ಕೂಡ ಭಿನ್ನತೆಗಳಿರುವ ಸಂಭವವುಂಟು. ಹೀಗೆ ಒಂದೊಂದು ಘಟಕಕ್ಕೆ ಒಂದೊಂದು ಬಗೆಯ ಹಕ್ಕು ಬಾಧ್ಯತೆಯುಳ್ಳ ಸಂಯುಕ್ತ ಘಟನೆ ಸರಳವಾಗಿ ಸಾಗುವದು ಕಠಿಣ.

ನಿಜವಿದ್ಯೆ

ಹೃದಯಕ್ಕೆ ಒಳ್ಳೆಯ ಸಂಸ್ಕಾರವನ್ನು ಕೊಡತಕ್ಕದು ನಿಜವಿದ್ಯೆ; ನೀರಸವಾದ ವಸ್ತು ಜ್ಞಾನವನ್ನು ಕೊಡುವುದು ಆಭಾಸಿಕ ವಿದ್ಯೆ. 'Education which does not address itself to the heart as well as to the mind is sterile'- ಹೃದಯ ಮತ್ತು ಮನಸ್ಸುಗಳ ಮೇಲೆ ಯುಕ್ತ ಪರಿಣಾಮವೆಂದರೆ ಸಂಸ್ಕೃತಿ ಪೋಷಣ. ಅಂಥ ಸಂಸ್ಕೃತಿಯೆಂದರೆ 'ವಿಚಾರಸಂಚಾರ ಮತ್ತು ಸೌಂದರ್ಯ (ಹೃದಯ ಸೌಂದರ್ಯ, ಪ್ರೀತಿ), ದಯೆ ಇವುಗಳನ್ನು ಗ್ರಹಿಸುವ ಶಕ್ತಿ' ಎಂದು ಪ್ರೊ. ಏ. ಎನ್. ವೈಟ್‌ವುಡ್‌ರು ಹೇಳಿದ್ದಾರೆ. ಅಂದರೆ, ಸತ್ಯ, ಸೌಂದರ್ಯ, ಸಾತ್ವಿಕತೆಗಳ ಸಂಗಮವೇ ಸಂಸ್ಕೃತಿ. ಇಂಥ ಸಂಸ್ಕೃತಿಯನ್ನು ಕೊಡದ ವಿದ್ಯೆ ವಿದ್ಯೆಯೇ ಅಲ್ಲ ಎಂದು ಪ್ರೊಫೆಸರರ ಮತ.

ವೈಟ್‌ಹೆಡ್ಡರು ತಮ್ಮ ಆಲೋಚನೆಯನ್ನು ಮುಂಬರಿಸಿ 'A merely well-informed man is the most useless bore on God's earth- ಕೇವಲ ವಸ್ತು ಜ್ಞಾನವನ್ನುಳ್ಳವನು (ಳು) ದೇವರ ಈ ಭೂಮಿಯಲ್ಲಿ ಅತ್ಯಂತ ನಿರುಪಯುಕ್ತ ಜಂತು' ಎನ್ನುತ್ತಾರೆ.

ನಿಜವಾದ ವಿದ್ಯಾವಂತರು ಏಕಾಕಿಯಾಗಿದ್ದರೂ ಏಕಾಕಿಭಾವ ತಾಳಿ ಸಪ್ಪೆಯಾಗಿ ಕುಳಿತಿರರು; ಬಹುಜನರ ನಡುವಿದ್ದರೂ ಅಲ್ಲಿಯ ಶಾಂತತಾಭಂಗಕ್ಕೆ ಕಾರಣರಾಗರು ಎನ್ನುತ್ತಾನೆ ಎಸ್. ಎಚ್. ವುಡ್. ಜೀವನವು ಜೀವಿಸುವುದಕ್ಕಾಗಿ, ಸಂತಸದಿಂದ ಇರುವುದಕ್ಕಾಗಿ ಎಂಬ ಅರ್ಥಸೌಂದರ್ಯವನ್ನು ಗ್ರಹಿಸುವ ಬುದ್ಧಿಯನ್ನು ಇಂದಿನ ಶಾಲೆಗಳು ವಿದ್ಯಾರ್ಥಿಗಳಲ್ಲಿ ಬೆಳೆಸುತ್ತಿಲ್ಲ.

ಹೆರಾಲ್ಡ್ ಸಿ. ಶರ್ಮನ್ನನ ಪ್ರಕಾರ ವಿದ್ಯೆಯೆಂದರೆ ದಾಸ್ಯದಿಂದ ಪಾರಾಗುವ ಸಾಧನ. ದಾಸ್ಯದಲ್ಲಿ ಅನೇಕವಿವೆ; ಅನ್ಯದಾಸ್ಯ, ಸ್ವದಾಸ್ಯ. ಸ್ವದಾಸ್ಯದಲ್ಲಿ ತನ್ನ ಪೂರ್ವಗ್ರಹಗಳಿಗೆ ದಾಸನಾಗಿರುವುದು, ತನ್ನ ಇಂದ್ರಿಯಗಳಿಗೆ ದಾಸನಾಗಿರುವುದು, ತನ್ನ ಬುದ್ಧಿವಿಕಾರಗಳಿಗೆ ದಾಸನಾಗಿರುವುದು, ಕಾಮಕ್ರೋಧಾದಿಗಳಿಗೆ ದಾಸನಾಗಿರುವುದು ಎಂಬ ಬಗೆಗಳಿವೆ. ಇವೆಲ್ಲವುಗಳಿಂದ ನಮ್ಮನ್ನು ಮುಕ್ತಗೊಳಿಸುವ ವಿದ್ಯೆಯೇ ನಿಜವಿದ್ಯೆ. ವಿದ್ಯಾಪ್ರಸಾರಕರು ಮೇಲಿನ ಮಾತುಗಳನ್ನು ಗಮನಕ್ಕೆ ತಂದುಕೊಳ್ಳದಿದ್ದರೆ ಸಮಾಜದ ಸುಧಾರಣೆ ಗಾಳಿಗೋಪುರವಾಗದಿರದು.

ಐರ್ಲೆಂಡಿನಲ್ಲಿ ವರದಕ್ಷಿಣೆ!

ಐರ್ಲೆಂಡಿನ ಕೌಂಟ ರೋಜ್ ಕಾಮನ್ನಿನಲ್ಲಿ ರೈತರು ಒಂದು ಬ್ರಹ್ಮಚಾರಿ ಕ್ಲಬ್ಬನ್ನು ಸ್ಥಾಪಿಸಿಕೊಂಡಿದ್ದಾರೆ. ನಾಳೆ ಹೆಂಡತಿಯಾಗಲಿರುವವಳ ಮನೆಯವರಿಂದ ಪ್ರಥಮಾವಧಿ ಇಂತಿಷ್ಟು ವರದಕ್ಷಿಣೆ ಇಲ್ಲವೆ ಬಳುವಳಿಯನ್ನು ಪಡೆಯಬೇಕೆಂದು ಇಲ್ಲಿ ತೀರ್ಮಾನಿಸಲಾಗಿದೆ. ೮ ರಿಂದ ೧೦ ಎಕರೆ ಜಮೀನುಳ್ಳವನಿಗೆ ೪೦೦ ಡಾಲರುಗಳಿಗೆ ಕಡಿಮೆಯಿಲ್ಲದೆ ಕೊಡಬೇಕು, ೧೨ ರಿಂದ ೨೪ ಎಕರೆ ಭೂಮಿಯುಳ್ಳವನಿಗೆ ೬೦೦ ರಿಂದ ೯೦೦ ಡಾಲರುಗಳಿಗೆ ಕಡಿಮೆಯಿಲ್ಲದೆ ಕೊಡಬೇಕು ಮತ್ತು ೧೨ ರಿಂದ ೨೪ ಎಕರೆ ಭೂಮಿಯುಳ್ಳವನಿಗೆ ೬೦೦ ರಿಂದ ೯೦೦ ಡಾಲರುಗಳಿಗೆ ಕಡಿಮೆಯಿಲ್ಲದಂತೆ ಕೊಡಬೇಕು.

ಇದರಿಂದ ಜಗತ್ತೊಂದು ಪಾಠ ಕಲಿಯಬೇಕು. ಸ್ತ್ರೀಯರು ಕೇವಲ ಪಂಚಾಂಗ ಪ್ರದರ್ಶನದಿಂದ ಹೊಟ್ಟೆ ಹೊರೆದುಕೊಳ್ಳುವ ಬುದ್ಧಿಯನ್ನು ಬಿಟ್ಟು ಉಪಯುಕ್ತ ಕಾರ್ಯಗಳಲ್ಲಿ ಪರಿಣತಿ ಪಡೆದರೆ ಮಾತ್ರ ಮರ್ಯಾದೆಯಿಂದ ಗಂಡನೊಡನೆ ಸಮಾನಸ್ಕಂಧತೆಯಿಂದ ಪ್ರೀತಿಯ ಬಾಳ್ವೆಯನ್ನು ಸಾಗಿಸಬಹುದಲ್ಲದೆ ಅಪ್ರಯೋಜಕರಾಗಿ ಅಲಂಕಾರಕರಂಡಕಗಳಾಗಿ ಬಾಳಿದರೆ ನಿಜಪ್ರೀತಿಗೆ ಎರವಾಗಿ ದಾಸ್ಯ ಇಲ್ಲವೆ ಸ್ವಾಚ್ಛಂದ್ಯದ ದುಷ್ಪರಿಣಾಮಗಳಿಗೆ ತುತ್ತಾಗಬೇಕಾಗುತ್ತದೆ. ಇದು ಸಾರ್ವಕಾಲಿಕ ಮತ್ತು ಸಾರ್ವದೇಶಿಕ ಅನುಭವ ಎಂದು ಘಂಟಾಘೋಷವಾಗಿ ಹೇಳಬಹುದು.

ನ್ಯೂಜಿಲೆಂಡಿನ ಒಲಿಂಪಿಕ್ ತಂಡದ ಆಟಗಾರರು ಪ್ರಶಸ್ತಿಗೆ ಹಲುಬಿದರು ಈ ಚಿತ್ರಗಳಲ್ಲಿ ೬ ಜನ ಗಂಡಸರೂ ಇಬ್ಬರು ಹೆಂಗಸರೂ ಇದ್ದಾರೆ.

ತರುಣಿಯ ಸಾಹಸ!

ಮುಂಬಯಿಯ ಪದವೀಧರ ತರುಣಿಯೊಬ್ಬಳು ತಂದೆ ಬೇಡ ಬೇಡೆಂದರೂ ಮವಾಳಿಯೊಬ್ಬನನ್ನು ಮದುವೆಯಾದಳಂತೆ! 'Women, if they choose, will have for a hero, a rake- ಚಿತ್ತಕ್ಕೆಬಂದರೆ ಹೆಂಗಸರು ಫಟಿಂಗನನ್ನಾದರೂ ನಾಯಕನನ್ನಾಗಿ ಆರಿಸಿಕೊಳ್ಳುವರು' ಎಂಬ ಗಾದೆ ಇಂಥವಳಿಗಾಗಿಯೇ ಹುಟ್ಟಿರಬೇಕೆನಿಸುತ್ತದೆ. ಆದರೀಗ 'ಕೆಟ್ಟ ಮೇಲೆ ಬುದ್ಧಿ ಬಂತು ಅಟ್ಟಮೇಲೆ ಒಲೆ ಉರಿಯಿತು' ಎಂಬ ಗಾದೆ ಮೊದಲಿನ ಗಾದೆಯ ತಲೆಯ ಮೇಲೆ ಬಂದು ಕೂಡುವಂತಾಯಿತು. ಮೊದಲು ಮೂರು ಮೂರು ಸಲ ಲಲಿತಾ ಖಂಡೇರಾವ ಮದನ ಆದೇ ಮವಾಳಿಯೇ ತನ್ನ ಪ್ರಿಯತಮನೆಂದು ನ್ಯಾಯಾಧೀಶರೆದುರಿಗೆ ಹೇಳಿದ್ದು, ಈಗ ಅವರಿಬ್ಬರೂ ಒಮ್ಮತದಿಂದ ಸೋಡಚೀಟಿಗೆ ಬಂದು ನಿಂತಿದ್ದಾರೆ!

ಸ್ವಾಚ್ಛಂದ್ಯವನ್ನು ಸ್ವಾತಂತ್ರ್ಯವೆಂದು ಗ್ರಹಿಸುವ ತರುಣಿಯರ ಸಂಖ್ಯೆ ನಮ್ಮ ನಗರಗಳಲ್ಲಿ ಹೆಚ್ಚಾಗುತ್ತಿದೆ. ಇವರಿಗೆ ಶಿಕ್ಷಣದಲ್ಲಿ ಗುಣ, ನಡತೆಯ ಬಗ್ಗೆ ಸರಿಯಾದ ಪಾಠ ದೊರಕದಿದ್ದುದೇ ಇದಕ್ಕೆ ಕಾರಣ. "ಸ್ತ್ರೀಷು ದುಷ್ಟಾಸು ಹೇ ಒಂದೋ ಜಾಯತೇ ಸರ್ವನಾಶನಂ" ಎಂದು ಇಂಥವರ ಬಗ್ಗೆ ಎಚ್ಚರಿಕೆ ತೆಗೆದುಕೊಳ್ಳದಿದ್ದರೆ ಸಮಾಜದ ಆರೋಗ್ಯವು ನಷ್ಟವಾಗಿ ನಾಗರಿಕತೆ ನಶಿಸೀತು!

ಅಮೇರಿಕದ ಗಂಡಸರು

ಅಮೇರಿಕದ ಗಂಡಸರಿಂದು ತಮ್ಮ ಕಾಮ ಜೀವನದಲ್ಲಿ ೧೦೦ ಕ್ಕೆ ೯೯ ರಷ್ಟು ಅನೀತಿ ಮಾರ್ಗವನ್ನನುಸರಿಸುತ್ತಾರೆಂಬುದನ್ನು ಗಂಡಸರನ್ನೇ ಆಯ್ದು ಮನಃಶಾಸ್ತ್ರಿ ಮಂಡಲವೊಂದು ಪ್ರಯೋಗ ಪರೀಕ್ಷೆಗೊಳಪಡಿಸಿ ಸಿದ್ಧಾಂತಿಸಿದೆ.

ಸೂಳೆಗಾರಿಕೆಯಿಂದ ಹಿಡಿದು ಗಂಡಸನ್ನೇ ಹೆಂಡತಿಗೆ ಬದಲು ಬಳಸುವ ವರೆಗೆ ಅಮೇರಿಕದ ಆ ಪರೀಕ್ಷಿತ ಪುರುಷರ ಅನೀತಿ ಹೋಗುತ್ತದೆ. ಕಾಮಶಾಸ್ತ್ರದಲ್ಲಿ ವಾತ್ಸ್ಯಾಯನ ಮುನಿಯು—

'ಪ್ರಾಯೇಣ ಧನಿನಾಂ ದಾರಾ
ಬಹವೋ ನಿರವಗ್ರಹಾಃ॥
ಬಾಹ್ಯೇ ಸಾತ್ಯುಪಭೋಗೇಪಿ
ನಿರ್ವಿಸ್ರಂಭಾ ಬಹಿಃಸುಖಾಃ',

ಎಂದು, ಸೋಮಾರಿಗಳಾಗಿ ನಾನಾ ಕಾರಣಗಳಿಂದ ಸಾಕಷ್ಟು ಪತಿಸುಖ ಸಿಗದ ಸ್ತ್ರೀಯರು ಬಾಹ್ಯ ವೈಭವವಿದ್ದರೂ ಅಂತಃಶಾಂತಿಯಿಲ್ಲದೆ ದುರ್ಮಾರ್ಗಿಗಳಾಗುತ್ತಾರೆಂಬುದನ್ನು ಸೂಚಿಸಿದ್ದುಂಟು. ಮೇಲಿನದು ಇದಕ್ಕೆ ವಿಪರೀತ ಪರಿಸ್ಥಿತಿಯನ್ನು ನಿದರ್ಶನಕ್ಕೆ ತಂದು ಕೊಡುತ್ತದೆ.

ನಾನಾ ಕಾರಣಗಳಿಂದ (ಸ್ತ್ರೀಯರ ಸ್ವಾಚ್ಛಂದ್ಯ, ಅತಿ ಧನಾಶೆ ಮತ್ತು ಪುರುಷರ ಅಬಲತೆ, ಧನಲಬ್ಧ ಪೌರುಷಹೀನತೆ ಇತ್ಯಾದಿಗಳಿಂದ) ಪತ್ನೀ ಸುಖವಂಚಿತರಾಗಿ ಅಮೇರಿಕದ ನಾಗರಿಕರು ಹೀಗೆ ಅಧಾರ್ಮಿಕ ಅರ್ಥಾತ್ ಅನಾಗರಿಕ ವೃತ್ತಿಗಿಳಿದಿರುವುದು ಹೇಯವೆಂದೂ ಇದಕ್ಕೆಲ್ಲ ಆರ್ಥಿಕ ವೈಷಮ್ಯ ಜನ್ಯವಾದ ವರ್ಗ ಕಲಹ, ಸ್ತ್ರೀ ಪುರುಷರ ಬುದ್ಧಿವಿಕಾರ ಮತ್ತು ಅದರ ಫಲವಾದ ವ್ಯಕ್ತಿತ್ವಗಳ ತುಮುಲಗಳೇ ಕಾರಣವೆಂದೂ ಪ್ರೊ. ಜೆ. ಬಿ. ಎಸ್. ಹಾಲ್ಡೇನರೆಂಬ ಜಗತ್ಪ್ರಸಿದ್ಧ ಶರೀರಶಾಸ್ತ್ರಜ್ಞರು ಸಾರುತ್ತಾರೆ. ಇಂಥ ಅನಾಗರಿಕತೆಯನ್ನು ಒಳಗಿಟ್ಟುಕೊಂಡು ಜಗತ್ತಿಗೇ ತಾವು ಮಾದರಿಯೆನಿಸುವ ಜೀವನವನ್ನು ನಡೆಸುತ್ತಿರುವುದಾಗಿ ಅಮೇರಿಕನ್ನರು ಹೇಳುತ್ತ ತಿರುಗುವುದು ಹಾಸ್ಯಾಸ್ಪದವಲ್ಲವೆ? ಪೌರುಷದಿಂದ ಪತ್ನಿಯರನ್ನು ತೃಪ್ತಿಗೊಳಿಸುವುದರ ಬದಲು ದಾಸರಂತೆ ಧನದಾನದಿಂದ ತೃಪ್ತಿಪಡಿಸುವ ರೂಢಿಯಿಟ್ಟುಕೊಂಡ ಅವರ ನಾಗರಿಕತೆಗೆ ನಾಗರಿಕತೆಯೆನ್ನಬೇಕೆ?

ಸುಂದರರಿಗೆ ಬಹಿಷ್ಕಾರ!

ಪ್ರಾಚೀನ ಕುಲಕ್ಕೆ ಸೇರಿದ ಮೆಯೊರಿಗಳು ನ್ಯೂಜಿಲೆಂಡಿನ ಮೂಲ ನಿವಾಸಿಗಳು. ಮೊನ್ನೆ ಮೊನ್ನಿನವರೆಗೆ ಅವರು ನರಮಾಂಸ ಭಕ್ಷಕರಾಗಿದ್ದರು. ಅವರದು ಬಹಳ ಸುಂದರ ಜನಾಂಗ, ಆದರೆ ಆಸ್ಟ್ರೇಲಿಯದಲ್ಲಿರುವ ಜಾಥದ ಬಿಳಿಯರು ಅವರನ್ನು ತಮ್ಮಲ್ಲಿ ಯಾರೂ ಮದುವೆಯಾಗಬಾರದೆಂದು ಪ್ರಚಾರ ನಡೆಸಿರುವರಂತೆ. ಕಾರಣವೇನೆಂದರೆ, ಕುಲಸಂಕರವಾಗುವುದು ಎಂದು; ತಮ್ಮ ಶ್ವೇತಕುಲ ಕಲಂಕಿತವಾಗುವುದು ಎಂದು!

ಒಬ್ಬ ಮೆಯೋರಿ ಗಂಡಸನ್ನು ಆಸ್ಟ್ರೇಲಿಯದ ಬಿಳಿಯಳೊಬ್ಬಳು ಮೆಚ್ಚಿ ಮದುವೆಯಾದಳು. ಆದರೆ ಅವನಿಗೆ ಆಸ್ಟ್ರೇಲಿಯದಲ್ಲಿ ವಾಸ ಮಾಡಲು ಅಪ್ಪಣೆ ಸಿಗಲಿಲ್ಲ. ಇದರಿಂದ ಅಂಜಾಕ್ ಒಪ್ಪಂದ ಮುರಿದುತಾಗಲಿಲ್ಲವೇ ಎಂದು ನ್ಯೂಜಿಲೆಂಡಿನವರು ಕೇಳಿದ್ದಕ್ಕೆ ಆಸ್ಟ್ರೇಲಿಯದ ವಲಸೆ ಮಂತ್ರಿ ಕಾಲವೆಲ್ಲನು 'ಅದೆಲ್ಲ ನನಗೆ ಗೊತ್ತಿಲ್ಲ, ಯಾವ ಒಪ್ಪಂದವನ್ನೂ ನಾನು ಲಕ್ಷಿಸುವುದಿಲ್ಲ; ಆಸ್ಟ್ರೇಲಿಯದ ವಲಸೆಯ ಧೋರಣ ಅಮಲಿನಲ್ಲಿದ್ದೇ ಇರಬೇಕು' ಎಂದನು!

ನಟಸಾರ್ವಭೌಮ

೧೯೩೭ ರಲ್ಲಿ "ಕುಮಾರಿ, ಮೋಹಿನಿ" ಎಂಬ ಫ್ರೆಂಚ್ ಬಿರುದನ್ನು ಪಡೆದುದು ಗಂಡಸೆಂಬುದು ಈಗ ತಿಳಿದು ಬಂದಿದೆ. ಅವನ ಹೆಸರು ಜಾಕೀಸ್ ಶಿಂಡೆನ್ ಹ್ಯಾಮುರ್ ಎಂದು. ಕೋರ್ಟಿನಲ್ಲಿ ಅವನು— 'ಕುಬಸ ತೊಡುವುದು ಯಾರ ದೋಷ? ಪಾದ್ರಿಗಳು, ವಕೀಲರು ತೊಡುತ್ತಾರೆ. (ಕುಬಸ= Waist-coat ಅರೆಕೈಯಂಗಿ)' ಎಂದನಂತೆ.

ಕಳೆದ ೨೬ ವರ್ಷಗಳಲ್ಲಿ ಅವನು ಹೆಂಗಸೆಂದೇ ಎಲ್ಲರೂ ತಿಳಿದುಕೊಂಡಿದ್ದರು. ಒಬ್ಬ ಸೈನಿಕ ಅವನನ್ನು ತನ್ನ ಗೆಳತಿಯೆಂದು ಮಾಡಿಕೊಂಡನು.

ಒಂದು ಖಾಸಗಿ ಪತ್ತೆದಾರಿ ಸಂಸ್ಥೆ ಶಿಂಡೆನ್ ಹ್ಯಾಮುರನನ್ನು ಇನ್ಸ್‌ಪೆಕ್ಟರಳೆಂದು ಕೆಲಕಾಲ ನಿಯಮಿಸಿಕೊಂಡಿತ್ತು. ಯುದ್ಧಕಾಲದಲ್ಲಿ ಅವನು ಸ್ತ್ರೀವೇಷವನ್ನು ಬಿಸುಟು ಯುದ್ಧರಂಗದಲ್ಲಿ ಕಾದಿದನು. ಅನಂತರ ಮದುವೆಯಾಗಿ ತನ್ನ ಹೆಂಡತಿಯಲ್ಲಿ ಒಂದು ಮಗುವನ್ನು ಪಡೆದನು!

ನಾಲ್ಕು ಮಾತು — ರಂಗನಾಥ ದಿವಾಕರ

೧ ಬಗಲೂರ ದಾಳಿ

ಹಿಂದ-ಹೈದ್ರಾಬಾದಗಳ ಗಡಿಗಳ ಉದ್ದ ಳತೆ ಒಟ್ಟು ಸುಮಾರು ೨೫೦ ಮೈಲು. ಆ ಎಲ್ಲ ಗಡಿಯ ಮೇಲೆ ಸಾಮಾನ್ಯವಾಗಿ ಬಗಲೂರಲ್ಲಿ ಆದ ದಾಳಿಯಂಥ ದಾಳಿಯ ಭಯ ಇದ್ದೇ ಇದೆ. ಈಗ ಹೋದ ಎರಡು ತಿಂಗಳಲ್ಲಿ ವಿಜಾಪೂರ ಗಡಿಯಲ್ಲಿಯೆ (ಸುಮಾರು ೨೫೦ ಮೈಲು) ಸಣ್ಣಪುಟ್ಟ ಎಲ್ಲ ದಾಳಿಗಳ ಲೆಕ್ಕ ಹಾಕಿದರೆ ೧೦—೧೨ ಆಗಿರುವವು. ಹೈದ್ರಾಬಾದ ಗಡಿಯಲ್ಲಿ ಒಳಗೆ ಹಲವು ಮೈಲಿನ ಮೇಲೆ ಅಲ್ಲಲ್ಲಿ ರಜಾಕಾರ, ಪಠಾಣ, ಅರಬ, ಮುಂತಾದವರ ಠಾಣ್ಯಗಳಿವೆ. ಅವರು ಸಂಧಿ ಸಾಧಿಸಿದಾಗ ಈ ಬಗೆಯ ದಾಳಿಗಳನ್ನು ಮಾಡುವರು. ದಾಳಿ ಬಂದು ಹೋದ ಮೇಲೆ 'ಬಂದೋಬಸ್ತ' ನಡೆದರೆ ಏನೂ ಉಪಯೋಗವಾಗುವದಿಲ್ಲ. ಅಷ್ಟರಲ್ಲಿ ಆಗುವ ಜನ ಧನ ಮಾನ ಹಾನಿ ಆಗಿಹೋಗಿರುತ್ತದೆ. ಇಡೀ ಹೈದರಾಬಾದ ಸಮಸ್ಯೆಯನ್ನೆ ಬಗೆಹರಿಸುವವರೆಗೆ ಇಂಥ ಸಮಸ್ಯೆಗಳೆಲ್ಲ ಬಗೆಹರಿಯುವದಿಲ್ಲ ಎಂಬ ಮಾತು ನಿಜ. ಆದರೆ ಅಲ್ಲಿಯ ವರೆಗೆ ಇವುಗಳನ್ನು ತಡೆಯುವದು, ಗಡಿಗಳಲ್ಲಿಯ ಜನಧನಗಳ ಸಂರಕ್ಷಣೆ ಮಾಡುವದು ಹಿಂದದ ಕರ್ತವ್ಯವೆ ಆಗಿದೆ.

× × ×

ಹಿಂದದ ಕರ್ತವ್ಯ ಅಂದರೆ ಕೇವಲ ಸರಕಾರದ ಕರ್ತವ್ಯ ಎಂದಲ್ಲ. ಪ್ರತಿಯೊಬ್ಬ ನಾಗರಿಕನ ಕರ್ತವ್ಯವೂ ಇದೆ. ಯಾಕಂದರೆ ಆದ ಅಥವಾ ಆಗಬಹುದಾದ ಹಾನಿಯ ಸೆಕೆಯು ಎಲ್ಲರಿಗೂ ಬಡಕೊಳ್ಳುವದು. ಗಡಿಯ ಹತ್ತಿರ ೩-೪ ಕಡೆಗೆ ಕೆಲವೊಂದು ಸೈನ್ಯವಿದೆ. ವಿಜಾಪೂರ ಗಡಿಯ ಉದ್ದಕ್ಕೂ ೪೦-೫೦ ಕಡೆಗೆ ಪೋಲೀಸ ಪಹರಿಗಳ ತಂಡುಗಳಿವೆ. ಹೀಗೆಲ್ಲ ಇದ್ದರೂ ರಜಾಕಾರ ಮುಂತಾದವರು ಸಂಧಿ ಸಾಧಿಸಿ ಹೊಂಚುಹಾಕಿ ದಾಳಿ ಮಾಡುವದನ್ನು ತಪ್ಪಿಸುವದು ಕಠಿಣ. ಪ್ರತಿಯೊಂದು ಹಳ್ಳಿಯಲ್ಲಿ ರಕ್ಷಾದಲಗಳನ್ನು ಸಿದ್ಧಪಡಿಸುವ ಯತ್ನವು ನಡೆದಿದೆ. ಹಾಗೆ ಮಾಡದ ಹೊರತು ಎರಡನೆ ಉಪಾಯವಿಲ್ಲ. ಅದರಿಂದರೆ ಜನರಿಗೆ ಧೈರ್ಯ ಬರುವದು ಹಾಗೂ ದಾಳಿಗಾರರಿಗೂ ಭಯವುಂಟಾಗುವದು. ಸಣ್ಣ ಹಳ್ಳಿ ಮೊದಲು ಮಾಡಿ ದೊಡ್ಡ ಊರುಗಳ ವರೆಗೆ ಕನಿಷ್ಠ ೫ ರಿಂದ ಮೊದಲು ಮಾಡಿ ೫೦-೧೦೦ ವರೆಗೆ ರಕ್ಷಾದಲದವರನ್ನು ಆಯಾ ಊರಲ್ಲಿಯೆ ಸಿದ್ಧಪಡಿಸಿ ಅವರಿಗೆ ತಾತ್ಪೂರ್ತಿಕ ಸೈನಿಕ ಶಿಕ್ಷಣವನ್ನು ಕೊಡಲಿಕ್ಕೆಬೇಕು ಹಾಗೂ ಅವರಿಗೆ ಶಸ್ತ್ರಾಸ್ತ್ರಗಳು ದೊರೆಯುವಂತೆ ವ್ಯವಸ್ಥೆ ಆಗಲಿಕ್ಕೆಬೇಕು.

× × ×

ನಮ್ಮ ಗಡಿಯೊಳಗಿನ ಜನರೂ ಹಲವರು ಹೈದ್ರಾಬಾದ ಗಡಿಗಳಲ್ಲಿ ಸೇರಿ ಪುಂಡಾಟಿಕೆ ಮಾಡುವದು ಕಂಡುಬಂದಿದೆ. ಆದರೆ ಅದರಿಂದ ಏನೂ ಲಾಭವಿಲ್ಲ ಎಂದೇ ಹೇಳಬಹುದು. ಆ ವಿಷಯದಲ್ಲಿ ರಜಾಕಾರ ಮುಂತಾದವರನ್ನು ಸರಿಗಟ್ಟಲೆತ್ನಿಸುವದೆಂದರೆ ಅವರೊಡನೆ ನಾವೂ ಅಧಃಪಾತಕ್ಕಿಳಿಯಲೆತ್ನಿಸಿದಂತೆಯೇ ಸೈ. ಮುಯ್ಯಕ್ಕೆ ಮುಯ್ಯ, ಇಲ್ಲವೆ ಪುಂಡಾಟಿಕೆಯಲ್ಲಿ ಶಕ್ತಿಯನ್ನು ಕ್ಷೀಣಗೊಳಿಸದೆ ಹೆಚ್ಚು ಭದ್ರವಾದ ಸಂರಕ್ಷಕ ದಳಗಳನ್ನು ನಿರ್ಮಾಣ ಮಾಡುವದೆ ಸರ್ವಥಾ ಯೋಗ್ಯವಾದುದು.

× × ×

ಇನ್ನು ಬಗಲೂರ ದಾಳಿಯ ಬಗ್ಗೆ ಹಲವು ಮಹತ್ವದ ಮಾತುಗಳು ಲಕ್ಷದಲ್ಲಿಡುವಂತಹವು ಇರುವವು. ಊರು ಬಹಳ ಚಿಕ್ಕದು. ತೀರ ಗಡಿಯ ಹಳ್ಳಿ. ಅಲ್ಲಿಂದ ಕೂಗಿದರೆ ನದಿಯಾಚೆಯ ಟಿಕ್ಕರಕಿಗೆ ಕೇಳುವದು. ನದಿಯ ಈಚೆ ನಾರಾಯಣಪುರ ಎಂಬ ಹೈದ್ರಾಬಾದ ಹಳ್ಳಿ ಒಂದೂವರೆ ಮೈಲು ಮಾತ್ರ. ದಾಳಿಗಾರರು ಹಗಲೇ ಬಂದರು. ಊರಿನವರಿಗೆ ಪತ್ರೇ(?)ಹತ್ತದೆ ಊರ ಮುಂದೆ ತಲುಪಿದರು! ೪೦—೫೦ ಜನ ಸಮವಸ್ತ್ರಧಾರಿಗಳು ಸಶಸ್ತ್ರರು ಹೀಗೆ ಬಂದರು. ಇದರ ಅರ್ಥ ನಮ್ಮ ಅಜಾಗರೂಕತೆ! ಹೀಗಾಗಕೂಡದು. ಎಚ್ಚರದಿಂದ ಗಸ್ತಿ ಪಹರೆ ನಡೆಯುವದು ಅತ್ಯವಶ್ಯ.

× × ×

ಪೋಲೀಸರು ಅಲ್ಲಲ್ಲಿ ಬದಿಗೆ ನಿಂತು ಗುಂಡು ಹಾಕಿ ಒಬ್ಬನನ್ನು ಕೊಂದು ಹಲವರನ್ನು ಗಾಯಗೊಳಿಸಿದ್ದರಿಂದಲೆ ದಾಳಿಗಾರರು ಕೂಡಲೆ ಓಡಿಹೋದರೆಂಬಲ್ಲಿ ಸಂಶಯವಿಲ್ಲ. ಆದುದರಿಂದ ಇದೇ ರೀತಿ ಊರೂರಿಗೆ ರಕ್ಷಾದಲಗಳಾದರೆ ಅವರಿಂದ ದಾಳಿಗಾರರಿಗೆ ಭಯವುಂಟಾಗುವದೆಂಬಲ್ಲಿ ಸಂಶಯವಿಲ್ಲ. ಈ ಉಪಾಯದಿಂದ ದಾಳಿಗಾರರಿಗೆ ಭಯವುಂಟಾಗುವದಲ್ಲದೆ ಊರವರಿಗೂ ಧೈರ್ಯವುಂಟಾಗುವದು.

× × ×

ನಾನು ಬಗಲೂರಲ್ಲಿ ಎಲ್ಲ ನೋಡಿಕೊಂಡು ಹೊರಟೆನು. ಅಷ್ಟರಲ್ಲಿ ಯಾರೋ ಇಬ್ಬರು ಪಠಾಣರು ಮತ್ತೆ ಟಿಕ್ಕರಕಿಗೆ ಬಂದಿರುವರು ಎಂಬ ಹೂಲಿ ಎದ್ದಿತು. ಕೂಡಲೆ ಅಲ್ಲಿಯ ಜನರಲ್ಲಿ ಎದ್ದ ಧಾಂದಲೆ ಆದ ಗಾಬರಿ ನನಗೆ ಪ್ರತ್ಯಕ್ಷ ನೋಡಲು ದೊರೆಯಿತು. ೫ ನಿಮಿಷ ಅತ್ತಿತ್ತ ಅಸ್ತವ್ಯಸ್ತವಾಗಿ ಜನ ಓಡಾಡಲು ಪ್ರಾರಂಭವಾಯಿತು. ಹೀಗೆ ಆಗದಂತೆ ವ್ಯವಸ್ಥಿತವಾಗಿ ಸಂರಕ್ಷಣೋಪಾಯಗಳನ್ನು ಜನರಿಗೆ ಕಲಿಸುವದು ಅತ್ಯಂತ ಅವಶ್ಯವು. ರಕ್ಷಾದಲಗಳು ಆ ಕೆಲಸವನ್ನು ಮಾಡುವದು ಅತ್ಯವಶ್ಯ.

× × ×

ಈ ವಿಷಯದಲ್ಲಿ ಹಿಂದು-ಮುಸಲ್ಮಾನ ಎಂಬ ಪ್ರಶ್ನೆಯೆ ಇಲ್ಲ ಎಂಬುದು ಒಂದೆರಡು ಉದಾಹರಣೆಗಳಿಂದ ಪ್ರತ್ಯಕ್ಷವಾಯಿತು. ಫಾತಿಮಾ ಎಂಬವಳು ತಾನು ಮುಸಲ್ಮಾನಳು ಎಂದು ಹೇಳಿದರೂ ಆ ಪಠಾಣರು ಕೇಳದೆ ಆಕೆಯನ್ನು ಬೆದರಿಸಿದ್ದಲ್ಲದೆ ಆ ಮನೆಗೆ ಗುಂಡು ಹಾಕಿದರು. ಯಾರಿಗೂ ತಾಕಲಿಲ್ಲ. ಕೇವಲ ಒಂದು ಕಂಬಕ್ಕೆ ತಗಲಿ ಜಾರಿಹೋಗಿದೆ. ಇತ್ತಕಡೆಯ ಮುಸಲ್ಮಾನರು ಅವರ ದೃಷ್ಟಿಯಿಂದ ಮುಸಲ್ಮಾನರೇ ಅಲ್ಲ. ಮೇಲಾಗಿ ದಾಳಿಗಾರರಿಗೆ, ಪುಂಡರಿಗೆ ಧರ್ಮ, ಜಾತಿ, ಎಲ್ಲಿಯವು? ಕಾಶ್ಮೀರದ ಬಾರಾಮೂಲಾ ಎಂಬ ಮುಸಲ್ಮಾನರ ಊರನ್ನೆ ಮುಸಲ್ಮಾನ ದಾಳಿಗಾರರು ಸುಟ್ಟು ಹಾಕಿದರು. ಇದರಿಂದ ಇತ್ತಕಡೆಯ ಮುಸಲ್ಮಾನರು ಪಾಠಕಲಿಯಬೇಕು. ಹಿಂದದ ಗಡಿಯಲ್ಲಿದ್ದವರು ನಾವು ಯಾವ ಜಾತಿಯವರೇ ಇರಲಿ, ಧರ್ಮದವರಿರಲಿ, ನಮ್ಮೆಲ್ಲರ ಹಿತಾಹಿತಗಳು ಒಂದೇ. ಆದುದರಿಂದ ದಾಳಿಗಾರರು ಮುಸಲ್ಮಾನರಿದ್ದಾರೆಂದು ಇಲ್ಲಿಯ ಮುಸಲ್ಮಾನರು ಅವರನ್ನು ಆಲಿಂಗಿಸಲಿಕ್ಕೆ ಹೋದರೆ ಬಗಲೂರಿನ ಫಾತಿಮಾನ ಅವಸ್ಥೆಯಂತೆ ಅವರ ಅವಸ್ಥೆ ಆಗುವದು.

\+ \+ \+

ಅಲ್ಲಿದ್ದ ಪೋಲೀಸರಲ್ಲಿ ೪-೫ ಜನರು ಮುಸಲ್ಮಾನರೇ ಇದ್ದರು. ಅವರಲ್ಲಿ ಇಬ್ಬರು ಮೂವರು ಮುಸಲ್ಮಾನರೇ ಗುಂಡುಹಾಕಿ ಪಠಾಣರನ್ನು ಗಾಯಗೊಳಿಸಿದರು. ಪಠಾಣರು ತೋಟದಲ್ಲಿ ಸಿಕ್ಕ ಮುಸಲ್ಮಾನ ಪೋಲೀಸನನ್ನು ಚನ್ನಾಗಿ ಬೆದರಿಸಿ ಥಳಿಸಿದರು. ಅಂದ ಬಳಿಕ ಇದರಲ್ಲಿ ಇನ್ನು ಹಿಂದು ಮುಸಲ್ಮಾನ ಪ್ರಶ್ನೆ ಉಳಿದಿಲ್ಲ ಎಂಬುದು ಮತ್ತಷ್ಟು ಸಿದ್ಧವಾಗುವದು.

೨ ದೃಷ್ಟಿ ಬದಲಾಗಬೇಕು

ಮೊನ್ನೆ ಪ್ರವಾಸದಲ್ಲಿ ಒಬ್ಬ ಸರಕಾರೀ ಅಧಿಕಾರಿಗಳು ಭೆಟ್ಟಿಯಾಗಿದ್ದರು. ತಾವು ಯಾರು ಎಂದು ಕೇಳಿದೆ. ನಾನು ಸರಕಾರಿ ಅಧಿಕಾರಿ, ಎಂದು ಹೇಳಿದರು. ಯಾವ ಖಾತೆ, ಎಂದು ಮತ್ತೆ ಕೇಳಿದೆ. 'ನಾನು ಇನ್‌ಕಮ್ ಟ್ಯಾಕ್ಸ ಖಾತೆಯವನು, ಬೇಕೆಂದು ನಾನು ಖಾತೆಯ ಹೆಸರು ಹೇಳಲಿಲ್ಲ. ಯಾಕಂದರೆ ಇನ್‌ಕಮ್ ಟ್ಯಾಕ್ಸ ಖಾತೆ ಎಂದೊಡನೆ ಜನರು ಬೇಸರಪಡುವರು, 'ಎಂದು ಆ ಅಧಿಕಾರಿ ತನ್ನ ಅನುಭವವನ್ನು ಹೇಳಿದನು. ಅಧಿಕಾರಿಗಳತ್ತ ನೋಡುವ ನಮ್ಮ ದೃಷ್ಟಿ ಬದಲಾಗಲಿಕ್ಕೆಬೇಕೆಂಬುದು ಇದರ ಮೇಲಿಂದ ಸಿದ್ಧವಾಗುವದು. ಅಧಿಕಾರಿಗಳ ವೃತ್ತಿಯೂ ಬದಲಾಗಲೇಬೇಕು. ಆದರೆ ಅದರೊಡನೆ ನಮ್ಮ ದೃಷ್ಟಿ, ಪ್ರತಿಯೊಬ್ಬ ನಾಗರಿಕನ ದೃಷ್ಟಿ ಬದಲಾಗದೆ ಹೋದರೆ ಸ್ವರಾಜ್ಯವು ನಡೆಯಲಾರದು.

× × ×

ಪರಕೀಯ ಸರಕಾರವಿರುವವರೆಗೆ, ನಾವು ಸರಕಾರಕ್ಕೆ ಕೊಟ್ಟ ಹಣ ನಮ್ಮನ್ನು ದಾಸ್ಯದಲ್ಲಿಡಲು ಉಪಯೋಗಿಸಲಾಗುತಿದೆ, ಎಂಬ ಹೇಯಭಾವನೆಯಿಂದ ನೋಡುತಿದ್ದೆವು. ಆದಾಯಕರ ಕೊಡುವದನ್ನು ತಪ್ಪಿಸಬೇಕೆಂದು ಪ್ರಯತ್ನಿಸುತಿದ್ದೆವು. ಆದರೆ ಈಗ ನಮ್ಮ ದೃಷ್ಟಿ ಪೂರ್ಣ ಬದಲಾಗಲಿಕ್ಕೆಬೇಕು. ಯೋಗ್ಯವಾದ ಆದಾಯಕರವನ್ನು ಮನಃಪೂರ್ವಕವಾಗಿ ಕೊಡುವದೇ ನಮ್ಮೆಲ್ಲರ ಕರ್ತವ್ಯವಾಗಿದೆ. ಆ ಖಾತೆಯಲ್ಲಿ ಕೆಲಸಮಾಡುವ ಅಧಿಕಾರಿಗಳು ನಮ್ಮಷ್ಟೇ ಸ್ವಾತಂತ್ರ್ಯನಿಷ್ಠ ನಾಗರಿಕರಿರುವರು. ಅವರು ಈಗ ವೈರಿಗಳ ಹಸ್ತಕರಲ್ಲ ಸ್ವರಾಜ್ಯ ಸರಕಾರದ ಸಹಾಯಕರು. ಈ ದೃಷ್ಟಿಯಿಂದಲೆ ಸರಕಾರದ ಪ್ರತಿಯೊಂದು ಖಾತೆಯಲ್ಲಿಯ ನೌಕರರತ್ತ ನಾವು ನೋಡುವದು ಅವಶ್ಯವು.

× + +

ಸರಕಾರಿ ಅಧಿಕಾರಿಗಳು ಕೂಡ, ತಾವು ಕೇವಲ ಕೂಲಿಯ ಆಳು, ಸಂಬಳ ಸಿಕ್ಕರಾಯಿತು, ಎಂಬ ಭಾವನೆಯನ್ನು ಬಿಟ್ಟುಬಿಡಲಿಕ್ಕೆಬೇಕು. ಮೊಟ್ಟಮೊದಲು ತಾವು ಸ್ವತಂತ್ರ ಹಿಂದುಸ್ತಾನದ ನಾಗರಿಕರು, ನಂತರ ಆ ಸ್ವತಂತ್ರ ಹಿಂದುಸ್ತಾನ ಸರಕಾರದ ನೋಕರರು, ಸರಕಾರೀ ಯಂತ್ರವನ್ನು ಸುಸೂತ್ರ ಹಾಗೂ ಪ್ರಾಮಾಣಿಕವಾಗಿ ಸಾಗಿಸುವದು ತಮ್ಮ ಕರ್ತವ್ಯ ಎಂಬ ಪವಿತ್ರಭಾವನೆಯಿಂದ ಅವರು ನಡಕೊಳ್ಳಲಿಕ್ಕೆಬೇಕು. ಅಂದರೆ ಜನತೆಯು ಸಹ ಅವರಿಗೆ ಯೋಗ್ಯಮನ್ನಣೆ ಕೊಡಬಲ್ಲದು. ತಮ್ಮ ಪ್ರತಿಷ್ಠೆಯನ್ನು ಅವರು ತಮ್ಮ ಶೀಲದಿಂದಲೆ ಪಡೆಯಬೇಕು. ಕೇವಲ ಅಧಿಕಾರ ದರ್ಪದಿಂದ ನಡೆಯದೆ ತಮ್ಮ ರಾಷ್ಟ್ರನಿಷ್ಠೆ, ಕರ್ತವ್ಯನಿಷ್ಠೆ, ಪ್ರಾಮಾಣಿಕತನ, ನಿಸ್ಪೃಹತೆ, ನಿರ್ದಾಕ್ಷಿಣ್ಯ ಈ ಮುಂತಾದ ಗುಣಗಳಿಂದ ಅವರು ತಮ್ಮ ಯೋಗ್ಯತೆಯನ್ನು ಬೆಳಸಿಕೊಳ್ಳಬೇಕು. ಅಂದರೆ ಅವರು ರಾಷ್ಟ್ರದ ರಾಜ್ಯಯಂತ್ರವನ್ನು ಭದ್ರಪಡಿಸುವದಲ್ಲದೆ ತಮ್ಮ ಗೌರವವನ್ನೂ ಹೆಚ್ಚಿಸುವರು. ಹೀಗೆ ಉಭಯತೋಪರಿ ದೃಷ್ಟಿ ಹಾಗೂ ವೃತ್ತಿಗಳಲ್ಲಿ ಬದಲಾವಣೆ ಆಗಲಿಕ್ಕೆಬೇಕು.

ವ್ಯಾಪಾರ ಪ್ರಪಂಚ

ಮುಂಬಯಿ ಶೇರ ಪೇಟೆ

ತಾ. ೧೫

ಶೇರ ಪೇಟೆಯಲ್ಲಿ ವಿಶೇಷ ಏರಿಳಿತಗಳು ಈ ವಾರದಲ್ಲಿ ಕಾಣಿಸುವದಿಲ್ಲ. ಜವಳಿ ಪಾಲುಗಳು ಸ್ವಲ್ಪ ಏರಿ ಮತ್ತೆ ಹಿಂದೆ ಸರಿದವು. ತಾ. ೨೦ ಕ್ಕೆ ಕೂಡಲಿರುವ ಸುಂಕ ಮಂಡಲದ ಸಭೆಯಲ್ಲಿ ಯಾವ ನಿರ್ಣಯಗಳಾಗುವವೋ ಗೊತ್ತಿಲ್ಲದ್ದರಿಂದ ತೇಜಿಗಳು ಜವಳಿ ಪಾಲುಗಳನ್ನು ಮುಂದೊತ್ತಲು ಸಿದ್ಧರಿಲ್ಲ. ಉಳಿದ ಪಾಲುಗಳೂ ಸ್ವಲ್ಪ ಅತ್ತಿತ್ತ ಹೊಯ್ದಾಡುತಿವೆ. ಒಟ್ಟಿನ ಮೇಲೆ ಧೋರಣೆ ಇಳಿಮುಖವೇ ಇದೆ. ಇಂದಿನ ಬೆಲೆಗಳು ಹೀಗಿದ್ದವು:—

ಜವಳಿ

ಅಹಮದಾಬಾದ ಅಡ್ವಾನ್ಸ	೨೭೫—೦—೦
ಬಾಂಬೆ ಡಾಯಿಂಗ್	೧೦೮೬—೪—೦
ಸೆಂಟ್ರಲ ಇಂಡಿಯಾ	೨೮೨—೮—೦
ಸೆಂಚುರಿ	೫೨೫—೦—೦
ಗೋಕಾಕ	೩೧೩—೦—೦
ಕೋಹಿನುರು	೬೩೨—೦—೦
ಫಿನಿಕ್ಸ	೪೪೧—೪—೦
ಸಿಂಪ್ಲೆಕ್ಸ	೨೧೫—೦—೦
ಸ್ವದೇಶಿ	೬೦೪—೦—೦

ಇತರ

ಬೇಲಾಪುರ ಸಕ್ಕರೆ	೨೯೩—೮—೦
ಬಾಂಬೇ ಬರ್ಮಾ	೪೧೩—೧೨—೦
ಸಿಂಧ್ಯ ಸ್ಟೀಮ	೨೬—೧೧—೦
ಟಾಟಾ ಸ್ಟೀಲ ಡೆಫೆರ್ಡ	೧೬೦೭—೮—೦
ಇಂಡಿಯನ್ ಅಯರ್ನ	೨೫—೮—೦
ಅಸೊ. ಸಿಮೆಂಟ್ಸ	೧೬೯—೦—೦
ಇಂಪೀರಿಯಲ್ ಬ್ಯಾಂಕ ಫೂರ್ಣ	೨೦೭೯.೮-೦
ಸೆಂಟ್ರಲ ಬ್ಯಾಂಕ್	೯೦—೮—೦
ಇಂಡಿಯನ್ ಬ್ಯಾಂಕ	೨೧೪.೦.೦
ರಿಝರ್ವ ,,	೧೧೨—೮—೦

ಚಿನ್ನ--ಬೆಳ್ಳಿ

ಚಿನ್ನ ಬೆಳ್ಳಿಯಲ್ಲಿಯೂ ತೇಜಿಗಳ ಕೈವಾಡ ಸಾಗಲಿಲ್ಲ. ಬೆಲೆಗಳು ಇಳಿಮುಖವಾಗಿಯೇ ಇವೆ.

ತಯಾರಿ ಚಿನ್ನ	೧೧೩—೧೨—೦
ವಾಯದಾ ಚಿನ್ನ	೧೧೩—೬—೦
ಸಾವರೀನ	೭೪—೧೨—೦
ತಯಾರಿ ಬೆಳ್ಳಿ	೧೭೦—೧೦—೦
ವಾಯದಾ	೧೭೦—೧೦—೦
ಚೇಂಬರ	೧೭೦.೦.೦

ಎಣ್ಣೆಕಾಳು

ಶೇಂಗಾ	೧೮೧.೪.೦
,, (ಹೊಸ)	೧೭೯.೮-೦
ಅಗಸಿ	೨೮—೬.೦
,, ಎಣ್ಣೆ	೧೬—೧೦—೦

ಶಿವಮೊಗ್ಗೆ ಅಡಿಕೆ

ತಾ. ೧೪

ದೇಶಾವರ ನಂ. ೧ ಮಣ ೧ ಕ್ಕೆ	೩೪-೩೫॥
,, ,, ೨	೩೨-೩೩॥
ಅನ್ನಾವರ	೨೮॥-೩೦॥
ತೊರೆಸಾಲು	೨೯-೩೧
ರಾಜಾ ಅಲವು	೩೦-೩೩॥
ನುಲಿ	೩೨-೩೫
ಪಟಿನ್	೩೬-೩೭
ಚಟ್ಟಿ	೧೯-೨೦
ಚಟ್ಟಿ ವಂತಿ	೨೧-೨೨

ಬೇಡಿಕೆ ವಿಶೇಷವಿಲ್ಲ. ರೈಲುಗಳಲ್ಲಿ ಬುಕಿಂಗೂ ಸಿಗುವದಿಲ್ಲ. ಕೆಲವು ತೋಟಗಳಲ್ಲಿ ಕೊಳೆರೋಗವೂ ಪ್ರಾರಂಭವಾಗಿದೆ.

ಹಿಂದುಸ್ತಾನ ಬ್ರಿಟಿಶ್‌ಗಳಲ್ಲಿ ಸ್ಟರ್ಲಿಂಗ ಒಪ್ಪಂದ

ಕರಾರುಗಳಲ್ಲಿಯ ಮುಖ್ಯಾಂಶಗಳು

ಬ್ರಿಟಿಶ ಸರಕಾರ ಮತ್ತು ಹಿಂದುಸ್ತಾನ ಸರಕಾರಗಳಲ್ಲಿ ಸ್ಟರ್ಲಿಂಗ ಸಂಗ್ರಹದ ಬಗ್ಗೆ ದೀರ್ಘ ವಿಚಾರವಿನಿಮಯವಾಗಿ ಒಂದು ಬಗೆಯ ತಾತ್ಪೂರ್ತಿಕ ಒಪ್ಪಂದವಾಗಿದ್ದು ಅದರ ಮುಖ್ಯಾಂಶಗಳು ಇಂತಿವೆ.—

೧) ಬ್ರಿಟಿಶರು ಭಾರತದಿಂದ ಹೊರಡುವಾಗ ಯುದ್ಧಕಾಲದಲ್ಲಿ ಇಲ್ಲಿ ಕಟ್ಟಿದ ಯುದ್ಧೋಪಯೋಗಿ ಕಾರಖಾನೆ ಹಾಗು ಯುದ್ಧ ಸಾಮಗ್ರಿಗಳನ್ನು ಬಿಟ್ಟುಹೋದ್ದರಿಂದ ಅದರ ಬೆಲೆಯೆಂದು ೧೦೦೦ ಲಕ್ಷ ಪೌಂಡು ಅಂದರೆ ೧೩೩ ಕೋಟಿ ರೂಪಾಯಿಗಳನ್ನು ಹಿಂದುಸ್ತಾನ ಸರಕಾರವು ಬ್ರಿಟನ್ನಿಗೆ ಕೊಡಬೇಕು. ಈ ಆಸ್ತಿಗಳ ಬೆಲೆ ಲೆಕ್ಕದಲ್ಲಿ ೩೭೫೦ ಲಕ್ಷ ಪೌಂಡ ಅಂದರೆ ೫೦೦ ಕೋಟಿ ರೂ. ಗಳಷ್ಟಿತ್ತು.

೨ ಹಿಂದುಸ್ತಾನ ಸರಕಾರದ ಬ್ರಿಟಿಶ ನವಕರರಿಗೆ ಪ್ರತಿ ವರ್ಷ ಕೊಡತಕ್ಕ ಪೆನಶನ ಹಣ ೮ ಕೋಟಿ ರೂ. ಗಳಷ್ಟಿದೆ. ಇದರ ಬಗ್ಗೆ ಒಟ್ಟು ೧೯೭ ಕೋಟಿ ರೂಪಾಯಿ ಕೊಟ್ಟುಬಿಡತಕ್ಕದ್ದೆಂದು ಗೊತ್ತಾಗಿದೆ. ಪ್ರಾಂತೀಯ ಸರಕಾರಗಳ ನವಕರರ ಪೆನಶನ ಬಗ್ಗೆ ೨೩ ಕೋಟಿ ರೂ. ಗಳನ್ನು ಈಗಲೆ ಕೊಟ್ಟುಬಿಡಬೇಕೆಂದೂ ಗೊತ್ತಾಗಿದೆ.

ಇಷ್ಟು ಹಣ ಹೋಗಲಾಗಿ ಉಳಿಯುವ ಹಣದಲ್ಲಿ, ಬರುವ ಮೂರು ವರ್ಷಗಳಲ್ಲಿ ಒಟ್ಟು ೮೦೦ ಲಕ್ಷ ಪೌಂಡುಗಳನ್ನು ಹಿಂದುಸ್ತಾನ ಸರಕಾರದ ಬಳಕೆಗೆ ಕೊಡಬೇಕು. ಇದರಿಂದ ಬರುವ ಮೂರು ವರುಷಗಳ ಅವಧಿಯಲ್ಲಿ ಸ್ಟರ್ಲಿಂಗ ಶಿಲ್ಕಿನಲ್ಲಿ ಒಟ್ಟು ೧೬೦೦ ಲಕ್ಷ ಪೌಂಡು ಅಂದರೆ ೨೧೩ ಕೋಟಿ ರೂಪಾಯಿ ದೊರೆಯುವದು. ಡಾಲರಗಳನ್ನು ಒದಗಿಸುವ ಬಗ್ಗೆ ಮೊದಲನೇ ವರ್ಷ ಬ್ರಿಟಿಶ ಸರಕಾರವು ೧೫೦ ಲಕ್ಷ ಪೌಂಡುಗಳನ್ನು ಬೇಕಾದ ರಾಷ್ಟ್ರಗಳ ನಾಣ್ಯ ಕೊಳ್ಳಲು ಒದಗಿಸುವದು. ಸ್ವಿತ್ಸರ್ಲಂಡ, ಸ್ವೀಡನ್ ದೇಶಗಳೂ ಹಿಂದುಸ್ತಾನದ ವ್ಯಾಪಾರ ದೃಷ್ಟಿಯಿಂದ ಸ್ಟರ್ಲಿಂಗ ಪ್ರದೇಶಗಳೆಂದು ಗಣಿಸಲಾಗುವದು. ಶಿಲಕು ಉಳಿಯುವ ಸ್ಟರ್ಲಿಂಗದ ಮೇಲೆ ನೂರಕ್ಕೆ ವರ್ಷಕ್ಕೆ ೭೮ ರಂತೆ ಬಡ್ಡಿ ಕೊಡಿಸುವದು ಗೊತ್ತಾಗಿದೆ.

ಈ ಸ್ಟರ್ಲಿಂಗು ಹಿಂದುಸ್ತಾನದ ವಿದೇಶವ್ಯಾಪಾರಕ್ಕೆ ಸಿಕ್ಕುವ ಹಣವೆಲ್ಲ; ಹಿಂದುಸ್ತಾನದಿಂದ ನಿರ್ಯಾತವಾಗುವ ಸರಕಿನ ಬೆಲೆ ಪ್ರತಿವರ್ಷ ೫೦೦ ಕೋಟಿ ರೂ. ಗಳಷ್ಟಿರುವದರಿಂದ ಬರುವ ಮೂರು ವರುಷಗಳಲ್ಲಿ ೧೭೦೦ ಕೋಟಿ ರೂ. ಬೆಲೆಯ ವಿದೇಶ ಸರಕು ಕೊಳ್ಳುವ ಶಕ್ತಿ ಹಿಂದುಸ್ತಾನಕ್ಕಿದೆ.

ಒಟ್ಟಾರೆ ಈ ಸಂಗ್ರಹವು ೨೫-೬-೪೮ ಕ್ಕೆ ೧೧೩೫೪೯೦೦೦ ರೂ. ರಿಝರ್ವ ಬ್ಯಾಂಕಿನ ಇವೆಯೆಂದು ಪ್ರಸಿದ್ಧವಾಗಿದೆ.

ಹೊಸದಿಲ್ಲಿಯಲ್ಲಿ ೧೫ಕ್ಕೆ ಕರೆದ ಪತ್ರಿಕಾ ಪರಿಷತ್ತಿನಲ್ಲಿ ಹಿಂದುಸ್ತಾನ ಸರಕಾರದ ಅರ್ಥಸಚಿವರು ಈ ಒಪ್ಪಂದದ ವಿವರಗಳನ್ನು ವಿವರಿಸಿ ಸ್ಟರ್ಲಿಂಗ ಸಂಗ್ರಹದಲ್ಲಿ ಕಡಿತದ ಭೀತಿ ಇಲ್ಲ ಎಂದು ಹೇಳಿದರು.

ಕಾಮನ್ಸ ಸಭೆಯಲ್ಲಿ

ಕಾಮನ್ಸ ಸಭೆಯಲ್ಲಿ ಬ್ರಿಟಿಶ ಅರ್ಥಮಂತ್ರಿ ಸರ್ ಸ್ಟ್ಯಾಫರ್ಡ ಕ್ರಿಪ್ಸರು ಈ ಒಪ್ಪಂದವು ಕೇವಲ ತಾತ್ಪೂರ್ತಿಕವಾಗಿದ್ದು ಮುಂದೆ ಬೇಕಾದಾಗ ಸ್ಟರ್ಲಿಂಗ ಸಂಗ್ರಹದ ಕೊನೆಯ ಒಪ್ಪಂದದ ಕಾಲದಲ್ಲಿ ಜಪಾನ ದಾಳಿಯಿಂದ ಹಿಂದುಸ್ತಾನವನ್ನು ಉಳಿಸಿದ ಬಗ್ಗೆ ಪ್ರತಿಫಲವೆಂದು ಈ ಸಂಗ್ರಹದಲ್ಲಿ ಕಡಿತ ಹಾಕುವ ಪ್ರಶ್ನೆಯನ್ನೆತ್ತಲು ಬರುವದೆಂದು ಚರ್ಚಿಲ್ಲರು ಕೇಳಿದ ಪ್ರಶ್ನೆಗೆ ಉತ್ತರ ಕೊಡುವಾಗ ಹೇಳಿದರು.

ಹುಬ್ಬಳ್ಳಿ

ಜ. ಹತ್ತಿಕಾಳು	[illegible]
ದ. ಹತ್ತೀಕಾಳು	[illegible]

ಕ ರ್ಮ ವೀ ರ

ಶ್ರೀಮಚ್ಚಾಲುಕ್ಯ ವಿಕ್ರಮ ವರ್ಷ ೮೭೦
ಆಷಾಢ ಶು|| ೧೩ ಸೋಮವಾರ

ಅಭಿನಂದನೀಯ

ಸಂಸ್ಥಾನ ಖಾತೆಯ ಮಂತ್ರಿಗಳಾದ ಸರದಾರ ವಲ್ಲಭಭಾಯರ ದೂರದರ್ಶಿತ್ವ ಮತ್ತು ಮುತ್ಸದ್ದಿತನದ ಪರಿಣಾಮವಾಗಿ ಹಿಂದುಸ್ತಾನದಲ್ಲಿಯ ಸಂಸ್ಥಾನಗಳು ಬಹ್ವಂಶದಿಂದ ಇತ್ತೀಚಿಸರಕಾರದನಿಯಂತ್ರಣಕ್ಕೊಳಪಟ್ಟವು ಇದರಿಂದ ಹಿಂದುಸ್ತಾನದ ಸಾರ್ವಾಂಗಿಕ ಪ್ರಗತಿಗೆ ಬಹಳ ಸಹಾಯವಾಗುವದು. ಬ್ರಿಟಿಶರು ಇಲ್ಲಿಂದ ಕಾಲ್ತೆಗೆಯುವಾಗ ಈ ಸಂಸ್ಥಾನಿಕರಿಗೆ ಸಾರ್ವಭೌಮಾಧಿಕಾರವನ್ನು ಕೊಟ್ಟು ಹೋದರು. ಸಂಸ್ಥಾನಿಕರೆಲ್ಲ ಅದನ್ನುಪಯೋಗಿಸಿಕೊಳ್ಳಲಣಿಯಾಗಿದ್ದರೆ ಮೊದಲೇ ಇಬ್ಭಾಗವಾಗಿರುವ ಹಿಂದುಸ್ತಾನ ರಾಷ್ಟ್ರವು ಮತ್ತಷ್ಟು ಹರಿದು ಹಂಚಿ ಹೋಗಿ ಜಗತ್ತಿನಲ್ಲಿ ಇದೊಂದು ಅತ್ಯಂತ ದುರ್ಬಲ ರಾಷ್ಟ್ರವಾಗಿ ಪರಿಣಮಿಸುತ್ತಿತ್ತು; ಗಳಿಸಿದ ಸ್ವಾತಂತ್ರ್ಯವೂ ಮಾಯವಾಗಿ ಹೋಗಬಹುದಾಗಿತ್ತು. ಆದರೆ ಸರದಾರ ವಲ್ಲಭಭಾಯರು ಅತ್ಯಂತ ಸಾಹಸ ಮಾಡಿ ಈ ಸಂಸ್ಥಾನಗಳನ್ನೆಲ್ಲ ನಿಯಂತ್ರಣದಲ್ಲಿ ತಂದುಕೊಂಡರು. ಹೈದರಾಬಾದ, ಕಾಶ್ಮೀರ ಜುನಾಗಡ ಈ ಮೂರು ಸಂಸ್ಥಾನಗಳನ್ನು ಬಿಟ್ಟು ಉಳಿದವೆಲ್ಲವೂ ಹಿಂದೀ ಒಕ್ಕೂಟ ಸರಕಾರದ ನಿಯಂತ್ರಣಕ್ಕೆ ಬಂದದ್ದರಿಂದ ಬ್ರಿಟಿಶರು ಅವರಿಗೆ ಕೊಟ್ಟ ಸಾರ್ವಭೌಮಾಧಿಕಾರದ ದುರುಪಯೋಗವಾಗದಂತಾಯಿತು. ಲಾರ್ಡ ಡಾಲಹೌಸಿ ಮೊದಲಾದ ಬ್ರಿಟಿಶ ಅಧಿಕಾರಿಗಳಿಗೆ ಹಿಂಸೆಯಿಂದ, ದಬ್ಬಾಳಿಕೆಯಿಂದ ಸಾಧ್ಯವಾಗದ್ದು ಸರದಾರ ವಲ್ಲಭಭಾಯರಿಗೆ ಜಾಣತನದಿಂದ ಅಹಿಂಸೆಯಿಂದ ಮತ್ತು ನ್ಯಾಯ್ಯವಾಗಿ ಸಾಧ್ಯವಾಯಿತು. ಹಿಂದುಸ್ತಾನದ ಐಕ್ಯಕ್ಕೆ ಒಳ್ಳೆ ಭದ್ರವಾದ ತಳಹದಿ ಇದರಿಂದ ಹಾಕಿದಂತಾಯಿತು.

ರಾಜಕೀಯ ದೃಷ್ಟಿಯಿಂದ ಒಳ್ಳೆ ಆವಶ್ಯಕ ಮತ್ತು ಪ್ರಯೋಜನಕಾರಿಯಾದ ಈ ಬದಲಾವಣೆಯಿಂದ ಆರ್ಥಿಕ ಮೊದಲಾದ ಲಾಭಗಳೂ ಆದುದುಂಟು. ಸಣ್ಣ ಸಣ್ಣ ಸಂಸ್ಥಾನಗಳನ್ನಿಡುವದರಿಂದ ಆಡಳಿತ ವೆಚ್ಚವು ಹೆಚ್ಚು ಬರುತಿತ್ತು. ಬೇರೆ ಬೇರೆ ಕಾಯದೆಗಳು ಆಯಾ ಸಂಸ್ಥಾನಗಳಲ್ಲಿ ಇದ್ದುದರಿಂದ ವ್ಯಾಪಾರ, ಉದ್ಯಮ, ಉತ್ಪಾದನೆ ಮೊದಲಾದವುಗಳಿಗೂ ಬಹಳ ಅಡಚಣಿಯಾಗುತಿದ್ದಿತು. ಈ ಸಂಸ್ಥಾನಗಳಲ್ಲಿ ಕರ, ಜಕಾತಿ ಮುಂತಾದವುಗಳ ಪದ್ಧತಿಯೂ ಬೇರೆಯಿದ್ದುದರಿಂದ ಅನವಶ್ಯಕ ಸ್ಪರ್ಧೆಗೂ ಅವಕಾಶವುಂಟಾಗಿದ್ದಿತು. ಅಸ್ವಾಭಾವಿಕವಾಗಿದ್ದ ಈ ವಿಭಾಗಗಳಿಂದ ಔದ್ಯೋಗೀಕರಣಕ್ಕೂ ಬಹಳ ತೊಂದರೆಯಾಗಿದ್ದಿತು. ಸಂಸ್ಥಾನವುಎಷ್ಟುಸಣ್ಣದಾಗಿದ್ದರೂ ಆಯಾತ ನಿರ್ಯಾತಗಳನ್ನು ನಿಯಂತ್ರಿಸುವ ಅಧಿಕಾರ ಅದಕ್ಕೆ ಇದ್ದುದರಿಂದ ವ್ಯಾಪಾರಕ್ಕೆ ಬಹಳ ತಡೆಯುಂಟಾಗುತಿತ್ತು. ಹಿಂದೀ ಒಕ್ಕೂಟದಲ್ಲಿ ನಿರ್ಬಂಧಿಸಲಾಗಿದ್ದ ವಸ್ತುಗಳಿಗೆ ಈ ಸಂಸ್ಥಾನಗಳಲ್ಲಿ ನಿರ್ಬಂಧವಿರದ್ದರಿಂದ ಕಳ್ಳತನದ ವ್ಯವಹಾರಕ್ಕೆ ಬೇಕಾದಷ್ಟು ಅವಕಾಶವುಂಟಾಗಿದ್ದಿತು. ಹಿಂದುಸ್ತಾನದಲ್ಲಿಯ ಅವಶ್ಯಕ ಪದಾರ್ಥಗಳು ಸಂಸ್ಥಾನ ಸೀಮೆಯನ್ನು ಸೇರಿ ಅಲ್ಲಿಂದ ಹೇಗೆ ಕಳ್ಳತನದ ವ್ಯಾಪಾರ ನಡೆಯುತಿದ್ದಿತೆಂಬದನ್ನು ನೆನೆದರೆ ಸರದಾರ ವಲ್ಲಭಭಾಯರು ಸಾಧಿಸಿದ ಈ ರಕ್ತರಹಿತ ರಾಜ್ಯಕ್ರಾಂತಿಯು ಎಷ್ಟೊಂದು ಪರಿಣಾಮಕಾರಿಯಾಗಿದೆಂಬುದರ ಅನುಭವವು ಎಲ್ಲರಿಗೂ ಬರುವದುಂಟು. ಮದ್ಯಪಾನ ಪ್ರತಿಬಂಧದಂಥ ಅತ್ಯಂತ ಆವಶ್ಯಕ ವಿಷಯದಲ್ಲಿಯೂ ಸಂಸ್ಥಾನಿಕರು ಸಾಕಷ್ಟುಸಹಕಾರ ಮಾಡದಿದ್ದುದರಿಂದ ಬಹಳಷ್ಟು ಹಾನಿ ಮಾಡಿಕೊಂಡೂ ಆ ಧೋರಣವನ್ನು ಸ್ವೀಕರಿಸಿದ ಪ್ರಾಂತೀಯ ಸರಕಾರಗಳ ಉದ್ದೇಶವು ಸಫಲವಾಗುತಿರಲಿಲ್ಲೆಂಬುದೂ ಅನುಭವದ ಮಾತಾಗಿದೆ. ರೈತರು, ಕೂಲಿಕಾರರು ಮೊದಲಾದವರ ಸಾಹಸ ಪ್ರಯತ್ನಗಳಿಗೂ ಸಂಸ್ಥಾನಿಕರ ಸ್ವಚ್ಛಂದ ಆಡಳಿತದ ಮೂಲಕ ಅನೇಕ ಸಂದರ್ಭಗಳಲ್ಲಿ ಅಡೆತಡೆಗಳುಂಟಾಗುತಿದ್ದವೆಂಬುದೂ ಎಲ್ಲರ ನಿದರ್ಶನಕ್ಕೆ ಬಂದ ಸಂಗತಿಯಾಗಿದೆ.

ಹೀಗೆ ಯಾವ ದೃಷ್ಟಿಯಿಂದ ವಿಚಾರ ಮಾಡಿದರೂ ಸಂಸ್ಥಾನಗಳು ಹಿಂದುಸ್ತಾನದ ಸಾರ್ವಾಂಗಿಕ ಪ್ರಗತಿಗೆ ಅಡ್ಡಿಯಾಗಿದ್ದುವು. ಇವೆಲ್ಲ ಈಗ ಹಿಂದುಸ್ತಾನ ಸರಕಾರದ ನಿಯಂತ್ರಣದಲ್ಲಿ ಬಂದುದರಿಂದ ಮೊದಲಿದ್ದ ಅಂಜಿಕೆ ಮಾಯವಾಗಿದೆ. ಇಷ್ಟು ಅಲ್ಪಾವಧಿಯಲ್ಲಿ ಸಂಸ್ಥಾನ ಖಾತೆಯವರು ಪಡೆದ ಯಶಸ್ಸು ನಿಜವಾಗಿ ಅಭಿನಂದನೀಯವಾಗಿದೆ. ಸ್ವಾತಂತ್ರ್ಯ ಪ್ರಾಪ್ತಿಯ ನಂತರದ ಪ್ರಥಮ ಫಲವಿದೆಂದು ಹೇಳಬಹುದು. ಹೈದ್ರಾಬಾದ ಕಾಶ್ಮೀರ ಸಮಸ್ಯೆಗಳೂ ಬೇಗ ಬಗೆಹರಿಯಲೆಂದು ಈ ಸಮಯದಲ್ಲಿ ಹಾರಯಿಸಬಹುದಾಗಿದೆ.

ರಾಯಭಾರಿ ಶ್ರೀ ಎಂ. ಆರ್. ಮಸಾನಿ

ಬ್ರೇಝಿಲ (ದ. ಅಮೇರಿಕಾ) ರಾಷ್ಟ್ರಕ್ಕೆ ನಮ್ಮ ರಾಯಭಾರಿಯಾಗಿ ಹೋಗಿರುವ ಶ್ರೀ ಮಿನೂ ಮಸಾನಿಯವರು ಸ್ವಾತಂತ್ರ್ಯ ಹೋರಾಟದಲ್ಲಿ ಸಂತತವಾಗಿ ದುಡಿದವರು. ಮೊದಲು ಇವರು ಸಾಮ್ಯವಾದಿಗಳಾಗಿದ್ದರು. ಆದರೆ ಮುಂದೆ ಸಾಮ್ಯವಾದದಿಂದ ನಿಜವಾದ ಸುಖಸಮೃದ್ಧ ಸಮಾಜದ ನಿರ್ಮಾಣವಾಗಲಾರದೆಂದುಕೊಂಡು ಒಂದು ಬಗೆಯ ಗಾಂಧೀವಾದಿ ತತ್ವಜ್ಞಾನವನ್ನು ಪ್ರತಿಪಾದಿಸಿ "Socialism Reconsidered" (ಸಾಮ್ಯವಾದದ ಪುನರ್ವಿಮರ್ಶೆ) ಎಂಬ ಪುಸ್ತಕ ಬರೆದರು. ಕೇಂದ್ರ ಶಾಸನಸಭೆಯ ಸದಸ್ಯರೂ ಮುಂದೆ ಘಟನಾ ಸಮಿತಿಯ ಸದಸ್ಯರೂ ಆಗಿ ಪಾರ್ಲಮೆಂಟರಿ ರಂಗದಲ್ಲಿಯೂ ಅನುಭವ ಹೊಂದಿದ್ದಾರೆ.

●

ವಾರದ ಸಿಂಹಾವಲೋಕನ

ಕಳ್ಳತನದ ಸಾಗಾಟ

ಆಹಾರ ಪದಾರ್ಥಗಳ ಕಳ್ಳತನದ ಸಾಗಾಟವು ಹಲವು ದಿನಗಳಿಂದ ಒಂದೇ ಸವನೆ ನಡೆಯುತಿದೆ. ಇದರ ಪರಿಣಾಮವಾಗಿಯೇ ಹಿಂದುಸ್ತಾನದಲ್ಲಿ ಆಹಾರ ಪದಾರ್ಥಗಳ ಧಾರಣಿ ಮಿತಿಮೀರಿ ಏರಿದ್ದುಂಟು. ಹಿಂದೆ ನೇಪಾಳ, ಚೀನ ಮೊದಲಾದ ದೇಶಗಳೊಡನೆ ಈ ಕಳ್ಳತನದ ವ್ಯಾಪಾರ ನಡೆದಿದ್ದರೆ ಈಗ ಪಾಕಿಸ್ತಾನಕ್ಕೂ ಕಳ್ಳತನದಿಂದ ಆಹಾರ ಪದಾರ್ಥಗಳು ಮತ್ತು ಬಟ್ಟೆ ಮೊದಲಾದ ಅವಶ್ಯಕ ಪದಾರ್ಥಗಳು ಸಾಗುತಿವೆಯೆಂದು ತಿಳಿದು ಬಂದಿದೆ. ಜೂನ ತಿಂಗಳಲ್ಲಿ ಸುಮಾರು ೨೫ ಲಕ್ಷ ರೂಪಾಯಿ ಬೆಲೆಯ ಬಟ್ಟೆ ಪಾಕಿಸ್ತಾನಕ್ಕೆ ಸಾಗಿಸಲ್ಪಟ್ಟಿತೆಂಬ ಬಗ್ಗೆ ಸಾಕಷ್ಟು ಪುರಾವೆಗಳು ದೊರೆತಿವೆಯಂತೆ. ಪೂರ್ವ ಬಂಗಾಲದಲ್ಲಿ ಆಹಾರ ಪದಾರ್ಥಗಳ ಮತ್ತು ಇತರ ಉಪಕರಣಗಳ ಕೊರತೆಯಿದ್ದು ಹಿಂದುಸ್ತಾನದಿಂದ ಅವು ಸಾಗಿಸಲ್ಪಟ್ಟಿವೆ. ಸಿಗರೇಟು ಚಹಾ ಮತ್ತು ಇತರ ಪದಾರ್ಥಗಳೂ ಹಿಂದುಸ್ತಾನದಿಂದ ಪಾಕಿಸ್ತಾನ ಪ್ರದೇಶಕ್ಕೆ ಹೋಗಿದ್ದು ಕಂಡು ಬಂದಿದೆ. ಈ ಕಳ್ಳತನದ ಸಾಗಾಟಕ್ಕಾಗಿ ಕಂಪನಿಯೊಂದು ಸ್ಥಾಪಿತವಾಗಿದ್ದು ದಿಲ್ಲಿಯಿಂದ ಗಾಜೀಬಾದದ ವರೆಗಿನ ೨೦ ಮೈಲು ಬಟ್ಟೆಯನ್ನು ಸಾಗಿಸಲು ಒಂದು ಟ್ರಕ್ಕಿಗೆ ೧೬೦೦ ರೂಪಾಯಿ ತೆಗೆದುಕೊಳ್ಳುತಿರುವರೆಂದು ವರದಿಯಾಗಿದೆ. ಇಷ್ಟು ಹಣವನ್ನು ಒಳ್ಳೆ ಸಂತೋಷದಿಂದ ಕೊಡಲಾಗುತ್ತಿದೆಯಂತೆ. ಏಕೆಂದರೆ ಬಟ್ಟೆಯೆಂದರೆ ಪಾಕಿಸ್ತಾನದಲ್ಲಿ ಬಂಗಾರಕ್ಕಿಂತ ದುರ್ಮಿಳವಾದ ಪದಾರ್ಥವಾಗಿದ್ದು ಒಂದು ರೂಪಾಯಿಗೆ ವಾರ ಇದ್ದ ಅರಿವೆ ೭ ರೂ. ವಾರಿನಂತೆ ಮಾರಲ್ಪಡುತಿದೆಯಂತೆ. ಸರಕಾರದವರು ಇದನ್ನು ತಡೆಯಲು ಕ್ರಮವನ್ನೇನೋ ತೆಗೆದುಕೊಳ್ಳುತಿರುವರು. ಆದರೆ ಯಶಸ್ಸು ಸಿಕ್ಕಲೊಲ್ಲದು. ಹೆಚ್ಚು ಉಗ್ರಕ್ರಮ ಕೈಕೊಂಡು ಈ ಕಳ್ಳತನದ ಸಾಗಾಟವನ್ನು ನಿಲ್ಲಿಸಬೇಕು, ಇಲ್ಲವೆ ಉತ್ಪಾದನೆಯನ್ನು ಹೆಚ್ಚಿಸಿ ಅನಿರ್ಬಂಧ ವ್ಯಾಪಾರಕ್ಕೆ ಅವಕಾಶ ಮಾಡಿಕೊಡಬೇಕು. ಹಾಗಾಗದಿದ್ದರೆ ಹಿಂದುಸ್ತಾನದಲ್ಲಿ ಆಹಾರ ಪದಾರ್ಥ, ಬಟ್ಟೆ ಮತ್ತು ಇನ್ನಿತರ ಅವಶ್ಯಕ ಪದಾರ್ಥಗಳ ಕೊರತೆಯಾಗುವಲ್ಲಿ ಸಂದೇಹವಿಲ್ಲ.

ಜಮೀನದಾರಿ ನಿರ್ಮೂಲನ

ಬಿಹಾರ ಶಾಸನ ಸಭೆಗಳಲ್ಲಿ ಕಳೆದ ಒಂದು ವರುಷದಿಂದ ಚರ್ಚಿಸಲಾಗುತಿದ್ದ ಜಮೀನದಾರೀನಿರ್ಮೂಲನ ಮಸೂದೆಯುಸ್ವೀಕೃತವಾಗಿ ಗವರ್ನರ ಜನರಲ್‌ರ ಒಪ್ಪಿಗೆಯನ್ನು ನಿರೀಕ್ಷಿಸುತಿದೆ. ಕಂದಾಯ ಮಂತ್ರಿಗಳು ಮುಂದಿಸಿದ್ದ ಈ ಮಸೂದೆಗೆ ಒಂದು ಸಾವಿರ ಉಪಸೂಚನೆಗಳು ಬಂದಿದ್ದುವು. ಶಾಸನ ಸಭೆಯಲ್ಲಿ ಹದಿನಾರು ದಿನ ಮತ್ತು ವಿಧಿ ಮಂಡಳದಲ್ಲಿ ಏಳು ದಿನ ಮಸೂದೆಯ ಬಗ್ಗೆ ಕೂಲಂಕಷ ಚರ್ಚೆಯಾಗಿ ಜಮೀನದಾರರಿಗೆ ಪರಿಹಾರ ಕೊಟ್ಟು ಅವನ್ನು ನಿರ್ಮೂಲಗೊಳಿಸಬೇಕೆಂದು ನಿರ್ಣಯಿಸಲಾಯಿತು. ಜಮೀನದಾರರು ಶಾಸನ ಸಭೆಗಳಲ್ಲಿ ಬಹಳ ವಿರೋಧ ಮಾಡಿದ್ದರಿಂದ ಪರಿಹಾರದ ಮಿತಿಯು ೧೦೦೦ ರೂಪಾಯಿ ಉತ್ಪನ್ನದಿಂದ ೫೦೦ ರೂ. ಉತ್ಪನ್ನಕ್ಕಿಳಿಯಿತು, ೫೦೦ಕ್ಕಿಂತ ಹೆಚ್ಚು ಉತ್ಪನ್ನವಿದ್ದವರಿಗೆ ಉತ್ಪನ್ನದ ಇಪ್ಪತ್ತು ಪಟ್ಟು, ೧೫೦೦ರ ವರೆಗೆ ಹತ್ತೊಂಭತ್ತು, ಅಲ್ಲಿಂದ ೨೦೦೦ ರೂ ವರೆಗೆ ಹದಿನೆಂಟು ಪಟ್ಟು, ೨೭೫೦ ರೂ. ವರೆಗೆ ಹದಿನೇಳು ಪಟ್ಟು, ೩೫೦೦ ವರೆಗೆ ೧೬ ಪಟ್ಟು ೪೨೫೦ ರೂ. ವರೆಗೆ ೧೫ ಪಟ್ಟು, ೫೦೦೦ ರೂ. ವರೆಗೆ ಹದಿನಾಲ್ಕು ಪಟ್ಟು ೧೦೦೦೦ ವರೆಗೆ ಹತ್ತು ಪಟ್ಟು ೨೦೦೦೦ ವರೆಗೆ ಎಂಟು ಪಟ್ಟು ೫೦೦೦೦ ವರೆಗೆ ಆರುಪಟ್ಟು ಒಂದು ಲಕ್ಷದ ವರೆಗೆ ನಾಲ್ಕು ಪಟ್ಟು ಮತ್ತು ಒಂದು ಲಕ್ಷಕ್ಕಿಂತ ಹೆಚ್ಚು ಉತ್ಪನ್ನವಿದ್ದವರಿಗೆ ಉತ್ಪನ್ನದ ಮೂರುಪಟ್ಟು ಪರಿಹಾರ ಕೊಡಬೇಕೆಂದುಗೊತ್ತಾಗಿದೆಜಮೀನದಾರರವಿರೋಧ ಹೆಚ್ಚಾದ್ದರಿಂದ ಪರಿಹಾರ ದ್ರವ್ಯದ ಮಿತಿಯೂ ಈ ರೀತಿ ಹೆಚ್ಚಿತು. ಈ ಮಸೂದೆಗೆ ಗವರ್ನರ ಜನರಲ್‌ರ ಮನ್ನಣೆ ದೊರೆತದ್ದಾದರೆ—ದೊರೆವುದರಲ್ಲಿ ಸಂದೇಹವಿಲ್ಲ—ಸಾವಿರಾರು ವರುಷಗಳಿಂದ ಅಸ್ತಿತ್ವದಲ್ಲಿದ್ದ ಜಮೀನದಾರಿ ಪದ್ಧತಿಯು ಬಿಹಾರದಲ್ಲಿ ಇಲ್ಲದಂತಾಗುವದು.

ತುರಂಗಗಳ ಸುಧಾರಣೆ

ಮುಂಬಯಿ ಪ್ರಾಂತದ ತುರಂಗಗಳಲ್ಲಿ ಅಗತ್ಯ ಸುಧಾರಣೆಗಳನ್ನು ಕುರಿತು ವಿಚಾರ ಮಾಡಲು ನೇಮಕವಾಗಿದ್ದ ಸಮಿತಿಯು ಮಾಡಿದ ಸೂಚನೆಗಳನ್ನು ಪ್ರಾಂತೀಯ ಸರಕಾರವು ಬಹ್ವಂಶದಿಂದ ಒಪ್ಪಿದ್ದು ಈಗಾಗಲೆ ಕೆಲ ಸೂಚನೆಗಳು ಕಾರ್ಯರೂಪಕ್ಕೆ ಬಂದಿವೆಯೆಂದು ಪ್ರಸಿದ್ಧವಾಗಿದೆ. ಅ. ಬ. ಕ. ಎಂದು ಇದ್ದ ಮೂರು ವರ್ಗಗಳ ಬದಲು ಆಯಾ ಜನರ ಶಿಕ್ಷಣ ಜೀವನ ಮಟ್ಟ ಮೊದಲಾದ್ದನ್ನು ಲಕ್ಷಿಸಿ ಕೇವಲ ಒಂದನೆ ಮತ್ತು ಎರಡನೇ ಹೀಗೆ ಎರಡೇ ವರ್ಗಗಳನ್ನು ಮಾಡಬೇಕೆಂದು ಸಮಿತಿ ಸೂಚಿಸಿದೆ. ತುರಂಗಗಳೆಂದರೆ ಕೈದಿಗಳನ್ನು ಪೀಡಿಸತಕ್ಕ ಸ್ಥಳಗಳಾಗಿರದೆ ಕೈದಿಗಳಲ್ಲಿನ ದುಷ್ಪ್ರವೃತ್ತಿಗಳನ್ನು ಹೋಗಲಾಡಿಸಿ ಅವರನ್ನು ಸನ್ಮಾರ್ಗಕ್ಕೆ ಹಚ್ಚಿ ಅವರಿಗೆ ಜೀವನೋಪಾಯಗಳನ್ನು ಕಲ್ಪಿಸಿಕೊಡತಕ್ಕ ಸಾಧನಗಳಾಗಿ ಪರಿಣಮಿಸತಕ್ಕದ್ದು. ಇದನ್ನು ಲಕ್ಷಿಸಿ ಸಮಿತಿಯವರು ಕೈದಿಗಳಿಗೆ ಉದ್ಯೋಗ ಧಂದೆಗಳನ್ನು ಕಲಿಸಬೇಕು. ಅವರು ಜೇಲುಗಳಲ್ಲಿ ಸಂಪಾದಿಸಿದ ಹಣವನ್ನು ಮನೆಗೆ ಒಯ್ಯಲು ಅವಕಾಶವಿರಬೇಕು ಮೊದಲಾಗಿ ಸೂಚಿಸಿದೆ. ಈ ಉದ್ದೇಶ ಸಾಧಿಸಲು ಜೇಲುಗಳಲ್ಲಿ ಕಾರಖಾನೆಗಳನ್ನು ತೆಗೆಯಲು ಸೂಚಿಸಲಾಗಿದೆ. ಕೈದಿಗಳಿಗೆ ಬೀಡಿಗಳನ್ನು ಪೂರಯಿಸಬೇಕೆಂದು ಸಮಿತಿ ಮಾಡಿದ ಸೂಚನೆಗೆ ಹಲವರು ಆಕ್ಷೇಪಿಸಬಹುದಾದರೂ ತುರಂಗಗಳಲ್ಲಿ ಈ ಬಗ್ಗೆ ನಡೆಯುತಿದ್ದ ಕಳ್ಳ ವ್ಯಾಪಾರ ಅನಿಷ್ಟ ವರ್ತನೆ ನೋಡಿದರೆ ಬೀಡಿಗಳನ್ನು ಒದಗಿಸುವದೇನು ಅಷ್ಟು ಅಸಮಂಜಸವಲ್ಲೆಂದು ಒಪ್ಪಬೇಕಾಗುವದು. ಈ ಸುಧಾರಣೆಗಳಿಂದ ಕೈದಿಗಳ ಸ್ಥಿತಿ ಸುಧಾರಿಸಿ ಅವರು ಒಳ್ಳೆ ನಾಗರಿಕರಾಗಿ ತುರಂಗಗಳಿಂದ ಹೊರಬಂದರೆ ಸರಕಾರದ ಉದ್ದೇಶವು ಸಫಲವಾಗುವದು.

ಕಾಶ್ಮೀರ ಸಮಿತಿಯ ಕರ್ತವ್ಯ

ಯುಕ್ತರಾಷ್ಟ್ರ ಸಂಘವು ನಿಯಮಿಸಿದ ಕಾಶ್ಮೀರ ಸಮಿತಿಯು ಈಗ ಹಿಂದುಸ್ತಾನಕ್ಕೆ ಬಂದದ್ದು ತನ್ನ ಕಾರ್ಯವನ್ನು ಇಷ್ಟರಲ್ಲಿಯೇ ಪ್ರಾರಂಭಿಸಲಿದೆ. ಅದರ ಸದಸ್ಯರು ಕರಾಚಿಗೆ ಬಂದಿಳಿದಾಗಪಾಕಿಸ್ತಾನ ಮಂತ್ರಿಗಳನ್ನುಸಂದರ್ಶಿಸಿ, ಹೊಸದಿಲ್ಲಿಗೆ ಬಂದ ಕೂಡಲೆ ಹಿಂದುಸ್ತಾನದ ವಿದೇಶ ಖಾತೆಯ ಮಂತ್ರಿ ಜವಾಹರಲಾಲ ಮತ್ತು ಕಾರ್ಯದರ್ಶಿ ವೆಲ್ಲೊಡಿಯವರನ್ನುಕಂಡು ಚರ್ಚಿಸಿದರು. ಹಿಂದುಸ್ತಾನ ಮತ್ತು ಪಾಕಿಸ್ತಾನಗಳಲ್ಲಿನ ಈದುಃಖದಾಯಕ ಸಮಸ್ಯೆಯು ನ್ಯಾಯ್ಯ ಹಾಗೂ ಸಮಂಜಸ ರೀತಿಯಲ್ಲಿ ಬಗೆಹರಿಯುವಂತೆ ಉಭಯ ರಾಷ್ಟ್ರಗಳಿಗೆ ಸಹಾಯ ನೀಡುವೆವು. ಇದಕ್ಕಾಗಿ ಉಭಯ ರಾಷ್ಟ್ರಗಳು ನಮಗೆ ಸಹಾಯ ಮಾಡಬೇಕು ಎಂದು ಸಮಿತಿಯ ಧುರೀಣರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಸಂಯುಕ್ತ ರಾಷ್ಟ್ರ ಸಭೆಯಲ್ಲಿ ನಡೆದ ಚರ್ಚೆ ಸ್ವೀಕೃತವಾದ ನಿರ್ಣಯ ಮತ್ತುನೇಮಕವಾದ ಸಮಿತಿಯು ಮಾಡತಕ್ಕ ಕರ್ತವ್ಯ ಮೊದಲಾದ್ದನ್ನು ಸೂಕ್ಷ್ಮ ರೀತಿಯಿಂದ ವಿಚಾರಿಸಿದರೆ ಕಾಶ್ಮೀರ ಸಮಸ್ಯೆಯನ್ನು ಚೆನ್ನಾಗಿ ತಿಳಿದುಕೊಳ್ಳದೆ ಇದೆಲ್ಲ ನಡೆದಿದೆ ಎಂದು ಗೊತ್ತಾಗುವದು. ಮೊದಲು ಮಾಡತಕ್ಕ ಕೆಲಸವನ್ನು ಸಮಿತಿಯು ಮಾಡಲು ಪ್ರಯತ್ನಿಸದೆ ತಮಗೆ ಸರಿದೋರಿದ್ದನ್ನು ಮಾಡಲು ಹವಣಿಸಿದರೆ ಅವರ ಕಾರ್ಯವೆಂತು ಯಶಸ್ವಿಯಾಗಬೇಕು? ಕಾಶ್ಮೀರ ಸಮಸ್ಯೆ ಬಿಡಲು ಮುಖ್ಯವಾಗಿ ಎರಡು ಮಾತುಗಳಿವೆ. ಮೊದಲನೆಯದಾಗಿ ದಾಳಿಗಾರರ ಆಕ್ರಮಣ ಮತ್ತುಅದಕ್ಕೆ ಪಾಕಿಸ್ತಾನಸರಕಾರದಿಂದಸಿಕ್ಕುತಿರುವ ಸಹಾಯ ಕೂಡಲೆ ನಿಲ್ಲಬೇಕು. ಇದು ಸಾಧ್ಯವಾದರೆ ಮಾತ್ರಜನಮತವನ್ನುತಿಳಿದುಕೊಳ್ಳಲಿಕ್ಕೆ ಆವಶ್ಯಕವಾದ ಸಾರ್ವತ್ರಿಕ ಮತಗಣನೆ ನಡೆಯಲು ಅವಕಾಶ ಸಿಕ್ಕುವದು. ದಾಳಿಗಾರರ ಅತಿಕ್ರಮಣ ಅನಿರ್ಬಂಧ ಸಾಗಿರುವಾಗ ಸಾರ್ವತ್ರಿಕ ಮತಗಣನೆ ಮಾಡುವದು ಹಾಸ್ಯಾಸ್ಪದವಷ್ಟೆ. ಈ ಮಹತ್ವದ ಮಾತನ್ನು ಅಲಕ್ಷಿಸಿ ಕಾಶ್ಮೀರ ಸಮಿತಿಯವರು ಕಾರ್ಯಕ್ಷಮಯಾದರೆ ಅದೆಂತು ಯಶಸ್ವಿಯಾಗಬಲ್ಲದು? ದಾಳಿಗಾರರಿಗೆ ಪಾಕಿಸ್ತಾನ ಸರಕಾರವು ಪ್ರತ್ಯಕ್ಷ ಅಪ್ರತ್ಯಕ್ಷ ಸಹಾಯವನ್ನು ಸಲ್ಲಿಸುತಿದೆಂಬುದು ಇದೀಗ ಸ್ಪಷ್ಟವಾಗಿದೆ. ಇದನ್ನು ನಿಲ್ಲಿಸದೆ ಹಿಂದುಸ್ತಾನದ ಸೈನಿಕರನ್ನು ಹಿಂದಕ್ಕೆ ಕಳಿಸುವ ಇಲ್ಲವೆ ಸಾರ್ವತ್ರಿಕ ಮತಗಣನೆ ನಡೆಸುವ ಸಾಹಸ ಮಾಡಿದರೆ ಅದೆಂದಿಗೂ ಯಶಸ್ವಿಯಾಗದು. ಕಾಶ್ಮೀರ ಸಮಿತಿಯವರು ಈ ಮಹತ್ವದ ಮುದ್ದೆಯನ್ನರಿತು ಕಾರ್ಯಪ್ರವೃತ್ತರಾದರೆ ಉದ್ದಿಷ್ಟವು ಸಫಲವಾಗಬಲ್ಲದು. ಇಲ್ಲದಿದ್ದರೆ ಸಮಸ್ಯೆ ಮತ್ತಷ್ಟು ಗಂಭೀರವಾಗುವದೆಂಬುದು ನಿರ್ವಿವಾದವಾಗಿದೆ.

ದ್ವಿದಲ ರಾಜ್ಯಪದ್ಧತಿ ಹೋಗಬೇಕು

ಈಗ, ಕಾಂಗ್ರೆಸ್ಸು ಉಪಯುಕ್ತ ಸಂಸ್ಥೆಯಾಗುವಂತೆ ಅದನ್ನು ಹೇಗೆ ಬಲಗೊಳಿಸಬೇಕು, ಅದು ಹರಿಹಂಚಾಗದಂತೆ ಹೇಗೆ ನೋಡಿಕೊಳ್ಳಬೇಕು ಎಂಬೀ ವಿಚಾರಗಳನ್ನು ಸ್ಪಷ್ಟಗೊಳಿಸುವೆ.

ಎಲ್ಲಕ್ಕಿಂತ ಮೊದಲು ಮಾಡಬೇಕಾದುದೆಂದರೆ, ನನ್ನ ಅಭಿಪ್ರಾಯದಲ್ಲಿ, ಕಾಂಗ್ರೆಸ್ಸಿನಲ್ಲಿರುವ ದ್ವಿದಲ ಸತ್ತ್ರಿಯನ್ನು ಹೋಗಲಾಡಿಸುವ ಕೆಲಸ. ಕಾಂಗ್ರೆಸ್ಸಿನ ಆಶ್ರಯದಲ್ಲಿ ಪಾರ್ಲಮೆಂಟರಿ ಅಂದರೆ ಶಾಸನಸಭೆಗಳಲ್ಲಿ ಪ್ರವೇಶಿಸಿ ಕೆಲಸ ಮಾಡುವ ಕಾರ್ಯಕ್ರಮಕ್ಕೆ ಅವಕಾಶ ಕೊಡಬೇಕೋ ಬೇಡವೋ ಎಂಬ ವಿಷಯದಲ್ಲಿ ಕಾಂಗ್ರೆಸ್ಸಿಗರೊಳಗೆ ಮತಭೇದ ಹಲವು ಕಾಲದಿಂದಲೂ ಇತ್ತು. ಈ ಮಾತು ಎಲ್ಲರಿಗೂ ಗೊತ್ತಿದೆ. ಆದರೂ ಆ ಕಾರ್ಯಕ್ರಮಕ್ಕೆ ಪ್ರವೇಶದೊರೆತು ಅದು ನೆಲೆಯೂರಿಬಿಟ್ಟಿತು. ಆದರೆ ಆಗಿನ ಕಾಲದ ಸರಕಾರದ ವಿರುದ್ಧ ಬಂಡು ಹೂಡುವದೇ ಕಾಂಗ್ರೆಸ್ಸಿನ ಮುಖ್ಯ ಗುರಿಯಾಗಿದ್ದುದರಿಂದ, ಪಾರ್ಲಮೆಂಟರಿ ಚಟುವಟಿಕೆಗಳನ್ನು ಸರಕಾರದ ವಿರುದ್ಧ ಪಕ್ಷವೆಂಬ ಸಾಮಾನ್ಯ ದೃಷ್ಟಿಯಿಂದ ನಡೆಸುವದು ಕಾಂಗ್ರೆಸ್ಸಿಗೆ ಬೇಕಾಗಿದ್ದಿಲ್ಲ. ಹಾಗೇನಾದರೂ ಆದೀತೆಂಬ ಸಂಶಯದಿಂದಲೇ ಪಾರ್ಲಮೆಂಟರಿ ಚಟುವಟಿಕೆಗಳನ್ನು ಬಿಗಿಯಾಗಿ ಹಿಡಿತದಲ್ಲಿಟ್ಟುಕೊಳ್ಳಲು ಸ್ವತಃ ತಾವು ಶಾಸನ ಸಭೆಗಳಿಂದ ಹೊರಗೇ ಉಳಿದ ಉಚ್ಚಕೋಟಿಯ ಮುಂದಾಳುಗಳ ಸಮಿತಿಯನ್ನು ಏರ್ಪಡಿಸಲಾಯಿತು. ಕಾಂಗ್ರೆಸ್ ಹೈಕಮಾಂಡ್ ಇಲ್ಲವೇ ವರಿಷ್ಠ ವರ್ಗವೆಂಬ ಹೆಸರಿಂದ ಮುಂದೆ ಅದು ಪ್ರಸಿದ್ಧವಾಯಿತು.

೧೯೩೭ ರಲ್ಲಿ ಅನೇಕ ಪ್ರಾಂತಗಳಲ್ಲಿ ಕಾಂಗ್ರೆಸ ಮಂತ್ರಿಮಂಡಲಗಳಾದಾಗ ಪರಿಸ್ಥಿತಿ ತುಸು ಬದಲಾಯಿತು. ಕೇಂದ್ರದ ಅಧಿಕಾರ ಇನ್ನೂ ಕೈಸೇರಿದ್ದಿಲ್ಲವಾದುದರಿಂದ ಶಾಸನ ಸಭೆಗಳ ಹೊರಗಿನ ಒಂದು ಸಮಿತಿಯ ಮೂಲಕ ಪ್ರಾಂತಿಕ ಮಂತ್ರಿಮಂಡಲಗಳನ್ನು ಅಂಕೆಯಲ್ಲಿಟ್ಟುಕೊಳ್ಳುವದು ಅಷ್ಟೇನೂ ದುಸ್ತರವಾಗಿದ್ದಿಲ್ಲ. ಆದರೂ ಈ ದ್ವಿದಲ ಪದ್ಧತಿ ಆಗಲೇ ತೊಡಕುಗಳನ್ನುಂಟುಮಾಡತೊಡಗಿತ್ತು. ಖರೇ ಪ್ರಕರಣವೇ ಇದಕ್ಕೆ ಸಾಕ್ಷಿ.

ಭಾರತಕ್ಕೇ ಎಲ್ಲ ಅಧಿಕಾರವೂ ವರ್ಗಾಯಿಸಲ್ಪಟ್ಟು ಒಕ್ಕೂಟದ ಎಲ್ಲ ಘಟಕಗಳಲ್ಲಿಯೂ ಕೇಂದ್ರದಲ್ಲಿಯೂ ಕಾಂಗ್ರೆಸ್ ರಾಜ್ಯಭಾರವೇ ಪ್ರಾರಂಭವಾದಂದಿನಿಂದ ಪರಿಸ್ಥಿತಿ ಆಮೂಲಾಗ್ರವಾಗಿ ಬದಲಿಸಿದೆ. ಕಾಂಗ್ರೆಸ್ಸನ್ನು ರೂಪಿಸಿ, ಅದರ ನೇತೃತ್ವ ವಹಿಸಿ, ಅದನ್ನು ನಿಯಂತ್ರಣದಲ್ಲಿಟ್ಟುಕೊಂಡಿದ್ದ ಮೇಲಿನ ಮುಂದಾಳುಗಳು ಈಗ ತಾವೇ ಸರಕಾರದ ಅಂಗೋಪಾಂಗಗಳಾಗಿಬಿಟ್ಟಿದ್ದಾರೆ. ಇಬ್ಬರು ಮೂವರು ಪ್ರಮುಖ ನಾಯಕರು ಇಂದು ಹೊರಗೆ ಉಳಿದಿದ್ದರೆ, ಅದು ಕಾಂಗ್ರೆಸ್ಸಿನ ಶಾಸನ ಸಭಾತೀತ ಕಾರ್ಯಕ್ರಮಗಳ ಸಂಘಟನೆಗಾಗಿ ಹೊರತು, ಪಾರ್ಲಮೆಂಟರಿ ಚಟುವಟಿಕೆಗಳನ್ನು ಅಂಕೆಯಲ್ಲಿಟ್ಟುಕೊಳ್ಳುವ ಸಲುವಾಗಿ ಅಲ್ಲ.

ವಾಸ್ತವಿಕವಾಗಿ ವಿದ್ಯಮಾನ ಹೀಗಿದೆ: ಸರಕಾರದಲ್ಲಿ ಅಧಿಕಾರ ಸ್ವೀಕರಿಸಲು ಯೋಗ್ಯತೆಯಿಲ್ಲದ ಅಥವಾ ಮನಸಿಲ್ಲದ ವ್ಯಕ್ತಿಗಳು ಈ ಮುಂದಾಳುಗಳನ್ನು ಹಿಡಿತದಲ್ಲಿಟ್ಟುಕೊಳ್ಳಲಾರರು. ಕಾಂಗ್ರೆಸ್ಸು ಅಧಿಕಾರದಲ್ಲಿ ಪ್ರತಿಷ್ಠಿತವಾಗಿರುವಾಗ ಅದರ ಅಧ್ಯಕ್ಷನು ಅವಶ್ಯವಾಗಿ ಜನರ ಆದರಕ್ಕೆ ಪಾತ್ರನಾದ ಮುಂದಾಳಾಗಿದ್ದು ಸ್ವತಃ ಮುಖ್ಯ ಮಂತ್ರಿಪದಕ್ಕೆ ಅರ್ಹನಾಗಿರಬೇಕು. ಅವನು ಕಾಂಗ್ರೆಸ್ಸಿನ ನಾಮಮಾತ್ರ ಮುಖ್ಯಸ್ಥನಾಗಲಿ, ವರಿಷ್ಠವರ್ಗದ ನಾಮಕರಣ ಮಾತ್ರದಿಂದ ಇಲ್ಲವೆ ಹೇಗೋ ಹೇಗೋ ಆರಿಸಿ ಬಂದವನಾಗಲಿ ಇರಬಾರದು. ಅವನಲ್ಲಿ ಅಂಥ ಯೋಗ್ಯತೆಯಿಲ್ಲದೆ ಅಥವಾ ಇದ್ದೂ ಸರಕಾರದಲ್ಲಿ ಅಧಿಕಾರಾರೂಢನಾಗಲು ಇಚ್ಛಿಸದೆ, ಆದರೂ ಹೊರಗಿಂದ ಸರಕಾರವನ್ನು ಹಿಡಿತದಲ್ಲಿಟ್ಟುಕೊಳ್ಳಲು ಅವನು ಬಗೆದರೆ, ಆಗ ಅವನು ಅದರಲ್ಲಿ ಯಶಸ್ವಿಯಾಗಲಾರನು. ಇಲ್ಲವೆ ಆ ಪ್ರಯತ್ನದಲ್ಲಿ ತನ್ನದೇ ಒಂದು ಪ್ರತಿಸರಕಾರವನ್ನು, ಅರ್ಥಾತ್ ದ್ವಿದಲ ರಾಜ್ಯಪದ್ಧತಿಯನ್ನು ಸ್ಥಾಪಿಸುವನು. ಹೇಗೆಯೆ ಆದರೂ ಅದು ಬಹಿರಂಗವಾಗಿಯಾಗಲಿ ಗುಪ್ತವಾಗಿಯಾಗಲಿ ಕೆಲಸ ಮಾಡುತ್ತ ಸರಕಾರಕ್ಕೆ ವಿರೋಧಿಯಾಗಿಯೆ ತೀರುವದು. ಆದರಿಂದ ಕಾಂಗ್ರೆಸು ದುರ್ಬಲವಾಗದಿರದು. ಈಗ ನಡೆಯುತಿರುವದು ಇದೆ. ನನ್ನ ವಿಚಾರದಲ್ಲಿ ಇದು ಅವಾಸ್ತವ, ಅಸ್ವಸ್ಥ ಅವಸ್ಥೆಯೇ ಸರಿ.

ಅಖಿಲ ಭಾರತ ಕಾಂಗ್ರೆಸ್ಸಿನ ಅಧ್ಯಕ್ಷನಿಗೆ ಅನ್ವಯಿಸುವ ಮಾತೇ ಯಥಾಪ್ರಕಾರ ಪ್ರಾಂತಿಕ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರಿಗೂ ಅನ್ವಯಿಸುತ್ತದೆ. ಪ್ರಾಂತದ ನಿಜವಾದ ಹಾಗು ಸಹಜವಾದ ಮುಂದಾಳ್ತನ ಅದರ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷನೂ ಅಂತೆಯೆ ಪ್ರಾಂತದ ಮುಖ್ಯ ಮಂತ್ರಿಯೂ ಆದವನ ಕೈಯಲ್ಲಿ ಇರಬೇಕು. ಒಂದು ಪ್ರಾಂತದಲ್ಲಿ ಒಂದಕ್ಕಿಂತ ಹೆಚ್ಚು ಪ್ರಾಂತಿಕ ಕಾಂಗ್ರೆಸ್ ಸಮಿತಿಗಳಿದ್ದರೆ, ಆಗ ಆ ಎಲ್ಲ ಸಮಿತಿಗಳ ಅಧ್ಯಕ್ಷರೂ ಮಂತ್ರಿಮಂಡಲದಲ್ಲಿ ಸಂಗಡಿಗರಾಗಿರಬೇಕು. ಉದಾಹರಣೆಗಾಗಿ, ಮುಂಬಯಿಯಲ್ಲಿ ಮುಂಬಯಿ, ಮಹಾರಾಷ್ಟ್ರ, ಕರ್ನಾಟಕ ಮತ್ತು ಗುಜರಾತಪ್ರಾಂತಿಕ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರು ಶ್ರೀ. ಖೇರರ ಮಂತ್ರಿಮಂಡಲದಲ್ಲಿರಬೇಕು, ಮಾತ್ರವಲ್ಲ, ಶ್ರೀ ಖೇರರು ಸ್ವತಃ ಒಂದು ಪ್ರಾಂ. ಕಾಂ. ಸಮಿತಿಯ ಅಧ್ಯಕ್ಷರಾಗಿರಬೇಕು. ಅಥವಾ ಆ ಪ್ರಾಂತಿಕ ಕಾಂಗ್ರೆಸ್ಸುಗಳ ಅಧ್ಯಕ್ಷರಿಗೆ ಮಂತ್ರಿಮಂಡಲದ ಕೆಲ ಸದಸ್ಯರು ಸ್ಥಾನ ಬಿಟ್ಟುಕೊಡಬೇಕು. ಮಧ್ಯಪ್ರಾಂತ ವರ್ಹಾಡದಲ್ಲಿಯೂ ಹಾಗೆಯೆ. ಅಧ್ಯಕ್ಷ ಸ್ಥಾನಕ್ಕೆ ಆರಿಸಲ್ಪಡುವವರು ತಮ್ಮ ಪ್ರಾಂತದ ಜನರ ನಿಜವಾದ ಮುಂದಾಳ್ತನ ವಹಿಸಬಲ್ಲವರೂ ಸಂಗಡಲೇ ಮುಖ್ಯ ಮಂತ್ರಿತ್ವವನ್ನಾಗಲಿ ಅಥವಾ ಸಾಮಾನ್ಯ ಮಂತ್ರಿತ್ವವನ್ನಾಗಲಿ ನಿರ್ವಹಿಸುವ ಯೋಗ್ಯತೆಯುಳ್ಳವರೂ ಇರಬೇಕೆಂದು ಇದರ ತಾತ್ಪರ್ಯ. ಇದಕ್ಕಿಂತ ಕಡಿಮೆ ಯೋಗ್ಯತೆಯುಳ್ಳವನು ಯಶಸ್ವಿಯಾಗಿ ಕೆಲಸ ಸಾಗಿಸಲಾರನು.

ಕಾಂಗ್ರೆಸ್ಸು ರಾಜಕೀಯ ಪಕ್ಷವಾಗಿ ವ್ಯವಹರಿಸಲು ನಿಶ್ಚಯಿಸಿದೆಯೆಂದ ಬಳಿಕ ಅದು ಅಧಿಕಾರದಲ್ಲಿರುವಾಗ ಅಧಿಕಾರಾರೂಢ ಪಕ್ಷದಂತೆಯೂ ಅಧಿಕಾರಚ್ಯುತವಾದಾಗ ವಿರೋಧಿ ಪಕ್ಷದಂತೆಯೂ ಕೆಲಸ ಮಾಡಬೇಕು. ಆದುದರಿಂದ, ಅದು ಇನ್ನು ಪಾರ್ಲಮೆಂಟರಿ ಸಂಸ್ಥೆಯಾಗಿ ಸಂಘಟಿಸಲ್ಪಡಬೇಕಲ್ಲದೆ ಹಳೆಯ ಮಾದರಿಯ ಜನಪ್ರಿಯ ಸಂಸ್ಥೆಯಂತಲ್ಲ. ಇದರಿಂದ ಪ್ರಾಂತಿಕ ಕಾಂಗ್ರೆಸ್ ಸಮಿತಿಯೆಂಬದು ಶಾಸನಸಭಾ ಸದಸ್ಯರಿಂದಲೂ ಅವಶ್ಯವಿದ್ದಲ್ಲಿ ಶಾಸನ ಸಭೆಗಳ ಹೊರಗಿರುವ ಸಮರ್ಥ ಅಥವಾ ಉದೀಯಮಾನ ಕಾರ್ಯಕರ್ತರಿಂದಲೂ ಕೂಡಿರಬೇಕೆಂಬದೂ ನಿಷ್ಪನ್ನವಾಗುವದು. ಅವರಲ್ಲಿ ಕೆಲವರು ಕಾರ್ಯಕ್ಷಮರಾದ ಸ್ಥಳೀಯ ಮುಂದಾಳುಗಳೂ ಲೋಕಲ್‌ಬೋರ್ಡ್, ಮುನಸಿಪಾಲಿಟಿ, ಶಿಕ್ಷಣ ಮಂಡಲಗಳೇ ಮೊದಲಾದವುಗಳ ಸದಸ್ಯರೂ ಇರಬೇಕಾದೀತು.

ಹೊರಗಿನ ಸದಸ್ಯರು ಕಾಂಗ್ರೆಸ್ ಸರಕಾರಗಳನ್ನು ಯಶಸ್ವಿಯಾಗಿ ಮಾಡುವದರಲ್ಲಿ ಆಸಕ್ತರಾಗಿರಬೇಕು. ಯಶಸ್ವಿಯಾಗಿ ಮಾಡುವದೆಂದರೆ ಹೇಗಾದರೂ ಮಾಡಿ ಕಾಂಗ್ರೆಸ್ಸು ಅಧಿಕಾರದಲ್ಲುಳಿಯುವಂತೆ ತಂತ್ರಹೂಡುವ ಮೂಲಕವಲ್ಲ; ಜನತೆಗೆ ಹಿತವಾಗುವಂತೆ, ಸುಖವಾಗುವಂತೆ ಮತ್ತು ಕಾಂಗ್ರೆಸ್ ಧೋರಣಕ್ಕನುಗುಣವಾಗಿ—ಈಗ ಅದೇ ಸರಕಾರದ ಧೋರಣೆಯೂ ಆಗುವದು—ಆಡಳಿತೆ ನಡೆಯುವಂತೆ ನೋಡಿಕೊಳ್ಳುವ ಮೂಲಕ. ಜಿಲ್ಲೆ ಮತ್ತು ಅದಕ್ಕಿಂತ ಕೆಳಗಿನ ಸಮಿತಿಗಳೂ ಇದೇ ತತ್ತ್ವವನ್ನವಲಂಬಿಸಿ ಸಂಘಟಿಸಲ್ಪಡಬೇಕು. ಈ ಸಂಸ್ಥೆಗಳು ಕಾಂಗ್ರೆಸ್ ಸರಕಾರದ ಸಹಾಯಕಾಂಗಗಳಂತೆ ವರ್ತಿಸಬೇಕು. ಪ್ರಾಂತಿಕ ಕಾಂಗ್ರೆಸ್ ಸಮಿತಿಯ ದೈನಂದಿನ ವ್ಯವಹಾರದಲ್ಲಿ ತಲೆಹಾಕುವದು ಮುಖ್ಯಮಂತ್ರಿಗೆ ಅಸಾಧ್ಯವೆನಿಸಿದರೆ, ಒಬ್ಬ ಸಭಾಪತಿ (ಚೇರಮನ್) ಅಥವಾ ಉಪಾಧ್ಯಕ್ಷ ಇಲ್ಲವೆ ಸಂಬಳ ಪಡೆಯುವ ಒಬ್ಬ ಶಾಶ್ವತ ಕಾರ್ಯಕರ್ತನೂ ಇರಬಹುದು-ಅವನೂ ಸಾಧ್ಯವಿದ್ದರೆ ಶಾಸನ ಸಭಾ ಸದಸ್ಯನೋ ಉಪಮಂತ್ರಿಯೊ ಇರಬಹುದು.

ಹೆಚ್ಚು ಕಡಿಮೆ ಎಲ್ಲ ಪ್ರಾಂತಗಳಲ್ಲಿಯೂ ಕಾಂಗ್ರೆಸ್ ಸರಕಾರ ಮತ್ತು ಕಾಂಗ್ರೆಸ್ ಸಮಿತಿಗಳ ನಡುವೆ ಉದ್ಭವಿಸುತಿರುವ ತಿಕ್ಕಾಟಗಳನ್ನು ತಡೆಯಲು ನನಗಂತೂ ಇದೊಂದೇ ಹಾದಿ ಕಾಣಿಸುತಿದೆ.

ಇದು ಹಳೆಯ ಕಾಂಗ್ರೆಸ್ಸಿನಂತೆ ಲಕ್ಷಾಂತರ ಸದಸ್ಯರನ್ನು ಸೇರಿಸಿಕೊಳ್ಳಲಾಶಿಸುವ ಸಂಸ್ಥೆಯಾಗಲಾರದೆಂಬದೇನೋ ನಿಜ. ಅದು ಅವಶ್ಯವೂ ಇಲ್ಲ. ಅದರ ಸದಸ್ಯತ್ವದ ವಿಷಯದಲ್ಲಿ ಹೆಚ್ಚು ಕಟ್ಟುನಿಟ್ಟು ಇರಬೇಕಾದೀತು. ತನ್ನ ಆಳಿಕೆಯ ರೀತಿ, ತನ್ನ ನೀತಿಯನ್ನು ಜನತೆಯ ಮುಂದೆ ಸ್ಪಷ್ಟಗೊಳಿಸುವ ಹದ, ಇವುಗಳ ಬಲದಿಂದಲೇ ಅದು ಜನರ ಮತಗಳನ್ನು ಸಂಪಾದಿಸಬೇಕಾದೀತು. ಸಾಮಾನ್ಯ ಜನರು ಯಾವದೊಂದು ರಾಜಕೀಯ ಪಕ್ಷದ ಸದಸ್ಯರಾಗಲಿಕ್ಕಿಲ್ಲ. ಹೀಗಿರುವದೇ ಕ್ಷೇಮ. ವಿಧಾಯಕ ಸಂಘಗಳು, ಲೋಕಸೇವಕ ಸಂಘಗಳೇ ಮೊದಲಾದವುಗಳೂ ಯಾವದೊಂದು ನಿರ್ದಿಷ್ಟ ರಾಜಕೀಯ ಪಕ್ಷಕ್ಕೆ ಅಂಟಿಕೊಂಡಿರಲಿಕ್ಕಿಲ್ಲ. ಅವು ತಮ್ಮದೇ ರೀತಿಯಲ್ಲಿ ಕೆಲಸ ಮಾಡುತ್ತ, ಸಾಧ್ಯವಿದ್ದಷ್ಟು ಸಹಕಾರವನ್ನು ಸರಕಾರಕ್ಕೆ ನೀಡುತ್ತಲೂ ಅದರಿಂದ ಪಡೆಯುತ್ತಲೂ ಇರಲು ಯತ್ನಿಸಬಹುದು.

ವರ್ಧಾ   ಕಿ. ಘ. ಮಶ್ರೂವಾಲಾ
೩—೭—೪೮

ಗಾಂಧೀನಿಧಿಗಾಗಿ ಕುದುರೆ ಜೂಜಾಟದ ಹಣ

ಪ್ರಶ್ನೆ:- ಕುದುರೆ ಜೂಜಾಟದಲ್ಲಿ ಒಂದು ದಿನ ಕೂಡಿದ ಹಣವನ್ನು ಗಾಂಧೀ ಸ್ಮಾರಕ ನಿಧಿಗೆ ಕೊಡಬೇಕೆಂದು ಮೈಸೂರು ಕುದುರೆ ಜೂಜಾಟದ ವ್ಯವಸ್ಥಾಪಕರು ಘೋಷಿಸಿ ಜಾಹೀರಾತು ಕೊಟ್ಟದ್ದುಂಟು. ಈ ಜೂಜಾಟದ ಒಂದು ದಿನದ ಗಳಿಕೆ [illegible] ಸಾವಿರ ರೂಪಾಯಿಗಳನ್ನು ಮೈಸೂರು ಸಮಿತಿಯ ಅಧ್ಯಕ್ಷರು ಗಾಂಧೀನಿಧಿಗೆ ಕೊಟ್ಟರು. ಇದು ಯೋಗ್ಯವೇ?

ಉತ್ತರ:- ಈ ಪ್ರಶ್ನೆಯಲ್ಲಿ ಹೇಳಿದಂತೆ ಸಂಗತಿಗಳು ಇದ್ದರೆ ಹಾಗೆ ಹಣ ತೆಗೆದುಕೊಂಡದ್ದು ಉಚಿತವಲ್ಲ.

ವರ್ಧಾ
೩-೭-೧೯೪೮   ಕಿ. ಘ. ಮಶ್ರೂವಾಲಾ.

ನನ್ನ ಉದ್ಧಾರಕ ಬಾಪು

ನಿರರ್ಗಳ ಪ್ರವಾಹದಿಂದ ನನ್ನ ಪ್ರಿಯ ಬಾಪುವಿನ ಮಧುರವೂ ಪವಿತ್ರವೂ ಆದ ನೆನಪು ನನ್ನ ಎದೆಯಲ್ಲಿ ನುಗ್ಗಿ ಬರುತ್ತಿದೆ ಮತ್ತು ಒಮ್ಮೊಮ್ಮೆ ಆ ಪ್ರವಾಹವು ನನ್ನನ್ನು ಮುಳುಗಿಸುವಷ್ಟು ವೇಗವಾಗಿಯೂ ಆಕಸ್ಮಿಕವಾಗಿಯೂ ಹೊನಲಿಡುತ್ತದೆ. ಅವರ ಮರಣದ ಕ್ರೂರ ಸತ್ಯವನ್ನು ನಿಜವಾಗಿಯೂ ನನಗೆ ಒಪ್ಪಿಕೊಳ್ಳುವುದು ದುಸ್ತರವಾಗಿದೆ.

೧೯೨೯ರಲ್ಲಿ ಸಿಂಧಕ್ಕೆ ಬಾಪು ಸಂದರ್ಶನವಿತ್ತಾಗ ಅಂದರೆ ಈಗ ೨೦ ವರ್ಷಗಳ ಕೆಳಗೆ ನಾನು ಅವರೊಡನೆ ಮೊಟ್ಟಮೊದಲಿಗೆ ಖಾಸಗಿ ಪರಿಚಯವನ್ನು ಮಾಡಿಕೊಂಡು ಅವರ ಸಹವಾಸವನ್ನು ಪಡೆದೆ. ಅದೇ ಮರುವರುಷ ಅವರ ಸಬರಮತಿಯ ಆಶ್ರಮವನ್ನು ಸೇರುವ ಭಾಗ್ಯ ನನಗೆ ಲಭಿಸಿತು. ಅದಲ್ಲದೆ ಆಗ ಅವರೊಡನೆ ದಾಂಡಿಯ ದಂಡಯಾತ್ರೆಯಲ್ಲೂ ಭಾಗ ವಹಿಸಿದೆ. ಸಾಧಾರಣ ದೀರ್ಘವೆನಿಸುವ ಆ ಕಾಲದಲ್ಲಿ ನನಗೆ ಅವರೊಡನೆ ಅತ್ಯಾಪ್ತತ್ವದಿಂದ ಇರುವ ಪುಣ್ಯವಿತ್ತು. ಈ ಕಾಲದಲ್ಲಿ ತಮ್ಮ ಸ್ವಾಭಾವಿಕ ಔದಾರ್ಯದಿಂದ ನನ್ನ ಮೇಲೆ ಪ್ರೇಮವೃಷ್ಟಿ ಕರೆದುದನ್ನು ನೆನೆದರೆ, ಎಂದೂ ತಪ್ಪದೆ ನನ್ನನ್ನು ಪಿತೃವಾತ್ಸಲ್ಯ ಸಹಜವಾದ ಎಚ್ಚರಿಕೆಯಿಂದ ನಡೆಸಿಕೊಂಡದ್ದನ್ನು ಯೋಚಿಸಿದರೆ, ಅವರ ಬಗ್ಗೆ ಅಪಾರ ಕೃತಜ್ಞತೆ ಮತ್ತು ನನ್ನ ಅನರ್ಹತೆ ಇವುಗಳ ಭಾರದಿಂದ ಕುಸಿದು ಹೋದ ಹಾಗೆನಿಸುತ್ತದೆ. ಅವರಿಗೆ ನಾನು ಸಲ್ಲಿಸಬೇಕಾದ ಋಣವನ್ನು ಬಣ್ಣಿಸಲು ನಿಜವಾಗಿಯೂ ನನ್ನ ಹತ್ತಿರ ಶಬ್ದಗಳಿಲ್ಲ. ನಾನು ಯಾವಾಗಲೂ ಅವರು ನನ್ನ ಉದ್ಧಾರಕರೆಂದು ತಿಳಿದಿದ್ದೆ; ಅವರು ಅಸಂಖ್ಯ ಸಂದರ್ಭಗಳಲ್ಲಿ ಆ ರೀತಿ ಉದ್ಧಾರಕರೆನಿಸಿ ನನ್ನ ತಿಳುವಳಿಕೆಯನ್ನು ಸತ್ಯವೆನಿಸಿದ್ದಾರೆ.

ನನ್ನ ಜೀವನದಲ್ಲಿ ಬಹಳ ಬಿಕ್ಕಟ್ಟುಗಳು ಬಂದು ಹೋಗಿವೆ. ನಾನು ನಿರುತ್ಸಾಹ ನಿರಾಶೆಗಳ ಪಾತಾಳಕ್ಕಿಳಿಯದಂತೆ ಆಯೆಲ್ಲ ಸಂದರ್ಭಗಳಲ್ಲೂ ಬಾಪು ನನಗೆ ನೆರವಾಗಿದ್ದಾರೆ; ಅವರು ನೆರವಾಗದಿದ್ದ ಅಂಥ ಒಂದು ವೇಳೆಯೂ ನನ್ನ ನೆನಪಿಗೆ ಬರುವುದಿಲ್ಲ. ನನಗೆ ಅತ್ಯಂತ ನೋವನ್ನುಂಟುಮಾಡಿದ ಸಂಕಟವೆಂದರೆ, ೧೯೪೩ ರ ಜುಲೈ ೨೦ ರಲ್ಲಿ ಒದಗಿದ ನನ್ನ ಪ್ರಿಯತಮೆಯಾದ ಸತೀರತ್ನ ವಿದ್ಯೆಯ ದಿವಂಗಮನ. ಬಾಪುವನ್ನು ಬಿಟ್ಟರೆ ನನಗೆ ಅವಳೇ ದೊಡ್ಡ ಸ್ಫೂರ್ತಿಯ ಆಕರವೆನಿಸಿದಳು. ಬಾಪು ಮತ್ತು ಅವಳಲ್ಲದಿದ್ದರೆ ನನ್ನ ಬಾಳಿನ ಗತಿಯೇ ಬೇರೆಯಾಗಿ ಹೋಗುತ್ತಿತ್ತು. ಅಂಥ ಸತಿಯನ್ನು ಕಳೆದುಕೊಂಡದ್ದು ನನಗೆ ಬಹುದೊಡ್ಡ ಆಘಾತವೆನಿಸಿತು. ನಾನು ಆ ಏಟಿನಿಂದ ತಲೆತಿರುಗಿಬಿದ್ದೆ; ಏನು ಮಾಡಬೇಕೆಂಬುದೇ ತಿಳಿಯಲಿಲ್ಲ. ಸಮಾಧಾನ ಮತ್ತು ಅವಲಂಬನಕ್ಕಾಗಿ ಯಾರತ್ತ ನೋಡಬೇಕೆಂಬುದೇ ಹೊಳೆಯಲಿಲ್ಲ. ಆಗ ಆಗಾಖಾನರ ಅರಮನೆಯಲ್ಲಿ ಇದ್ದುದರಿಂದ ಬಾಪುವನ್ನು ನೋಡಲು ಸಾಧ್ಯವಾಗಲಿಲ್ಲ. ೧೯೪೪ ರ ಮೇ ೬ ರಲ್ಲಿ ಅವರು ಬಿಡುಗಡೆ ಹೊಂದುವತನಕ ನಾನೊಬ್ಬನೇ ನನ್ನ ಈ ದುಃಖ ಭಾರವನ್ನು ಹೊರಬೇಕಾಗಿ ಬಂದಿತು. ಆಗ ಕಿವಿ ಕೇಳಿಸದಿದ್ದುದಕ್ಕೆ ನಾನು ಲಕ್ನೋದಲ್ಲಿ ಚಿಕಿತ್ಸೆ ತೆಗೆದುಕೊಳ್ಳುತ್ತಿದ್ದೆ. ಆದರೆ ಬಾಪುವನ್ನು ನೋಡುವ ಅತ್ಯುತ್ಸಾಹದ ಭರದಲ್ಲಿ ಮುಂಬಯಿಗೆ ಅವರ ಹೆಸರಿಗೆ ಒಂದು ತಾರು ಕೊಟ್ಟು ಅದರಲ್ಲಿ ನಾನು ಎಷ್ಟು ಅನಾಥನಾದೆನೆನಿಸುತ್ತದೆ ಮತ್ತು ಅದರಿಂದ ಚಿಕಿತ್ಸೆಯನ್ನು ಬಿಟ್ಟಾದರೂ ಅವರನ್ನು ನೋಡಿ ಬಿಡಬೇಕೆಂದು ಎಷ್ಟು ಉತ್ಸಾಹವೆದ್ದಿದೆ-ಎಂಬ ಅಂಶವನ್ನು ತಿಳಿಸಿದೆ. ಇದಕ್ಕೆ ಉತ್ತರವಾಗಿ ಅವರು ಈ ರೀತಿ ತಂತಿ ಕಳಿಸಿದರು.

"ಅನಾಥತೆಗೆ ಆಸ್ಪದೆಯಿಲ್ಲ. ದೇವರು ನಮ್ಮ ಶಾಶ್ವತಬಂಧು. ಕಿವಿಯ ಆರೈಕೆ ಮುಗಿದ ಮೇಲೆ ನೀನು ಬರಬಹುದು –ಬಾಪು"

ಈ ತಂತಿ ನನಗೆ ಧೈರ್ಯಕೊಟ್ಟಿತು; ಆದರೆ ನನ್ನ ಅತ್ಯಂತ ಮಾರ್ಮಿಕ ವೇದನೆಯನ್ನು ಅಷ್ಟೇನೂ ಕಡಿಮೆ ಮಾಡಲಿಲ್ಲ. ಅದುದರಿಂದ ನಾನು ನನ್ನ ಹೃದ್ಗತವಾದ ತೀವ್ರತರ ಶೋಕವನ್ನು ಒಂದು ಕಾಗದದಲ್ಲಿ ಹೊಳೆ ಹರಿಸಿದೆ. ಅದಕ್ಕೆ ಅವರು ಈ ಉತ್ತರವನ್ನು ಕೊಟ್ಟರು.

"ಜುಹು, ೨-೬-೧೯೪೪

"ನನ್ನ ಪ್ರಿಯ ಆನಂದ,

"ನೀನು ಇಂಗ್ಲೀಷಿನಲ್ಲಿ ಬರೆದಿರುವುದರಿಂದ ಹಾಗೆಯೇ ನಾನೂ ಉತ್ತರ ಕೊಡುತ್ತೇನೆ. ನೀನು ದುಃಖಿಸುವುದನ್ನು ನಿಲ್ಲಿಸಬೇಕು. ನೀನು ಓದಿದ ಮತ್ತು ಓದಿ ಅರಗಿಸಿಕೊಂಡ ಎಲ್ಲ ಜ್ಞಾನವನ್ನು ನಿನ್ನ ಸಹಾಯಕ್ಕಾಗಿ ತೆಗೆದುಕೊಳ್ಳಬೇಕು. ಇಲ್ಲಿ ಒಬ್ಬಳು ಮಹಿಳೆ ಕಳಿಸಿದ ಒಂದು ನಿಜವಿಚಾರವಿದೆ. ಅದನ್ನು ಒಳಗೆ ತೆಗೆದುಕೊಂಡು ಜೀರ್ಣಿಸಿಕೊ. ಅವಳು ವಾಸಿಸುತ್ತಿದ್ದ ಶರೀರವನ್ನು ಬಿಟ್ಟು ತನಗೆ ಯೋಗ್ಯವಾದ ಮತ್ತೊಂದನ್ನು ತೆಗೆದುಕೊಳ್ಳಲು ಬೇರೆಕಡೆ ಹೋಗಿದ್ದಾಳೆ.

"ಚಿಕಿತ್ಸೆ ಮುಗಿದಬಳಿಕ ನೀನು ಬಂದೇ ಬರುವೆ; ನಾನು ಮೆಲ್ಲಮೆಲ್ಲಗೆ ಆರೋಗ್ಯವನ್ನು ಸುಧಾರಿಸಿ ಕೊಳ್ಳುತ್ತಿದ್ದೇನೆ.

ನಿನಗೆ ನನ್ನ ಪ್ರೀತಿ—ಬಾಪು"

ಮೇಲಿನ ಕಾಗದದ ಜೊತೆಗೆ ಈ ಕೆಳಗಿನ ಒಂದು ಪದ್ಯವನ್ನು ಇಡಲಾಗಿತ್ತು. ಅದನ್ನು ಅಯೋವದ ಗ್ರೈಮ್ಸಿನ ಶ್ರೀಮತಿ ಗ್ಲೆನ್ ಈ ಸ್ನೈಡರಳು ಪೂಜ್ಯ ಕಸ್ತೂರಿಬಾಯಿಯವರು ಸತ್ತುಹೋದಾಗ ಬಾಪುವನ್ನು ಸಂತೈಸಲು ಕಳಿಸಿದ್ದಳು.

೧

"ಅವಳು ಮಡಿದಳೆಂದು ನೀನು
ಹೇಳಲಾರೆ, ಹೇಳಕೂಡ–
ದವಳು ನಗುತ ಹೋಗಿರುವಳು
ಸ್ವಲ್ಪ ಆಚೆಗೇ

ಅಲ್ಲಿ ವಿಹರಿಸಲು ತೆರಳ್ದ–
ದೆಂಥ ಸೊಬಗಿನೂರು ಎಂಬ
ಕಲ್ಪನೆಯಲಿ ಬಿಟ್ಟು ನಮ್ಮ
ಹೋದಳಿಲ್ಲಿಗೋ !

೨

ಅದರಿನಿತ್ತ ಕೇಳು ಇಲ್ಲ–
ದೆಂತೊ ಹಾಗೆ ಅಲ್ಲಿ ಕೂಡ
ಒಲುಮೆದೋರುತಿರುವಳೆಂದು
ತಿಳಿ ಮಹಾಶಯ;

ಅವಳು ಹಿಂದಿನಂತೆ ಇಂದು
ಸುಪ್ರಸನ್ನೆಯಾಗಿ ಬಾಳು-
ತಿರುವಳೆತ್ತ ಮತ್ತೆ ಬರುವ–
ಳೆಂದು ಬಗೆವುದು!"

ಆದರೆ "ಅವಳು ಮಡಿಯಲಿಲ್ಲ, ಅವಳು ಸ್ವಲ್ಪ ಆಚೆ ಹೋಗಿದ್ದಾಳೆ– ಅಷ್ಟೆ" ಎಂದು ತಿಳಿದುಕೊಳ್ಳಬೇಕೆಂದು ಎಷ್ಟು ಪ್ರಯತ್ನಿಸಿದರೂ ಅವಳ ವಿಯೋಗದಿಂದಾದ ದುಃಖದಿಂದ ನನ್ನ ಮನಸ್ಸು ಮುಕ್ತವಾಗದೆ ಅಶಾಂತ ಸ್ಥಿತಿಯಲ್ಲೇ ಇಂದಿಗೂ ಇರುತ್ತದೆ. ಕೆಲವು ದಿನಗಳ ಬಳಿಕ ಬಾಪು ಮತ್ತೊಂದು ಹುರುಪುಗೊಡುವ ಕಾಗದವನ್ನು ಬರೆದರು.

—[illegible]

ಆರನೆಯ ತಿಂಗಳಲ್ಲಿ

ಕೆಲವಿನಗಳ ಬಳಿಕ (ಹಿಂದೀ ಪಂಚಾಂಗದ ಪ್ರಕಾರ ಜುಲೈ ೨೬ ನೆಯದು, ಕ್ರಿಶ್ಚಿಯನ್ ಪಂಚಾಂಗದ ಪ್ರಕಾರ ೩೦ ನೆಯದು) ಗಾಂಧಿಯವರನ್ನು ಕಳೆದುಕೊಂಡು ೬ ತಿಂಗಳಾಗುವುದು. ಕಾಲ ಬಹುಬೇಗ ಕಳೆದುಹೋಯಿತು. ನೊನ್ನೆ ಮೊನ್ನೆ ಅವರು ತೀರಿಕೊಂಡದ್ದೆಷ್ಟೆ ಎಂದು ನಮ್ಮಲ್ಲಿ ಹಲವರಿಗೆ ತೋರುತ್ತದೆ. ಸಾವಿನ ಬಗ್ಗೆ ಇರುವ ನಮ್ಮ ಸ್ಮರಣಶಕ್ತಿಯ ಸ್ಥಿರತೆಯು ತನ್ನ ರೂಢಿಯಂತೆ ಕಾಲವು ಕ್ರಮವಾಗಿ ದಾರಿಹಿಡಿದು ಹೋಗುವುದನ್ನು ತಡೆಯಲಾರದು. ತಿಂಗಳುಗಳಾದ ಮೇಲೆ ವರ್ಷಗಳು ಬರುತ್ತವೆ; ವರ್ಷಗಳಾದ ಮೇಲೆ ದಶಕಗಳು—೧೯೪೮ ರ ಜನವರಿ ೩೦ ಕ್ಕಿಂತ ಮುಂಚೆ ಹುಟ್ಟಿದ ಒಬ್ಬನೂ ಬದುಕಿ ಉಳಿಯದಾಗುವವರೆಗೆ ಕಾಲ ತಿರುಗುತ್ತದೆ.

ನಮ್ಮ ಪ್ರಿಯ ಬಾಪುವನ್ನು ಕಳೆದುಕೊಂಡದ್ದಕ್ಕಾಗಿ ಒಂದು ದಿನವೂ ದುಃಖ ಪಡದೆ, ಕಣ್ಣೀರ್ಗರೆಯದೆ ಇರದ ಕೆಲವರನ್ನು ನಾನು ಬಲ್ಲೆ, ಮತ್ತು ನನಗೆ ಗೊತ್ತಿಲ್ಲದ ಅಂಥ ಇನ್ನೂ ಅನೇಕರು ಇರಬಹುದು. 'ಹರಿಜನ' ಬರುವುದು ಸ್ವಲ್ಪ ಸಮಾಧಾನಕರವಾಗಿದೆಯೆಂದು ಕೆಲವರೆನ್ನುತ್ತಾರೆ; ಆದರೆ ಮತ್ತೆ ಕೆಲವರಿಗೆ ಅದು ಗಾಂಧಿಯವರ ವಿಯೋಗವನ್ನು ನೆನಪಿಗೆ ತಂದುಕೊಟ್ಟು ಮೊದಲೇ ಇದ್ದ ದುಃಖವನ್ನು ಮತ್ತಷ್ಟು ಗಾಢತರದ್ದನ್ನಾಗಿ ಮಾಡುವುದು.

ಆದರೆ ಅಳದೆ ಇರಲು ಸಾಧ್ಯವಿಲ್ಲದವರಿಗೆ ಕನಿಕರದೋರಿದರೂ ಅವರು ಮತ್ತು ಅವರಂತೆಯೇ ದುಃಖಪಟ್ಟರೂ ಸ್ವಲ್ಪ ಗಟ್ಟಿ ಮನಸ್ಸುಳ್ಳವರು ಕೇರಿ ಗಾಂಧಿಯವರನ್ನು ಹೆಚ್ಚು ಹೆಚ್ಚು ಪ್ರೀತಿಸಿದಷ್ಟೂ ಅವರಿಗಾಗಿ ಬದುಕಿ ಅವರ ಸಾವಿಗಾಗಿ ಪ್ರಾಯಶ್ಚಿತ್ತ ಹೊಂದುವುದು ತಮ್ಮ ಕರ್ತವ್ಯವೆಂದು ತಿಳಿಯಬೇಕು.

ಕಾಂಗ್ರೆಸ್ಸು, ಕಾಂಗ್ರೆಸ್ ಸರಕಾರಗಳು ಮತ್ತು ವೈಯಕ್ತಿಕ ಕಾಂಗ್ರೆಸ್ಸಿಗರು, ರಚನಾತ್ಮಕ ಕಾರ್ಯಕರ್ತರು ಮತ್ತು ಉಳಿದವರಿಗಿಂತ ತಾವು ಹೆಚ್ಚು ಗಾಂಧೀವಾದಿಗಳು ಎಂದುಕೊಂಬವರು, ಬ್ರಾಹ್ಮಣರು, ಅಬ್ರಾಹ್ಮಣರು, ಹರಿಜನರು, ಮುಸಲ್ಮಾನರು, ಹಿಂದು ಮಹಾಸಭೆಯ ಸದಸ್ಯರೂ ಕೂಡ, ರಾ. ಸೇ. ಸಂಘದವರೂ ಸ್ಮಾರಕ ದಿನಗಳಲ್ಲಿ ಗಾಂಧಿಯವರ ಗುಣಗಾನ ಮಾಡುತ್ತಾರೆ. ಕವಿಗಳೂ ಪ್ರಸಿದ್ಧ ಬರಹಗಾರರೂ ಸುಂದರ ಪ್ರಬಂಧಗಳನ್ನು ಬರೆವ ಸ್ಫೂರ್ತಿ ಪಡೆದು ನಮಗೆ ಅಳು ಬರುವಷ್ಟರ ವರೆಗೆ ಗಾಂಧಿಯವರನ್ನು ನಮ್ಮವರೆಂದು ನಾವು ಹಿಗ್ಗಿ ಹೆಮ್ಮೆ ಪಡುವಂತೆ ಮಾಡುತ್ತಾರೆ.

ಆದರೂ ಅವರ ಸಾವಿಗಾಗಿ ನಾವು ಪಶ್ಚಾತ್ತಾಪವೆಂದು ಏನನ್ನೂ ಮಾಡಿದಂತಾಗದಿರಬಹುದು.

ಅವರು ಮಡಿದರು ಮತ್ತು ನಮ್ಮಲ್ಲಿಯ ಜಾತೀಯತೆಯ ದೆಸೆಯಿಂದ ಅವರು ಕೊಲ್ಲಲ್ಪಟ್ಟರು. ಅವರು ಹಿಂದು-ಮುಸಲ್ಮಾನ ಐಕ್ಯಕ್ಕಾಗಿ ಬದುಕಿದರು, ಅದಕ್ಕಾಗಿ ದೇಹಾರ್ಪಣ ಮಾಡಿದರು. ಅಸ್ಪೃಶ್ಯತಾ ನಿವಾರಣೆಗಾಗಿ ಅವರು ಬದುಕಿದರು; ಮತ್ತು ಹಿಂದುಸ್ತಾನದ ೭೦ ಲಕ್ಷ ಹಳ್ಳಿಗಳ ಜನರ ಏಳಿಗೆ ಮತ್ತು ಸೌಖ್ಯಕ್ಕಾಗಿ ಅವರು ಬದುಕಿದರು. ಪ್ರಾಜ್ಞರು, ತಜ್ಞರು ಮತ್ತು ಶ್ರೀಮಂತರು ತಮ್ಮ ಕೌಶಲ ಮತ್ತು ಐಶ್ವರ್ಯಗಳನ್ನು ದ್ರಿದ್ರರು ಮತ್ತು ಅಜ್ಞಾನಿಗಳಿಗಾಗಿ ಬಳಸುವುದನ್ನು ಕಾಣಬೇಕೆಂದು ಬದುಕಿದರು. ಸತ್ಯಕ್ಕಾಗಿ, ಅಹಿಂಸೆಗಾಗಿ, ಜಾಗತಿಕ ಶಾಂತಿಗಾಗಿ, ವ್ಯಕ್ತಿಗಳ ಕಲಹದಲ್ಲಿ ಸತ್ಯಾಗ್ರಹ ಮತ್ತು ಮಧ್ಯಸ್ಥಿಕೆಯಿಲ್ಲದೆ ಯುದ್ಧ ಪ್ರವೇಶಿಸದಂತೆ ಮಾಡಲು ಅವರು ಬದುಕಿದ್ದರು.

ಈ ಮಾರ್ಗಗಳಲ್ಲಿ ನಾವು ಎಷ್ಟು ದೂರ ಮುಂಬರಿದಿದ್ದೇವೆ? ಹಿಂದು ಮುಸಲ್ಮಾನರ, ಅಂತರ್ಹಿಂದು ಜಾತಿಗಳ, ಪ್ರಾಂತೀಯತೆಯ ಕಹಿಯ ಮತ್ತು ಸಂಸ್ಥಾನಗಳ ವಿವಾದಗಳ ಬಗ್ಗೆ ನಾವು ಏನು ಮಾಡಿದ್ದೇವೆ? ನಮ್ಮಲ್ಲಿಯ ಭೇದಗಳನ್ನು — ವಿದೇಶದ್ದಿರಲಿ, ಅಂತಃಸಂಸ್ಥಾನೀಯವಿರಲಿ, ಅಂತಃ ಪ್ರಾಂತೀಯ ಮತ್ತು ಸ್ವಪಕ್ಷದ್ದಿರಲಿ—ನಾವು ಹೇಗೆ ಪರಿಹರಿಸಿಕೊಳ್ಳುವವರಿದ್ದೇವೆ? ಕೊನೆಯದಾಗಿ ಹೈದರಾಬಾದ ಮತ್ತು ಕಾಶ್ಮೀರಗಳ ಪ್ರಶ್ನೆಗಳನ್ನು ಹೇಗೆ ಬಿಡಿಸಲಾದೀತು? ಪಾಕಿಸ್ತಾನ ಮತ್ತು ಹಿಂದುಸ್ತಾನಗಳ ರಾಜಕೀಯ ಸಂಬಂಧ ಏನಿರಬೇಕು? ಅಧಿಕಾರದಾಹದ ಮುಕ್ತಿ ಇರುವ ಬಲ, ಹಿಂಸೆ, ಕಪಟ ರಾಜಕಾರಣ, ಚಾಣಕ್ಯತಂತ್ರಗಳು ಅವುಗಳನ್ನು ಬಿಡಿಸಲು ಸಾಧನಗಳಾಗುವವೆ? ಅಥವಾ ಆರ್ಜವ, ನ್ಯಾಯಬುದ್ಧಿ, ಸರ್ವಹಿತಭಾವ ಇವುಗಳೋ? ಸಂ. ರಾ. ಸಂಘವು ಮೂರು ಅಥವಾ ನಾಲ್ಕು ಮಹಾಪ್ರಭುತ್ವಗಳ ಅಧಿಕಾರಕಾಮುಕ್ಯಾಗಿ ಚಿಕ್ಕ ದುರ್ಬಲರಾಷ್ಟ್ರಗಳನ್ನು ತಮ್ಮ ಯುದ್ಧಕಾರ್ಯಕ್ರಮದಲ್ಲಿ ಬಲಾತ್ಕಾರದಿಂದ ನಿಯೋಜಿಸುವ ಕೌಟಿಲ್ಯಕ್ಷೇತ್ರವಾದೀತೆ? ನಮ್ಮ ಒಳ ಮತ್ತು ಹೊರನಾಡಿನ ಸಂಬಂಧಗಳು ಗೆಳೆತನವನ್ನು ತಂದಿವೆಯೋ, ಹಗೆತನವನ್ನೋ?

ಈ ಪ್ರಶ್ನೆಗೆ ನಾವು ಕೊಡುವ ಉತ್ತರಗಳು ಗಾಂಧಿಯವರ ಸಾವಿಗಾಗಿ ನಾವು ಹೇಗೆ ಪಶ್ಚಾತ್ತಾಪ ಪಟ್ಟಿದ್ದೇವೆಂಬುದನ್ನು ತೋರಿಸುತ್ತವೆ.

ದೊಡ್ಡ ದೊಡ್ಡ ಮತ್ತು ರಾಜಕೀಯ ಸಮಸ್ಯೆಗಳತ್ತ ನಾನು ಲಕ್ಷ್ಯವಿತ್ತುದರಿಂದ ರಾಜನೀತಿಜ್ಞರಿಗೆ ನಾನಿದನ್ನು ಬರೆದಿರುವೆನೆಂದು ಸಾಮಾನ್ಯ ಓದುಗನು' ತಿಳಿದುಕೊಳ್ಳಬಾರದು. ಜನರ ಮೆಚ್ಚುಗೆ ಮತ್ತು ಸಹಕಾರಗಳನ್ನು ಪಡೆಯದೆ ಎಂಥ ಉದಾತ್ತ ಮತ್ತು ಸಾತ್ವಿಕನಿರಲಿ, ಕುಟಿಲ ಮತ್ತು ದುರ್ಜನ ರಾಜಕಾರಣಿಯಿರಲಿ, ತನ್ನ ಕಾರ್ಯದಲ್ಲಿ ಯಶಸ್ಸನ್ನು ಹೊಂದಲಾರನು. ಕಡೆಯದಾಗಿ ಅವನು ಶ್ರದ್ಧಾವಂತ ಜನರ ಭಾವನೆಗಳನ್ನು ತನ್ನ ಉದ್ದೇಶ ಸಾಧನೆಗಾಗಿ ಬಳಸಿಕೊಂಡು ಜನರಲ್ಲಿ ದ್ವೇಷ ಬೀಜ ಬಿತ್ತಿ, ಯುದ್ಧ ಮತ್ತು ನಾಶಕ್ಕೊಯ್ದು ಮುಟ್ಟಿಸುತ್ತಾನೆ ಇಲ್ಲವೆ ಪ್ರೀತಿ ಮತ್ತು ಪರಸ್ಪರ ತಿಳಿವಳಿಕೆಗಳ ಬೀಜ ಬಿತ್ತಿ ಅವರನ್ನು ಶಾಂತಿ ಮತ್ತು ಪುನರುತ್ಥಾನಕ್ಕೆ ಮೆಲ್ಲಗೆ ಕರೆದೊಯ್ಯುತ್ತಾನೆ. ಗಾಂಧಿಯವರು ಎರಡನೆಯದನ್ನು ಸಾಧಿಸಿದ ಕುಶಲ ಒಕ್ಕಲಿಗರು. ನಮ್ಮ ಮೇಲೆ ಪದೇ ಪದೇ ಹೇರಿದ ಜಾತಿಯ, ಧರ್ಮದ, ಪ್ರಾದೇಶಿಕ, ಭಾಷಾನ್ವಯ, ಸಾಂಸ್ಕೃತಿಕ, ಅಥವಾ ಇತರ ಸಂಕುಚಿತ ಭಾವಗಳನ್ನು ಒತ್ತಿ ಹೇಳಬರುವವರತ್ತ ನಾವು ಲಕ್ಷ್ಯಕೊಡಕೂಡದು; ನಮ್ಮ ನೆರೆಯವರನ್ನು ಹಗೆತನದಿಂದ ನೋಡುವದಕ್ಕಾಗಿ ಅವನ್ನು ಬಳಸಿಕೊಳ್ಳಕೂಡದು. ಮೊದಲಿನಿಂದ ಕಡೆಯ ತನಕ ನಾವು ಮನುಷ್ಯರೆಂಬುದನ್ನು ಅನುಭವದಿಂದ ತಿಳಿಯೋಣ, ಭಾವಿಸೋಣ—ಉಳಿದುದೆಲ್ಲ ಆ ಮೇಲೆ. ಮೇಲಿನ ಯಾವ ಭೇದವೂ ಮೂಲಭೂತ ಪ್ರಾಮುಖ್ಯವುಳ್ಳದ್ದಲ್ಲ.

—ಕೆ. ಜಿ. ಮಶ್ರೂವಾಲಾ

ವರ್ಧಾ, ೬-೭-೪೮

ನನ್ನ ಉದ್ಧಾರಕ ಬಾಪು

(೯ ನೇ ಪುಟದಿಂದ)

ಓದುಗರೊಡನೆ ಅದರ ಸವಿಯನ್ನು ಸವಿಯ ಬಯಸುತ್ತೇನೆ;

"ಪುಣೆ, ೩೦-೬-೧೯೪೪

"ಚಿ. ಆನಂದ,

"ನೀನು ವಿದ್ಯೆಯ ಸಾವನ್ನು ಚಿಂತಿಸುತ್ತ ಕೂಡಬಾರದು; ಅದರಿಂದ ವ್ಯಸ್ತನಾಗಬಾರದು. ಬದುಕಿದ್ದಾಗ ನಿನ್ನ ಸ್ಫೂರ್ತಿದಾತ್ರಿಯಾಗಿದ್ದರೆ, ಅವಳು ತನ್ನ ವಿಶ್ರಾಂತಿಧಾಮವನ್ನು ಸೇರಿದ ಮೇಲೆ ಮತ್ತಷ್ಟು ಹೆಚ್ಚು ಸ್ಫೂರ್ತಿದಾತ್ರಿಯಾಗಲೇಬೇಕು. ನನ್ನ ಪ್ರಕಾರ ಆತ್ಮಗಳ ನಿಜವಾದ ಐಕ್ಯದ ಅರ್ಥ ಅದೇ ಆಗುತ್ತವೆ. ಆದರ್ಶ ಉದಾಹರಣೆಯೆಂದರೆ ಯೇಸು ಮತ್ತು ಇಂದಿನ ರಾಮಕೃಷ್ಣ ಪರಮಹಂಸರು; ಅವರು ಮರಣಾನಂತರ ಇನ್ನಷ್ಟು ಪ್ರಭಾವಿಗಳಾದರು. ಅವರ ಸತ್ವ ಸಾಯಲಿಲ್ಲ, ಅಂತೆಯೇ ವಿದ್ಯೆಯದೂ ಸತ್ತಿಲ್ಲ. ಆದುದರಿಂದ ನೀನು ದುಃಖಿಸುವುದನ್ನು ಬಿಟ್ಟು ನಿನ್ನೆದುರಿರುವ ಕರ್ತವ್ಯದತ್ತ ಲಕ್ಷ ಕೊಡಬೇಕು. ನೀನು ಚಿಕಿತ್ಸೆ ತೆಗೆದುಕೊಳ್ಳುತ್ತಿರುವಾಗ ನನ್ನೆಡೆಗೆ ಬರುವ ಆಲೋಚನೆ ಮಾಡಬೇಡ ಮತ್ತು ಈಗ ನಾನೂ ಚಿಕಿತ್ಸೆ ತೆಗೆದುಕೊಳ್ಳುತ್ತಿದ್ದೇನೆ. ನಾನು ಸೇವಾಗ್ರಾಮಕ್ಕೆ ಹೋದ ಮೇಲೆ ನೀನು ಬರಬಹುದು.

—ಬಾಪು,"

ಅವರು ತಮ್ಮ ಮತ್ತೊಂದು ಕಾಗದದಲ್ಲಿ ವಿದ್ಯೆಯನ್ನುದ್ದೇಶಿಸಿ ಹೀಗೆ ಬರೆದರು.

"ಚಿ. ಆನಂದ,

ನಿನ್ನ ಕಾಗದ ಇದೇ ಈಗ ಸಿಕ್ಕಿತು. ವಿದ್ಯೆಯೊಬ್ಬಳು ಮಹರ್ಷಿ. ಅವಳ ಹೃದಯ ಬಂಗಾರದ್ದು. ಅವಳ ತ್ಯಾಗಬುದ್ಧಿ ಅಪಾರವಾದುದು ಮತ್ತು ಅವಳ ಪ್ರೇಮ ಸಾಗರದಷ್ಟಿತ್ತು. ನೀನು ಅವಳಿಗೆ ತಕ್ಕವನಾಗುವಂತೆ ಬಾಳಬೇಕು.

ನಾನು ಆಗಸ್ಟಿನಲ್ಲಿ ಸೇವಾಗ್ರಾಮಕ್ಕೆ ಹೋಗಬೇಕೆಂದಿದ್ದೇನೆ.

ಬಾಪುವಿನ ಆಶೀರ್ವಾದಗಳು."

—ಆನಂದ. ಟಿ. ಹಿಂಗೋರಾನಿ

ಪಾನನಿರೋಧದ ವಿಚಿತ್ರ ವಿಧಾನ

ಮದ್ರಾಸ ಶಾಸನ ಸಭೆಯ ಸದಸ್ಯರೊಬ್ಬರು ಈ ಪ್ರಾಂತದ ಪಾನನಿರೋಧ ಶಾಖೆಯವರು ಹೊರಡಿಸಿದ ಒಂದು ಗುಪ್ತ ಪ್ರಕಟನೆಯ ಪ್ರತಿಯೊಂದನ್ನು ಕಳಿಸಿದ್ದಾರೆ.

"ಸರಕಾರಿ ಪೋಲೀಸ ಶಾಖೆಯ ಭಾರತೀಯರಿಗೂ ಆಂಗ್ಲೋ ಇಂಡಿಯನ್ನರಿಗೂ ಪಾರ್ಶಿ ಮತ್ತು ಜ್ಯೂಜನರಿಗೂ ವಿದೇಶೀಯ ಮದ್ಯಕ್ಕಾಗಿ ಅನುಜ್ಞಾಪತ್ರವನ್ನು ಕೊಡಲು ಸರಕಾರವು ಪಾನನಿರೋಧಮಂಡಲಕ್ಕೆ ಅಧಿಕಾರ ಕೊಟ್ಟಿದೆ. ಪಾನನಿರೋಧ ಪ್ರದೇಶದಲ್ಲಿದ್ದ ಭಾರತೀಯ ಅಧಿಕಾರಿಗಳಿಗೆ ಈ ಅನುಜ್ಞಾ ಪತ್ರಕ್ಕೆ ಬಹಿರಂಗವಾಗಿ ಅರ್ಜಿ ಹಾಕಲು ನಾಚಿಕೆಯೆನಿಸಿದರೆ ಅಂತಹರು ಪಾನನಿರೋಧ ಮಂಡಲದ ಮುಖಾಂತರ ಬರೆದುಕೊಳ್ಳಬಹುದೆಂದು ಸರಕಾರದ ಇಂಗಿತವಿದೆ. ಮಂಡಲವೇ ಈ ಅರ್ಜಿಗಳನ್ನು ಗುಪ್ತವಾಗಿ ಸರಕಾರದ ಕಂದಾಯ ಶಾಖೆಯ ಸಹಕಾರ್ಯದರ್ಶಿಯ ಹೆಸರಿಗೆ ಕಳಿಸುವದು. ಆ ಮೇಲೆ ಪಾನನಿರೋಧ ಮಂತ್ರಿಗಳ ಎದುರಿಗೆ ಆವಶ್ಯಕ ಆಜ್ಞೆಗಾಗಿ ಅವುಗಳನ್ನು ಇಡಲಾಗುವದು.

'ಅನಂತರ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಲೋಸುಗ ಅರ್ಧ ಅಧಿಕೃತ ರೀತಿಯಲ್ಲಿ ಕಮಿಶನರರಿಗೆ ಆಜ್ಞೆ ಕೊಡಲಾಗುವದು. ಮೇಲ್ಕಾಣಿಸಿದ ಸರಕಾರದ ಆದೇಶಗಳನ್ನು ಈ ಪ್ರಾಂತದ ಪಾನನಿರೋಧ ಪ್ರದೇಶದಲ್ಲಿ ಕೆಲಸ ಮಾಡುತ್ತಿರುವ ನಿಮ್ಮ ಶಾಖೆಯ ಎಲ್ಲ ಭಾರತೀಯ ಅಧಿಕಾರಿಗಳಿಗೂ ತಿಳಿಸಬೇಕೆಂದು ನಾನು ವಿಜ್ಞಾಪಿಸುತ್ತೇನೆ." (ದಪ್ಪಕ್ಷರ ನಮ್ಮವು)

ಕುಡಿಯ ಬಯಸುವ ಅಧಿಕಾರಿಗಳ ನಾಚಿಕೆಗೆ ಮನ್ನಣೆಕೊಟ್ಟು ಅವರಿಗೆ ಹಿತ್ತಲುಬಾಗಿಲಿನಿಂದ ಮದ್ಯ ಪೂರೈಕೆಗೆ ಅಪ್ಪಣೆಕೊಟ್ಟ ಇಂತಹ ಅಧಿಕಾರಿಗಳ ನೆರವಿನಿಂದಲೇ ಸರಕಾರವು ಪಾನನಿರೋಧವನ್ನು ಅದೆಂತು ಸಾಧಿಸಬಲ್ಲದೋ ತಿಳಿಯದಾಗಿದೆ. ಹಾಗಿದ್ದರೆ ಸರಕಾರದವರು ಮದ್ಯವ್ಯಾಪಾರಿಗಳನ್ನೇ ಅಬಕಾರೀ ಅಧಿಕಾರಿಗಳನ್ನಾಗಿಯೂ ಪಾನನಿರೋಧಕ ಪ್ರಚಾರಕರನ್ನಾಗಿಯೂ ನೇಮಿಸಿ ಪಾನನಿರೋಧದ ಕಾರ್ಯವನ್ನು ಅದೇಕೆ ಸಾಧಿಸಬಾರದು?

ಮದ್ರಾಸ ಪ್ರಾಂತದಂತೆಯೇ ಇನ್ನುಳಿದ ಪ್ರಾಂತಗಳಲ್ಲಿಯೂ ಇದೇ ಬಗೆಯಾದ ಪದ್ಧತಿಯನ್ನು ಅನುಸರಿಸಲಾಗುತ್ತಿದೆಯೋ ಎಂದು ವಿಚಾರಣೆ ಮಾಡಲು ಮಧ್ಯಪ್ರಾಂತ ಮತ್ತು ವರ್ಹಾಡದ ಮುಖ್ಯ ಪ್ರಧಾನರಿಂದ ಹೀಗೆ ಬರೆದು ಬಂದಿತು.

"೧೯೩೮ ರ ವಿದೇಶೀ ಮದ್ಯ ನಿಯಮಗಳಿಗನುಸರಿಸಿ, ಅಬಕಾರೀ ಶಾಖೆಯಲ್ಲಿದ್ದವರನ್ನೊಳಗೊಂಡು ಭಾರತೀಯ ಅಧಿಕಾರಿಗಳಿಗೆ ಅರ್ಜಿ ಹಾಕಲು ಅಥವಾ ಆವಶ್ಯಕ ಅನುಜ್ಞಾಪತ್ರ ದೊರಕಿಸಲು ಪ್ರತಿಬಂಧ ಹಾಕಬರುವಂತಿಲ್ಲ. ಹಿಂದೀ ಸೈನಿಕ ಅಧಿಕಾರಿಗಳನ್ನು ಹೊರತುಪಡಿಸಿ ೧೫೪ ಜನರು ಮಾತ್ರ ಈ ಅನುಜ್ಞಾ ಪತ್ರಧಾರಿಗಳಿದ್ದಾರೆ. ಆದರೆ ಇವರಲ್ಲಿ ಒಬ್ಬರೂ ಅಬಕಾರಿ ಅಥವಾ ಪಾನನಿರೋಧ ಶಾಖೆಯವರಿಲ್ಲ.

"ಅಬಕಾರೀ ಮಂತ್ರಿಗಳೆದುರು ಮಂಡಿಸಲೋಸುಗ ಅನುಜ್ಞಾ ಪತ್ರಕ್ಕಾಗಿ ಒಂದಾದರೂ ಗುಪ್ತ ಅರ್ಜಿಯು ಸಂಬಂಧಪಟ್ಟ ಕಾರ್ಯದರ್ಶಿಯ ವೈಯಕ್ತಿಕ ವಿಳಾಸಕ್ಕೆ ಬಂದಿಲ್ಲವೆಂದು ವಿಚಾರಾಂತ್ಯದಲ್ಲಿ ನನಗೆ ತಿಳಿದು ಬಂದಿದೆ. ಅಲ್ಲದೆ ಈ ಮಂತ್ರಿಗಳು ಒಮ್ಮೆಯೂ ಪಾನನಿರೋಧ ಕಮಿಶನರರಿಗೆ ಅರ್ಧ ಅಧಿಕೃತ ಆಜ್ಞೆಯ ಮೂಲಕ ಈ ಅನುಜ್ಞಾ ಪತ್ರವನ್ನು ಕೊಡಬೇಕೆಂದು ತಿಳಿಸಿಲ್ಲ.

"ಈ ವರೆಗೆ ಒಬ್ಬ ಅಬಕಾರೀ ಅಧಿಕಾರಿಸಹ ಈ ಅನುಜ್ಞಾಪತ್ರಧಾರಿಯಾಗಿಲ್ಲ. ಅಬಕಾರೀ ಶಾಖೆಯಲ್ಲಿ ಹೊಸದಾಗಿ ನೌಕರರನ್ನು ತುಂಬಿಕೊಳ್ಳುವಾಗ, ನೌಕರಿಗೆ ಸೇರಿದ ಮೇಲೆ ಅವರು ಕುಡಿಯತಕ್ಕದ್ದಲ್ಲವೆಂಬ ಕರಾರ ಹಾಕಿ, ನೇಮಕ ಹೊಂದುತ್ತಲೇ ಹಾಗೆ ಅವರಿಂದ ಲಿಖಿತ ವಚನವನ್ನು ತೆಗೆದುಕೊಳ್ಳಬೇಕೇ ಎಂಬ ಬಗ್ಗೆಯೂ ವಿಚಾರ ನಡೆದಿದೆ."

ಉಳಿದ ಶಾಖೆಗಳ ಅಧಿಕಾರಿಗಳಿಗೂ ವಿಶೇಷತಃ ನ್ಯಾಯ ಮತ್ತು ಪೋಲೀಸ ಶಾಖೆಯ ಅಧಿಕಾರಿಗಳಿಗೂ ಅನುಜ್ಞಾಪತ್ರವನ್ನು ಕೊಡುವದೆಂದರೆ ಅಸಮರ್ಥನೀಯವೇ ಸರಿ. ತಾನೇ ಅನುದಿನ ರಾತ್ರಿ ಉಲ್ಲಂಘಿಸುವ ನಿಯಮವನ್ನೇ ಉಲ್ಲಂಘಿಸಿ ಬಂದ ಇನ್ನೊಬ್ಬ ಅಪರಾಧಿಯನ್ನು ಈ ಅಧಿಕಾರಿಯು ಅದಾವ ಮುಖದಿಂದ ಶಿಕ್ಷಿಸಬಲ್ಲನು? ಆರೋಗ್ಯಕ್ಕಾಗಿ ವೈದ್ಯಕೀಯ ಸಲಹೆಯ ಮೇರೆಗೆ ಅನುಜ್ಞಾಪತ್ರ ಕೊಡುವ ಮಾತಂತೂ ತೀರ ಹುರುಳಿಲ್ಲದ್ದು. ಪಾನನಿರೋಧಿಗಳಾದ ವೈದ್ಯರೇ ಪಾಶ್ಚಾತ್ಯ ಪದ್ಧತಿಯಲ್ಲಿ ವಿರಲ. ಸಿವಿಲ ಸರ್ಜನರಿಗೆ ದುಡ್ಡು ಸುರುವಿದವರೆಲ್ಲ ಕುಡಿಯಬಹುದೆಂದೇ ಇದರ ಅರ್ಥ.

ಸರಕಾರದ ಧೋರಣವೆಂದೇ ಸರಕಾರವು ಕುಡಿತವನ್ನು ಉಚ್ಚಾಟನೆಗೊಳಿಸಬೇಕೆಂದಿದ್ದರೆ ಕುಡಿಯಬೇಕೆನ್ನುವ ಒಬ್ಬ ಸರಕಾರೀ ಅಧಿಕಾರಿ ಕೂಡ ಇರತಕ್ಕುದಲ್ಲ. ಸರಕಾರೀ ನೌಕರಿಯಲ್ಲಿದ್ದ ಯುರೋಪಿಯನ್ನರು, ಆ್ಯಂಗ್ಲೋ ಇಂಡಿಯನ್ನರು ಪಾರ್ಶಿಗಳು ಮೊದಲಾದವರಿಗೆ ಕುಡಿತದ ಬಗ್ಗೆ ಈಗಿದ್ದ ಸೌಕರ್ಯವನ್ನು ತೆಗೆದುಬಿಡಬೇಕಲ್ಲದೆ ಸರಕಾರದ ನೌಕರಿಯಲ್ಲಿರಬಯಸಿದರೆ ಅವರೂ ಸಹ ಪಾನಪದ್ಧತಿಯನ್ನು ಸಂಪೂರ್ಣವಾಗಿ ಬಿಟ್ಟುಕೊಡಬೇಕು.

ಈ ಸಂದರ್ಭದಲ್ಲಿ ರಚನಾತ್ಮಕ ಕಾರ್ಯಕರ್ತರಿಗೂ ಸಮಾಜ ಸುಧಾರಕರಿಗೂ ನಾನು ಮತ್ತೆ ಮತ್ತೆ ಒತ್ತಿ ಹೇಳುವದೆಂದರೆ ಪಾನನಿರೋಧದ ವಿಷಯದಲ್ಲಿ ಕೇವಲ ಸರಕಾರವನ್ನೇ ಅವಲಂಬಿಸಿ ಕೂಡುವದು ಉಪಯೋಗದ್ದಲ್ಲ. ರಚನಾತ್ಮಕ ಕಾರ್ಯಕ್ರಮದ ಎಲ್ಲ ವಿಷಯಗಳೂ ಅವು ಆರ್ಥಿಕ ಲೋಕಕ್ಕೆ ಸಂಬಂಧಪಟ್ಟವುಗಳೆಂದು ತೋರಿಬಂದರೂ, ನೈತಿಕ ಸಾಮಾಜಿಕ ಮತ್ತು ಆಧ್ಯಾತ್ಮಿಕ ತಳಹದಿಯ ಮೇಲೆಯೇ ನಿಂತಿವೆ. ಅವುಗಳೆಲ್ಲ ಜನಸಾಮಾನ್ಯರ ನಯಿತಾಲೀಮು ಸಂಸ್ಥೆಯ ಭಾಗಗಳಾಗಿವೆ. ಸರಕಾರವು ಅದೆಷ್ಟೇ ಉತ್ತಮವಾದುದಿರಲಿ ನಮ್ಮ ಮಾರ್ಗದಲ್ಲಿದ್ದ ಆತಂಕಗಳನ್ನು ಮಾತ್ರ ಅದು ದೂರ ಮಾಡಬಹುದಿಷ್ಟೇ. ಆದರೆ ಪುನರ್ನಿರ್ಮಾಣದಂತಹ ಮಹಾ ಕಾರ್ಯವು ಸ್ವಯಂಪ್ರೇರಿತ ಸಮಾಜ ಸೇವಕರಿಂದಲೇ ಸಾಧ್ಯ.

ವರ್ಧಾ — ಕಿಶೋರಲಾಲ

೩-೭-೪೮ — ಮಶ್ರೂವಾಲಾ

ಖಾದಿ ಆಶ್ರಮಗಳು

ಒಬ್ಬ ಸಹಕಾರ್ಯಕರ್ತರಿಗೆ ಶ್ರೀ. ವಿನೋಬಾ ಅವರು ಒಂದು ಪತ್ರದಲ್ಲಿ ಹೀಗೆ ಬರೆದಿದ್ದಾರೆ.

"ಹಂಜಿಗಳನ್ನು ಸಿದ್ಧ ಪಡಿಸಲು ಹಿಂಜುವ ಬಿಲ್ಲನ್ನು ಬಳಸಕೂಡದೆಂದು ನನ್ನ ಖಂಡಿತ ಮತ. ನನ್ನ ಈ ಅಭಿಪ್ರಾಯವನ್ನು ಬದಲಿಸಲು ಅಂತಹ ಯಾವ ಪ್ರಬಲ ಕಾರಣಗಳೂ ಇಲ್ಲ. ಖಾದಿಯನ್ನು ವೈಯಕ್ತಿಕ ಕಾರ್ಯಕ್ರಮವೆಂದೇ ನಿರ್ಧರಿಸುವಾ. ಖಾದಿಯನ್ನು ಉತ್ಪಾದಿಸುವ ಇನ್ನುಳಿದವರು ಹೀಗೆ ಮಾಡುವರೋ ಇಲ್ಲವೊ ಎಂಬುದರ ಗೊಡವೆ ನಮಗೇಕೆ?

"ಹೆಣ್ಣುಮಕ್ಕಳಿಗೆ ನೇಯಲು ಕಲಿಸಲೇಬೇಕು. ಹತ್ತಿಯನ್ನು ಹಿಂಜುವದರಿಂದ ಮೊದಲುಮಾಡಿ ನೇಯುವವರೆಗೆ ಹೆಣ್ಣುಮಕ್ಕಳೇ ಎಲ್ಲ ಕೆಲಸಮಾಡಿದರೆ ಖಾದಿಯು ತುಟ್ಟಿಯಾಗುವದೂ ಇಲ್ಲವಿಷ್ಟೇ ಅಲ್ಲ ಅದರ ಬಳಕೆಯೂ ನೆಲೆಯಾಗಿ ನಿಲ್ಲುವದು. ಈ ವಿಷಯವನ್ನು ಪ್ರಯೋಗಮಾಡಿ ನೋಡುವದು ಅತ್ಯಗತ್ಯವಾಗಿದೆ. ಆದರೆ ನಮ್ಮ ಹಳೆಯ ಸಂಗಾತಿಗಳಲ್ಲಿ ಹೊಸ ಪ್ರಯೋಗಗಳನ್ನುಮಾಡಿ ನೋಡುವ ಉತ್ಸಾಹ ಉಳಿದಿಲ್ಲವೆಂದು ನನಗೆ ಕಂಡು ಬರುತ್ತದೆ. ಖಾದಿಯ ಬಗ್ಗೆ ವಿಶ್ವಾಸವಿದ್ದ ಹೊಸ ಕೆಲಸಗಾರರೇ ಈ ಪ್ರಯೋಗ ಮಾಡಬಲ್ಲರು. ನಾವೆಲ್ಲರೂ ನೇಯುವದನ್ನು ಕಲಿಯಲೇಬೇಕು. ನೇಯಲು ಕಲಿಯುವದಕ್ಕಾಗಿ ಅವಶ್ಯವಾಗಿರುವ ಗಿಂಟ ಎಳೆಯನ್ನು ಎಲ್ಲರೂ ಸಹಕಾರದಿಂದ ಉತ್ಪಾದಿಸಬೇಕು.

"ಆಶ್ರಮ ಮಾದರಿಯ ಒಂದು ಸಂಸ್ಥೆಯಾದರೂ ಪ್ರತಿ ಪ್ರಾಂತದಲ್ಲಿ ಇರುವದು ಅತ್ಯವಶ್ಯ. ಅಲ್ಲಿ ಈ ಬಗೆಯ ಪ್ರಯೋಗಗಳನ್ನು ಕೈಕೊಳ್ಳಬಹುದು. ನಾವು ಸ್ಥಾಪಿಸಿರುವ ಪವನಾರ, ಸೇವಾಗ್ರಾಮ, ನಲವಡಿ, ಧುಳಿಯಾ, ಉರುಳಿ-ಕಾಂಚನ ಹಾಗೂ ಇನ್ನುಳಿದ ಕೇಂದ್ರಗಳು ಆಶ್ರಮ ಪದ್ಧತಿಯನ್ನು ಅನುಸರಿಸಿದ್ದಾದರೆ ಈ ಬಗೆಯ ಪ್ರಯೋಗಗಳು ಸಾಧ್ಯವಾಗಬಹುದು.

ಜೂನ ೧೯೪೮ — ವಿನೋಬಾ"

(ಮೂಲ ಮರಾಠಿಯ ಅನುವಾದ)

ಮಾನಸಶಾಸ್ತ್ರ ಮತ್ತು ಬಾಲಶಿಕ್ಷಣ

[ಶ್ರೀ ರಾಯನಗೌಡರು ಪಾಟೀಲ ಬಿ. ಎ. ಕುರ್ತಕೋಟಿ]

(ಕುರ್ತಕೋಟಿಯಲ್ಲಿ ಜರುಗಿದ ಶಿಕ್ಷಣ ಸಮ್ಮೇಲನದಲ್ಲಿ ಶ್ರೀಯುತ ರಾಯನಗೌಡರು ಮಾಡಿದ ಭಾಷಣದ ಸಾರ.)

ಮನಸ್ಸು

ವ್ಯವಹಾರತಃ ನೋಡಿದರೆ ಮನಸ್ಸಿಗೂ ಆತ್ಮನಿಗೂ ಅಭೇದವೆಂತಲೇ ಹೇಳಬೇಕು. ಬಾಹ್ಯ ಪದಾರ್ಥಗಳ ಜ್ಞಾನವು ಮನಸ್ಸಿಗೆ ಸುಲಭವಾಗಿ ಆಗುತ್ತದೆ. ಆದರೆ ಮನಸ್ಸಿಗೆ ತನ್ನ ವ್ಯಾಪಾರದ ಜ್ಞಾನವಾಗಬೇಕಾದರೆ ಬಹಳ ಕಷ್ಟವಾಗುವದು. ಕೆಲವು ಶಾಸ್ತ್ರಜ್ಞರು ಮನಸ್ಸಿಗೆ ತನ್ನನ್ನು ತಾನು ತಿಳಿದುಕೊಳ್ಳುವದು ಅಸಾಧ್ಯವೆಂತಲೂ ಹೇಳುತ್ತಾರೆ. ಮನಸ್ಸಿನ ಕೆಲವು ಸಾಮಾನ್ಯ ಲಕ್ಷಣಗಳನ್ನು ತಿಳಿದುಕೊಂಡು ನಾವು ತೃಪ್ತರಾಗಬೇಕೇ ಹೊರತು ಮನಸ್ಸೆಂದರೇನು ಎಂಬ ಮೂಲ ಪ್ರಶ್ನೆಯನ್ನು ಬಿಡಿಸುವ ಅಸಾಧ್ಯ ಕೆಲಸಕ್ಕೆ ಪ್ರವೃತ್ತರಾದರೆ ಕಡೆ ತನಕ ಅಸಮಾಧಾನದಲ್ಲಿಯೇ ಕೊಡಬೇಕಾಗುವದು.

ಮನಸ್ಸಿನ ಭಾಗಗಳು

ಮನಸ್ಸಿನಲ್ಲಿ ನಾವು ಎಚ್ಚರದಿಂದಿರುವ ಪ್ರಜ್ಞಾಭಾಗವು ಒಂದು. ಇದಕ್ಕೆ ಜಾಗ್ರತ ಮನಸ್ಸೆನ್ನಬಹುದು. (Conscious Mind) ಇನ್ನೊಂದು ನಾವು ಎಚ್ಚರಿಲ್ಲದಿದ್ದರೂ ನಮ್ಮ ಪರೋಕ್ಷದಲ್ಲಿ ನಮಗೆ ತಿಳಿಯದೆ ನಡೆಯತಕ್ಕ ಮನೋವ್ಯಾಪಾರವು. ಇದಕ್ಕೆ ಅಪ್ರಜ್ಞಾಭಾಗವೆಂತಲೂ (Unconscious Mind) ಅನ್ನುತ್ತಾರೆ, ಅಥವಾ ಅಜಾಗ್ರತ ಮನಸ್ಸೆನ್ನಬಹುದು. ನಮಗೆ ಗೊತ್ತಾಗದಂತೆ ನಮ್ಮ ಮನಸ್ಸಿನಲ್ಲಿ ಎಷ್ಟೋ ವ್ಯಾಪಾರಗಳು ನಡೆಯುತ್ತವೆಂದರೆ ಸೋಜಿಗವೆನಿಸಬಹುದು. ಆದರೆ ನಮ್ಮ ದೇಹದಲ್ಲಿ ಕೂಡ ನಾವು ಲಕ್ಷ ಕೊಡದೆ, ನಮ್ಮ ಸಮ್ಮತಿ ಇಲ್ಲದೆ, ನಮಗೆ ತಿಳಿಯದೆ, ಎಷ್ಟೋ ಯಾಂತ್ರಿಕ ವ್ಯಾಪಾರಗಳು ತಮ್ಮ ಷ್ಟಕ್ಕೆ ತಾವೇ ನಡೆಯುತ್ತವೆ. ಅದರಂತೆ ಮನಸ್ಸಿನಲ್ಲಿ ಎಷ್ಟೋ ವಿಚಾರ ತರಂಗಗಳು ಮತ್ತು ತೃಷ್ಣಾತರಂಗಗಳು ನಮಗೆ [illegible] ಲ್ಲದೆ ಸತತವಾಗಿ ಸಾಗುತ್ತವೆ. ನಾವು [illegible] ದಿಂದ ಮಾಡಿದ ಎಲ್ಲ ಕರ್ಮಗಳೂ [illegible] ಎಲ್ಲ ಅನುಭವಗಳೂ ಎಲ್ಲ ತರದ ಕಲ್ಪನಾತರಂಗಗಳೂ ಅಂತರ್ಮನಸ್ಸಿನಲ್ಲಿ ಅಚ್ಚಳಿಯದೆ ಹಾಗೇ ಉಳಿಯುತ್ತವೆ. ಅಂತರ್ಮನಸ್ಸಿನ ಸ್ಮರಣಶಕ್ತಿಯು ಅಗಾಧವಾದದ್ದು. ನಮ್ಮ ಎಚ್ಚರಿಕೆಯಲ್ಲಿ ಇರುವ ನೀತಿಬೋಧಕ್ಕೆ ಅಂದರೆ ಸದಸದ್ವಿವೇಕ ಬುದ್ಧಿಗೆ (Conscience) ವಿರುದ್ಧವಾದ ತೃಷ್ಣಾತರಂಗಗಳು ಒಳಗೆ ಹತ್ತಿಕ್ಕಲ್ಪಟ್ಟು ಮೇಲಕ್ಕೇಳಲಾರದೆ ಒಳಗೆ ಜಾಗ್ರತವಾಗಿ ಕುಣಿದಾಡುತ್ತ ನಮ್ಮ ಮನಸ್ಸಿಗೆ ಆಯಾಸವನ್ನುಂಟುಮಾಡುತ್ತವೆ. ಇಂಥ ಅಸತ್ಯವಾದ ತೃಷ್ಣಾಪರಂಪರೆಯು ಚಲನವಲನವು ಮಾನಸಿಕ ರೋಗಗಳನ್ನು ಹುಟ್ಟಿಸುತ್ತದೆ. ಇಂಥ ಅಶ್ಲೀಲ ತೃಷ್ಣಾಪರಂಪರೆಯು ನಮ್ಮ ಎಚ್ಚರದಲ್ಲಿ ಅಂದರೆ ಪ್ರಜ್ಞೆಯಲ್ಲಿ ಬಂದರೆ ಅವು ಶುದ್ಧವಾಗಿ ತಮ್ಮ ದೋಷವನ್ನು ಕಳೆದುಕೊಳ್ಳುವವು. ಇಂಥ ತೃಷ್ಣೆಗಳನ್ನು ಹೊರಗೆ ಹಾಕುವದರಿಂದ ನಮ್ಮ ಚಿತ್ತವು ಶಾಂತವೂ ಸುದೃಢವೂ ಆಗುವದು. ಹೀಗೆ ತೃಷ್ಣೆಗಳ ಉಚ್ಚಾಟನೆಯಿಂದ ಮನೋರೋಗವು ಮಾಯವಾಗಿ ಮನಸ್ಸಿನ ಆರೋಗ್ಯವು ಲಭಿಸುವದೆಂದು ಪೃಥಕ್ಕರಣಕಾರರು ಹೇಳುತ್ತಾರೆ. ಇದಕ್ಕೆ ಮಾನಸಿಕ ಉಪಚಾರವೆಂದೆನ್ನುತ್ತಾರೆ. (Psychic Treatment)

ಬಾಲಶಿಕ್ಷಣ

ಬಾಲಕರಿಗೆ ನಾವು ನಕಾರಾತ್ಮಕ ಉಪದೇಶ ಮಾಡದೆ ಪ್ರವೃತ್ತಿಪರ ಸನ್ಮಾರ್ಗಗಳನ್ನು ತೋರಿಸಬೇಕು, ಅಂದರೆ "ಗೊಂದಲ ಹಾಕಬೇಡಿರಿ, ಕೆಟ್ಟಕೆಲಸ ಮಾಡಬೇಡಿರಿ" ಮುಂತಾದ ನಿರ್ಬಂಧಗಳನ್ನು ಹಾಕಿದರೆ ಬಾಲಕರ ಎಳೆ ಮನಸ್ಸಿನ ಮೇಲೆ ಅಪಾಯವುಂಟಾಗುವದು. ಆಟವನ್ನು ಹೇಗೆ ಆಡಬೇಕು, ಪರಸ್ಪರ ಸಹಕಾರವನ್ನು ಹೇಗೆ ಮಾಡಬೇಕು, ಪಾಠಗಳನ್ನು ಅನಾಯಾಸವಾಗಿ ಹೇಗೆ ಕಲಿಯಬೇಕು, ಮುಂತಾದ 'ಮಾಡು,' ಎಂಬ ಸನ್ಮಾರ್ಗವನ್ನು ತೋರಿಸಿ ಅವರಲ್ಲಿ ಅವರನ್ನು ಪ್ರಚೋದಿಸಿ ಅವರ ಶಕ್ತಿಯು ಸತ್ಕಾರ್ಯಗಳಲ್ಲಿ ವ್ಯಯವಾಗುವಂತೆ ಮಾಡಬೇಕು. ಏನೂ ಮಾಡದೆ ಕಲ್ಲುಗೊಂಬೆಯಂತೆ ಸುಮ್ಮನೆ ಕೊಡುವ ಹುಡುಗನನ್ನು ಒಳ್ಳೆ ಹುಡುಗನೆಂದು ಅನ್ಯರಿಗೆ ಆದರ್ಶವನ್ನಾಗಿ ತೋರಿಸುವದು ಎಷ್ಟು ಹುಚ್ಚುತನದ್ದು! ಈ ಮಾರ್ಗದಲ್ಲಿ ಅಂದರೆ ಇಚ್ಛಾಶುದ್ಧಿಯ ಮಾರ್ಗದಲ್ಲಿ ಶಿಷ್ಯನನ್ನು ಕರೆದೊಯ್ಯಬೇಕಾದರೆ ಗುರುಗಳ ಚಿತ್ತವು ಶುದ್ಧವಿರಲಿಕ್ಕೆಬೇಕು. ಪಿಪಾಸೆಯಿಂದ ಅಥವಾ ತೃಷ್ಣೆಯಿಂದ ತುಂಬಿದ ಅಶುದ್ಧ ಮನಸ್ಸಿನವರು ತಾವೇ ಸನ್ಮಾರ್ಗಕ್ರಮಣದಲ್ಲಿ ಅಶಕ್ತರಿರುವಾಗ ಎಳೆ ಬಾಲಕರನ್ನು ಶಿಕ್ಷಣದಂಥ ಉಚ್ಚ ಕ್ಷೇತ್ರದಲ್ಲಿ ಕರೆದೊಯ್ಯುವದೆಂತು? ತನಗೇ ಮಾರ್ಗ ಸಿಗದ ಕುರುಡನು ಅನ್ಯರಿಗೆ ಹೇಗೆ ಮಾರ್ಗದರ್ಶನ ಮಾಡುತ್ತಾನೆ? ಹೊಲಸು ಅರಿವೆಯಿಂದ ನಿಲುಗನ್ನಡಿಯನ್ನು ಸ್ವಚ್ಛಮಾಡಲಿಕ್ಕೆ ಪ್ರಯತ್ನಮಾಡಿದರೆ ಆ ಕನ್ನಡಿಯು ಇನ್ನಷ್ಟು ಹೊಲಸಾಗುವದು.

ಮನೋರೋಗ

ಆತ್ಮನಿಷ್ಠ ಪ್ರೇಮವೇ ಮನೋರೋಗದ ಬೀಜವು (Narcism). ವ್ಯಕ್ತಿಯ ಪ್ರೇಮದ ಪ್ರವಾಹವು ಬಹಿರ್ಮುಖವಾಗಿ ಸಾಗಿ ಅನ್ಯ ವಸ್ತುಗಳ ಅಥವಾ ವ್ಯಕ್ತಿಗಳ ಮೇಲೆ ಅವರಿಸಿದರೆ ಅದು ಪ್ರಕೃತಿಗೆ ಅನುಗುಣವಾದದ್ದು, ಅಂದರೆ ಪ್ರೇಮದ ಪ್ರವಾಹವು ತನ್ನನ್ನು ಬಿಟ್ಟು ಎರಡನೇ ವಸ್ತುಗಳ ಮೇಲೆ ಹರಿಯುವ ಸ್ವಭಾವವುಳ್ಳದ್ದು. ಶೈಶವದಲ್ಲಿ ಕೂಸಿಗೆ ತನ್ನ ಮೇಲೆ ಪ್ರೀತಿ ಇರುತ್ತದೆ. ಅದರಂತೆ ಹುಚ್ಚರಲ್ಲಿ ಪ್ರೀತಿಯು ಆತ್ಮನಿಷ್ಠವಾಗಿರುತ್ತದೆ. ಶಿಶುವು ಬೆಳೆಯುತ್ತ ಹೋದಂತೆ ಅನ್ಯವಸ್ತುಗಳ ಮತ್ತು ವ್ಯಕ್ತಿಗಳ ಮೇಲೆ ಆಸ್ಥೆಯನ್ನು ತೋರಹತ್ತುತ್ತದೆ. ಹೀಗೆ ಈ ಬಹಿಃಪ್ರವೃತ್ತಿಯು ನಡುವೆ ತಡೆಗಟ್ಟಿದರೆ ಅದಕ್ಕೆ ಸ್ಥಗಿತತ್ವವನ್ನುತ್ತಾರೆ. (Fixation) ಇದು ಮುಂದೆ ವಯಂದೆ ಸಾಗಿದ ಹೊರತು ಮನಸ್ಸಿನ ಬೆಳವಣಿಗೆಯಾಗಲಾರದು. ಬಾಲ್ಯಾವಸ್ಥೆಯಲ್ಲಿ ಬಾಲಕರ ಮನಸ್ಸಿನೊಳಗೆ ತಾವು ಬಹುದೊಡ್ಡವರೆಂಬ ಭಾವನೆಯು ಒಡಮೂಡದಂತೆ ಶಿಕ್ಷಕರು, ಪಾಲಕರು, ಬಹು ಜಾಗರೂಕರಾಗಬೇಕು. "ನಾನು ಬಹು ದೊಡ್ಡವನು, ಅನ್ಯರಿಗಿಂತ ಧನ್ಯನು, ಎಲ್ಲರೂ ನನ್ನ ಸಂಗಡ ವಿಶಿಷ್ಟ ರೀತಿಯಲ್ಲಿ ನಡೆದುಕೊಳ್ಳಬೇಕು, ನನಗೆ ಇಂಥ ಪ್ರಸಂಗ ಬರಬಾರದು," ಮುಂತಾದ ದುರಹಂಕಾರ ಕಲ್ಪನೆಗಳು ಕಡೆ ತನಕ ನಮ್ಮನ್ನು ಕಾಡುತ್ತವೆ ಮತ್ತು ನಮಗೆ ನಿಷ್ಕಾರಣವಾಗಿ ಮನೋವೇದನೆಯನ್ನು ಕೊಟ್ಟು ನಮ್ಮ ಮನಸ್ಸನ್ನು ಹಣ್ಣುಮಾಡಿ ವಿವಿಧ ಮನೋರೋಗಗಳಿಗೆ ನಮ್ಮನ್ನು ಈಡು ಮಾಡುತ್ತವೆ. ಈ ಕಾರಣದಿಂದ ಸ್ವಾಭಾವಿಕ ವಾತ್ಸಲ್ಯವುಳ್ಳ ತಂದೆತಾಯಿಗಳು ಶಿಕ್ಷಣಕಾರ್ಯದಲ್ಲಿ ನಿರುಪಯುಕ್ತರೆಂದು ಪುರಾತನ ಕಾಲದಿಂದ ಸಂಬಂಧವಿಲ್ಲದ ಅನ್ಯಪುರುಷನನ್ನು ನಿಯೋಜಿಸುವದುಂಟು. ಲಾಲನೆಯಿಂದ ವೃಥಾಭಿಮಾನವು ಹೆಚ್ಚಾಗಿ ಬಾಲಕರ ಮನಸ್ಸು ಹಾಳಾಗಿಹೋಗುತ್ತದೆ. "ನಾನು ಎಲ್ಲರಲ್ಲಿ ಒಬ್ಬನು. ನನ್ನನ್ನು ಯಾರೂ ಹೆಚ್ಚಿನವನೆಂದು ತಿಳಿಯಬಾರದು," ಎಂಬ ಆರೋಗ್ಯಕರ ಕಲ್ಪನೆಯು ಬಾಲಕರ ಮನಸ್ಸಿನಲ್ಲಿ ದೃಢವಾಗುವಂತೆ ಶಿಕ್ಷಣದಲ್ಲಿ ಪ್ರಯತ್ನವಾಗಬೇಕು. ಆದರೆ ಈಗಿನ ಶಿಕ್ಷಣ ಕ್ರಮದಲ್ಲಿ ಶಿಕ್ಷಣವು ಹೆಚ್ಚಾದಂತೆ ವೃಥಾಭಿಮಾನವು ಹೆಚ್ಚಾಗುತ್ತ ಹೋಗಿ ಯಾವ ಕೆಲಸಕ್ಕೂ ವಿದ್ಯಾರ್ಥಿಯು ನಿರುಪಯೋಗಿಯಾಗುತ್ತಾನೆ. ಹೈಸ್ಕೂಲಿನಲ್ಲಿ ಇಂಗ್ಲೀಷು ಶಿಕ್ಷಣವು ಸಿಗಹತ್ತಿದ ಮೇಲೆ ಮನೆಗೆಲಸಗಳನ್ನು ಮಾಡಲಿಕ್ಕೂ ಅವಳು ನಾಚುತ್ತಾಳೆ. ಕಾಲೇಜದ ಮೆಟ್ಟಲು ಹತ್ತಿದ ಮೇಲಂತೂ ಕೇಳುವದೇನು? ಉಗಿಬಂಡಿಯಲ್ಲಿ ಪ್ರವಾಸ ಮಾಡುವಾಗಲೂ ಇತರ ಆಪ್ತಬಂಧುಗಳು ಸಾಮಾನುಗಳನ್ನು ನೆಗಹಿದರೂ ತಾನು ಏನೂ ತಕ್ಕೊಳ್ಳದ ನಿರ್ಘೃಣತೆಯ ದೃಶ್ಯವನ್ನು ನಾವೆಲ್ಲರೂ ನೋಡುತ್ತೇವೆ. ಶಿಕ್ಷಣವು ಹೆಚ್ಚಾಗಿ ಸಿಗುತ್ತ ಹೋದಂತೆ ಮೇಲು ಕೀಳೆಂಬ ಭಾವನೆಯು ಅಳಿಯಲಿಕ್ಕೆ ಬೇಕು.

ವಿವರಣ

ಯಾವದಾದರೊಂದು ವಿಷಯವನ್ನು ಬಾಲಕರಿಗೆ ತಿಳಿಯಹೇಳುವಾಗ ಅವರಿಗೆ ಗೊತ್ತಿದ್ದ ಮಟ್ಟಕ್ಕೆ ಶಿಕ್ಷಕನು ಇಳಿಯಬೇಕಾಗುತ್ತದೆ. ಗೊತ್ತಿದ್ದ ವಿಷಯಗಳಿಂದ ಗೊತ್ತಿಲ್ಲದ ಹೆಚ್ಚಿನ ವಿಷಯಗಳ ಕಡೆಗೆ ಉಪಮಾನಾದೃಷ್ಟಗಳ ಸಹಾಯದಿಂದ ಸಾವಕಾಶವಾಗಿ ವಿದ್ಯಾರ್ಥಿಗಳ ಬುದ್ಧಿಶಕ್ತಿಯನ್ನು ಬೆಳೆಸುತ್ತ

—ಗ್ರಹಿಸಿಯ ಪುಟಕ್ಕೆ

ರೂಪರಂಗ

'ರೂಪಂ' ರಂಗದಲ್ಲಿ

ಹುಬ್ಬಳ್ಳಿಯ 'ರೂಪಂ' ರಂಗದಲ್ಲಿ 'ಮೋಭಾಯಿ' ಎಂಬ ಫಿಲ್ಮಿಸ್ತಾನದ ಚಿತ್ರವನ್ನು ಪ್ರದರ್ಶಿಸಲಾಗುತ್ತಿದೆ. ಅದರಲ್ಲಿ ಕಾಮಿನೀಕೌಶಲ್, ಉಲ್ಲಾಸ್, ರಾಜನ್ ಹಕ್ಸರ್ ಮತ್ತು ಪಾರೋ ಮುಂತಾದವರು ಪಾತ್ರವಹಿಸಿದ್ದಾರೆ. ಮುಸ್ಸಿದಿಲ್ ಅವರು ದಿಗ್ದರ್ಶಿಸಿದ್ದಾರೆ.

ಕಥಾಸಾರ ಹೀಗಿದೆ: ರಾಜಶೇಖರನು ನಿರ್ಮಲೆಯ ತಂದೆ. ಅವನು ಒಬ್ಬ ಅರಣ್ಯಾಧಿಕಾರಿ. ಅವನು ಜಯನನ್ನು ತನ್ನ ಮಗನಂತೆಯೇ ಸಾಕಿದನು. ತಾರುಣ್ಯ ಉದಯವಾದೊಡನೆ ನಿರ್ಮಲೆ ಜಯರ ವಾತ್ಸಲ್ಯವು ಪ್ರಣಯಬಂಧಕ್ಕೆ ತಿರುಗಿತು. ನಿರ್ಮಲೆಯ ತಾಯಿಯಾದ ಸರಳೆ ಮತ್ತು ಅವಳ ಅಣ್ಣ ಶಿವಶರಣರು ಜಯನನ್ನು ಹಗೆಯೆಂದು ಮನೆಯಿಂದ ಓಡಿಸಿದರು. ಅದೇ ಕಾಲದಲ್ಲಿ ಕಾರಣಾಂತರದಿಂದ ಅವನನ್ನು ಅಲ್ಲಿ ಬಿಟ್ಟು ಹೋಗಿದ್ದ ಅವನ ತಂದೆ ಬಂದು ಅವನನ್ನು ಕರೆದ್ಕೊಂಡು ಹೋದನು.

ಉಲ್ಲಾಸ್
(ಪ್ರಕಾಶನ ಪಾತ್ರದಲ್ಲಿ)

ಜಯನ ತಂದೆ ನಾರಾಯಣನು ತನ್ನ ಮೊದಲಿನ ಸತಿ ಕೌಸಲ್ಯೆಯನ್ನೂ ಅವಳಲ್ಲಿ ಹುಟ್ಟಿದ ಪ್ರಕಾಶನನ್ನೂ ಹುಡುಕಲು ಶಿವಗಾವಿಗೆ ಕಳಿಸಿದನು.

ಕೌಸಲ್ಯೆಯು ಮದನಪುರ ಸಂಸ್ಥಾನದ ಠಾಕೂರನ ಮಗಳು. ಅವಳು ಸಾಮಾನ್ಯನಾದ ನಾರಾಯಣನನ್ನು ಪ್ರೇಮಿಸಿದ ತಪ್ಪಿಗೆ ಪ್ರಕಾಶನ ಜನನದ ತರುವಾಯ ಅವಳನ್ನು [illegible] ಮನೆಬಿಟ್ಟು ಓಡಿಸಿದ್ದನು. ನಾರಾಯಣನೂ ಅವಳನ್ನು ಬಿಟ್ಟುಬಿಟ್ಟನು. ಶಿವಗಾವಿನ ಗುರುವು ಅವಳಿಗೆ ಆಶ್ರಯವಿತ್ತನು.

ಅವನು ಅವಳ ಇಷ್ಟದಂತೆ ಅವಳ ಮಗ ಪ್ರಕಾಶನನ್ನು ಬೇರೆಯೇ ಇಟ್ಟು ಸಾಕಿದನು. ಸಾಯುವ ಮುನ್ನ ಕೌಸಲ್ಯೆ ಪ್ರಕಾಶನನ್ನು ಕರೆದು ಅವನೊಬ್ಬನೇ ಮದನಪುರದ ಉತ್ತರಾಧಿಕಾರಿ ಎಂದೂ ಅವನ ತಂದೆ ತನ್ನನ್ನು ಹೇಗೆ ವಂಚಿಸಿದನೆಂದೂ ಹೇಳಿ ಸತ್ತಳು. ಪ್ರಕಾಶನು ತಂದೆಯ ಮೇಲೆ ಸೇಡು ತೀರಿಸಿಕೊಳ್ಳುವೆನೆಂದು ಪ್ರತಿಜ್ಞೆ ಮಾಡಿದನು. ಜಯನು ಅಲ್ಲಿಗೆ ಬರುವಷ್ಟರಲ್ಲಿ ಪ್ರಕಾಶನು ತಾಯಿಯ ಹೆಣವನ್ನು ಸುಟ್ಟು ಅಲ್ಲಿಂದ ದೂರ ಹೊರಟು ಹೋಗಿದ್ದನು.

ಪ್ರಕಾಶನು ಸಿಗದಿದ್ದುದರಿಂದ ನಿರ್ವಾಹವಿಲ್ಲದೆ ಶಿವಗಾವಿನ ಗುರುವು ಜಯನನ್ನೇ ಯುವರಾಜನೆಂದು ಹೇಳಿ ದಿವಾನನಿಗೊಪ್ಪಿಸಿದನು. ತನ್ನ ಭಾವೀ ಅಳಿಯನಾದ ಶಿವಶರಣನನ್ನು ಗದ್ದುಗೆಗೇರಿಸಬೇಕೆಂದಿದ್ದ ದಿವಾನನ ಹಿತಾಕ್ಕೆ ಇದು ಕುಠಾರಪ್ರಾಯವಾಯಿತು.

ಪ್ರಕಾಶ ಮತ್ತು ಅವನ ತಂದೆ ನಾರಾಯಣರು ಆಕಸ್ಮಾತ್ತಾಗಿ ಭೆಟ್ಟಿಯಾದಾಗ ತಂದೆಯ ವಾತ್ಸಲ್ಯ ಮಗನ ಕ್ರೋಧವನ್ನು ಶಾಂತ ಮಾಡಿತು; ಮತ್ತು ಆ ಆಕಸ್ಮಿಕ ಘಟನೆಯಿಂದ ಪ್ರಕಾಶನ ಕೈಮೇಲೇ ನಾರಾಯಣನು ಮಡಿದನು.

ನಿರ್ಮಲೆಯ ಕುಟುಂಬದೊಡನೆ ಪ್ರಕಾಶನಿಗೆ ಗೆಳೆತನ ಬೆಳೆದು, ಅವನಿಗೆ ಅವಳನ್ನು ಕೊಡುವುದೆಂದಾಯಿತು. ಆದರೆ [illegible]

[illegible] ಬಂದನು. [illegible] ಪ್ರಕಾಶನು ಜಯನನ್ನು ಕೊಲ್ಲಲು ಹೋಗಿ ನಿರ್ಮಲೆಗೆ [illegible] ನಾದನು. [illegible] ಜಯನು [illegible] ಕೊಲೆಗಡುಕನೆಂದು ಪ್ರಕಾಶನನ್ನು [illegible] ಹಾಕಿದನು. [illegible] ಪ್ರಕಾಶನು ಜಯನನ್ನು [illegible] ನಿರ್ಮಲೆಯನ್ನು [illegible] ಮನೆಗೆ ಬಂದನು. ಅಲ್ಲಿ [illegible] ಜಯನಿಗೆ ನಿರ್ಮಲೆಯ [illegible]

ಪ್ರಕಾಶನ ಇಷ್ಟದಂತೆ ಗುರುವು ಜಯನಿಗೆ ನಿರ್ಮಲೆಯನ್ನು ಮದುವೆ ಮಾಡಿ [illegible] ದನು. ಶಿವಶರಣನು ತಂಗಿಯ ಮದುವೆ [illegible] ದಿಂದ ಆ ಮೊದಲೇ [illegible] ದಿವಾನನಿಗೆ [illegible] ಪ್ರಕಾಶ [illegible]

ಈ ಚಿತ್ರದಲ್ಲಿ ನಿರ್ಮಲೆಗೆ ಪ್ರಕಾಶನಲ್ಲಿ ವಾತ್ಸಲ್ಯವಿದ್ದರೂ ಪ್ರೇಮವಿಲ್ಲ; ಪ್ರಕಾಶನಿಗೆ ಅವಳಲ್ಲಿ ಪ್ರೇಮ, ಜಯನಿಗೆ ನಿರ್ಮಲೆಯಲ್ಲಿ ಪ್ರೇಮ. ಅವಳಿಗೆ ಅವನಲ್ಲಿ. ಆದರೆ [illegible] ವ್ಯಯಾರಿ; ಯುವರಾಜನೆನಿಸಿದ್ದ ಜಯ [illegible] ಒಲಿಸಲು [illegible] ಸೋತು. [illegible] ನಿರ್ಮಲೆಯನ್ನು ಅವ ಮನೆಯಿಂದ ಓಡಿಸುವಳು. ಆಗ ಜಯನೂ ಪ್ರಕಾಶನೂ [illegible] ರು. ಇದು [illegible] ಆ [illegible] ಶಿವಶರಣ

ಕಾಮಿನೀ ಕೌಶಲ್

ಯುವರಾಜನಾಗುವದೆಂದು ಅವನನ್ನು ಒಲಿಸ [illegible] ಪ್ರಕಾಶ ಮತ್ತು ಜಯ, ದಿವಾನನಿಂದ [illegible] ರೊಳಗಿನ ಪ್ರೇಮಬಲಾತ್ಕಾರವನ್ನು [illegible] ತದಲ್ಲಿ ಹೇಳಿದ ಕೆಳಗಿನ ಪದ್ಯಕ್ಕೆ [illegible]

ನನ್ನ ಪ್ರೀತಿಸಲು ನಾನು ಪ್ರೀತಿಸುವ
ನನ್ನೆ; ಅವರು ಮತೆ
ಅನ್ಯನನ್ನು, ಅವ ಬೇರೆಯವಳ;
ನನ್ನಲ್ಲಿ ಲೀನಚಿತ್ತ —
ನನ್ನ ಬದುಕಿ ಸೊರಗುವಳು! ಶಕ್ತಿ [illegible]
ಹೋಚಿಸಿಕ್ಕ [illegible]
ಆಳಗವಗೆ [illegible]
ಗೆಲ್ಲ ಧಿಕ್ಕರಿಸು!

ಅಭಿನಯ ಮುಂತಾದ ಎಲ್ಲ ದೃಷ್ಟಿಯಿಂದಲೂ ಚಿತ್ರ ಚೆನ್ನಾಗಿದೆ.

× ×

ಶ್ರವಣ ಕುಮಾರ

ಮುದ್ದಿ ಮೂವಿಟೋನಿನ 'ಶ್ರವಣ ಕುಮಾರ' ಈಗ ಮುಂಬಯಿಯ [illegible] ರಂಗದಲ್ಲಿ ಮೆರೆಯುತ್ತಿದೆ.

ಚಿತ್ರವು ರಾಮಾಯಣದ ಒಂದು [illegible] ನವನ್ನು ಆಧರಿಸಿದೆ. [illegible]

ವಾರದ ಭವಿಷ್ಯ

ಜ್ಯೋತಿಷಿ — ಕೃಷ್ಣಶಾಸ್ತ್ರಿ ಘಟೆ, ಭವಿಷ್ಯಕಥನ ಆಫೀಸ ಖಡೇಬಜಾರ, ಬೆಳಗಾವಿ.

ಜುಲೈ ೧೯ ರಿಂದ ೨೫ ರವರೆಗೆ

ಮೇಷ

[illegible] ಪ್ರಕೃತಿ ಅಷ್ಟಕ್ಕಷ್ಟೇ. ಆದರೆ ಹೆಂಡತಿಯದು ಉತ್ತಮ ಮತ್ತು ಅವಳ ಸೌಖ್ಯ [illegible]. ಮಕ್ಕಳು ಮಾತ್ರ ತೊಂದರೆ [illegible]ವರು ಮತ್ತು ಮನೆಯಲ್ಲಿಯ ವೃದ್ಧರು [illegible] ಮೊದಲೇ ಮಾಡಬೇಕೆಂದು [illegible]ಯಪಡಿಸುವರು. ಉದ್ಯೋಗದಲ್ಲಿ [illegible] ಮತ್ತು ಪ್ರತಿಷ್ಠೆ ಸಾಮಾನ್ಯ ಆದರೆ [illegible] ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲ ಯಶಸ್ಸು. ಆದರೆ ಅವರೊ[illegible] ಕೆಲ ಶತ್ರುಗಳು ನಿರ್ಮಾಣವಾಗುವ [illegible] ಮಿತ್ರಸುಖ ಅನುಕೂಲ. ಪ್ರವಾಸ [illegible] ಭೆಟ್ಟಿಗಿಂತ ಪತ್ರವ್ಯವಹಾರ ಹೆಚ್ಚು [illegible]ಕೂಲ. ಅಶ್ವಿನಿಯ ೪ ನೆ ಮತ್ತು ಭರ[illegible] ಮೊದಲನೆ ೩ ಚರಣಗಳಿಗೆ ತೊಂದರೆ [illegible]ರೆ ಯಶಸ್ಸು. ತಾ. ೧೯, ೨೦, ೨೪, ೨೫ ಅ[illegible].

ಇದೇ ರೀತಿಯಾಗಿ ಈ ರಾಶಿಯವರಿಗೆ [illegible] ೨-೨½ ವರ್ಷಗಳಿಂದ ಇದ್ದ ೪ ನೆ ಶನಿ [illegible] ರವಿವಾರ ರಾತ್ರಿ ೮ ಘಂಟೆ [illegible] ನಿಮಿಷ [illegible]ನೆಯುವನಾಗುವನು; ಅಂದರೆ ಅವನು [illegible]ದ ಸಿಂಹಕ್ಕೆ ಸಂಕ್ರಮಣ ಮಾಡು[illegible] ಅವನು ಸಿಂಹರಾಶಿಯಲ್ಲಿ ೧೯೫೦ [illegible] ಕೊನೆಯ ವರೆಗೆ [illegible] [illegible] ಅದುಪರಿಂದ ಅಲ್ಲಿಯ ವರೆಗೆ [illegible]ವರಿಗೆ ಮಕ್ಕಳಿಗೆ ಕ್ಲೇಶ ಹೊಸ [illegible]ದರೆ ಹೆಂಡತಿಗೆ ಬಹಳ ಪ್ರಸೂತಿ [illegible] ಮನಸ್ಸಿನ ವಿರುದ್ಧ ಪ್ರವಾಸ ಇಲ್ಲವೆ [illegible]. ನಿಮ್ಮ ಪ್ರಕೃತಿಯ ಬಗ್ಗೆ ಇಲ್ಲವೆ [illegible]ದು ಅಸಂಭಾವ್ಯ ಸಂಗತಿಯ ಬಗ್ಗೆ [illegible] ಭಯ. ದ್ರವ್ಯಲಾಭ ತುಂಬ; ಆದರೆ [illegible]ವಾಗಿ ಅದು ವಹನದಲ್ಲಿ ಬೀಳಬೇಕಾ[illegible] ಅನಪೇಕ್ಷಿತ ಅಡಚಣಿಗಳು ಬಂದು ಸ್ವಲ್ಪ [illegible] ವಿದ್ಯೆಯಲ್ಲಿ ವಿಘ್ನ, ತೀರ್ಥಯಾತ್ರೆ [illegible] ಅನುಗ್ರಹ ವ ಈ ರೀತಿ [illegible] ಮಿಶ್ರಿತ ಫಲಗಳು ಉಂಟಾಗು[illegible].

ವೃಷಭ

ಎಲ್ಲರ ಪ್ರಕೃತಿ ಉತ್ತಮ ಮತ್ತು ಪ್ರಾಪಂಚಿಕ ಸುಖ ಅನುಕೂಲ; ಆದರೆ ಬಂಧುವರ್ಗದ [illegible] ಸ್ವಲ್ಪ ಕಿಟಿಕಿಟಿ. ಸ್ಥಾವರದಲ್ಲಿ ಒಂದು [illegible] ಘಟನೆಯಾದರೆ ಮತ್ತೊಂದು [illegible]; ಹೀಗೆ ಎರಡು ಪ್ರತ್ಯೇಕ ಘಟನೆ [illegible] ಸಂಭವಿಸುವವು; ಮುತ್ಸದ್ದಿಗಳ ಸಹ[illegible] ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ [illegible] ಲಾಭ ಬಹಳ ಉತ್ತಮ. ಮಿತ್ರರಿಂದ [illegible] ಸುಖ ಮತ್ತು ಒಳ್ಳೆ ಸಹಾಯ. [illegible]ಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. [illegible]ಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ [illegible] ಅನುಕೂಲ. ಕೃತ್ತಿಕೆಯ ೪ ನೆ ಮತ್ತು [illegible] ಮೊದಲನೆ ಚರಣಗಳಿಗೆ [illegible]ಯಿಂದಲೆ ಯಶಸ್ಸು. ತಾ. ೨೨, ೨೩, [illegible] ಅನುಕೂಲ.

[illegible] ಬರುವ ೪ ನೇ ಶನಿ ಕೆಲಮಟ್ಟಿಗೆ [illegible], ಹೆಂಡತಿಗೆ ಅನಿಷ್ಟ. ದಗದಗಿಯ [illegible] ಮಾಡಬೇಕಾದ ಪ್ರಸಂಗ, ಬಡವರಿಗೆ [illegible] ಹಾನಿ ಈ ರೀತಿ [illegible]

ಮಿಥುನ

[illegible]

[illegible]. ಹಿಮ್ಮೆಟ್ಟುವದು. ಮಿತ್ರತ್ವದಲ್ಲಿ ಹುರಿಸು ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಹೆಚ್ಚು ಅನುಕೂಲ. ಮೃಗಾದ ೪ ನೆ ಮತ್ತು ಆರಿದ್ರಾದ ಮೊದಲನೆ ೩ ಚರಣಗಳಿಗೆ ತೊಂದರೆ ಯಿಂದಲೆ ಯಶಸ್ಸು. ತಾ. ೧೯, ೨೪, ೨೫ ಅನುಕೂಲ.

ಕಳೆದ ಏಳೂವರೆ ವರುಷಗಳಿಂದ ಇದ್ದ ಸಾಡೇಸಾತಿ ಒಮ್ಮೆ ಕೊನೆಗಂಡು ಶನಿಯು ಅತಿ ಉತ್ತಮವಾದ ೩ ನೇ ಸ್ಥಾನಕ್ಕೆ ಬರುವನು. ಅದರಿಂದ ಪರಾಕ್ರಮದ ಕೃತ್ಯಗಳು ಸಂಭವಿಸಿ ಬಹಳ ಭಾಗ್ಯೋದಯ. ಉತ್ತಮ ಲಾಭ ಸುಬುದ್ಧ ಮತ್ತು ಹಿತೇಚ್ಛು ಜನರ ಸಹವಾಸ. ಮಹತ್ವದ ಪ್ರವಾಸ ಮತ್ತು ಬಂಧು ವರ್ಗದವರಿಗೆ ಅನಿಷ್ಟ, ಇಲ್ಲವೆ ನಿಮ್ಮ ನಿಮ್ಮಲ್ಲಿ ಕಲಹ ಮೊದಲಾದ ಫಲಗಳು ದೊರೆಯುವವು.

ಕರ್ಕ

ಪ್ರಕೃತಿಗೆ ಶೀತವಿಕಾರದ ತೊಂದರೆ. ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ. ಆದರೆ ಹೆಂಡತಿಯು ನಿಮಗೆ ಸರಿ ಬಾರದ ಇಲ್ಲವೆ ತೂಗದ ವೆಚ್ಚದ ಬಗ್ಗೆ ಆಗ್ರಹ ಹಿಡಿಯುವಳು. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಉತ್ತಮ. ಆದರೆ ಲಾಭಕ್ಕಿಂತ ಹಾನಿಯನ್ನೆ ಮಾಡಬೇಕಾದ ಸರತಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಮಿತ್ರರಿಂದ ಅಪ್ರತಿಷ್ಠೆಯಾಗುವಂತೆ ಉಪದ್ವ್ಯಾಪ. ದುಷ್ಟ ಸುಷ್ಟು ವಿಚಾರಗಳಿಂದ ಮನಸ್ಸು ಗೊಂದಲದಲ್ಲಿ. ಪರೋಪಕಾರದಲ್ಲಿ ಲಕ್ಷ. ಪತ್ರವ್ಯವಹಾರಕ್ಕಿಂತ ಪ್ರವಾಸ ಮತ್ತು ಭೆಟ್ಟಿ ಅನುಕೂಲ. ಪುಷ್ಯದ ೪ ನೆ ಮತ್ತು ಆಶ್ಲೇಷಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೨೧, ೨೨ ಅನುಕೂಲ.

ಈಗಿದ್ದ ಸಾಡೇಸಾತಿಯು ಕೊನೆಯ ಅಂದರೆ ಮೂರನೇ ಭಾಗಕ್ಕೆ ಬರುವದರಿಂದ ಅಂದರೆ ೨ ನೇ ಶನಿ ೨೫ ರಿಂದ ಬರುವನು. ಅದರಿಂದ ಸಾಂಪತ್ತಿಕ ಅಡಚಣಿ ಕ್ವಚಿತ್ ಋಣಯೋಗ. ಒಳ್ಳೆ ಜನರ ಬಗ್ಗೆ ಸಂಶಯ. ಆದರೆ ಕೆಟ್ಟ ಜನರ ಬಗ್ಗೆ ಅತಿ ವಿಶ್ವಾಸ. ತಿಂದಿ ತಿನಸು ಕುಡಿಯುವದರಲ್ಲಿ ಧನವ್ಯಯ. ಮಾತಿನಲ್ಲಿ ಬೀಭತ್ಸತೆ. ಬದ್ಧಕೋಷ್ಠತೆಯ ವಿಕಾರ. ಪ್ರಿಯ ಜನರು ದೂರ ಹೋದರೆ ಅಪ್ರಿಯ ಜನರು ಸಮೀಪಕ್ಕೆ ಬರುವಂಥ ಫಲಗಳು ದೊರೆಯುವವು.

ಸಿಂಹ

ನಿಮ್ಮ, ಹೆಂಡತಿಯ— ಮತ್ತು ಮಕ್ಕಳ ಪ್ರಕೃತಿ ಬಗ್ಗೆ ಬಹಳ ಕುರುಕುರಿ; ಆದರೆ ಆಪಾಂತರ ಪ್ರಾಪಂಚಿಕ ಸುಖ ಅನುಕೂಲ. ಬಂಧುವರ್ಗದವರಲ್ಲಿ ಉನ್ನತಿ. ಉದ್ಯೋಗದಲ್ಲಿ ದಗದಗಿಯಿಂದ ಪ್ರಗತಿ; ಆದರೆ ಪ್ರತಿಷ್ಠೆ ಮತ್ತು ಲಾಭ ತುಂಬ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯಪಕ್ಷಗಳಲ್ಲಿ ಸಮಾನಸ್ಥಿತಿ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಮಘಾದ ೪ ನೇ ಮತ್ತು ಪೂರ್ವಾದ ಮೊದಲನೆ ೪ ಚರಣಗಳಿಗೆ ತೊಂದರೆ ಯಿಂದಲೆ ಯಶಸ್ಸು ತಾ. ೧೯, ೨೦, ೨೪ ಅನುಕೂಲ.

ಈಗ ಇದ್ದ ಸಾಡೇಸಾತಿಯ ಮೂರು ಭಾಗಗಳಲ್ಲಿ ನಡುವಿನ ಭಾಗವು ೨೫ ನೇ ತಾರೀಕಿಗೆ ಸುರುವಾಗುವದು; ಅರ್ಥಾತ್ ಈ ರಾಶಿಯವರಿಗೆ ೧ ನೆ ಯುವನಾಗುವನು. ಹೆಂಡತಿಯ ಪ್ರಕೃತಿ ಅನುಕೂಲ; ಆದರೆ ಸ್ವತಃದ್ದು ಮೇಲಿಂದಮೇಲೆ ಕೆಡುವದು. ನಿರಾಶೆಯ ವಿಚಾರಗಳು ಮತ್ತು ಉದಾಸೀನತೆಯ ಮುಖ. ಪ್ರತ್ಯಕ್ಷ ಸಾಹಸದ ಕೆಲಸ ಮಾಡುವದಕ್ಕಿಂತ ಗುಪ್ತ ಕಾರಸ್ಥಾನ ನಡೆಸುವದಲ್ಲಿ ಲಕ್ಷ ಮತ್ತು ಮಾಡಿದರೆ ಬಹಳ ಯಶಸ್ಸು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು ಇಲ್ಲವೆ ಪೂರ್ಣ ಅನುಕೂಲತೆ. [illegible]

[illegible]ಗವನ್ನು ಬದಲಿಸಬೇಕಾಗುವ ಮನಸ್ಸಿನ ಲಹರಿ ಮೊದಲಾದ ಫಲಗಳು ದೊರೆಯುವವು.

ಕನ್ಯಾ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಅನುಕೂಲ; ಆದರೆ ಮಕ್ಕಳಿಗೆ ಕಾಹಿಲೆ ಮನೆಯಲ್ಲಿ ಬಹಳ ಕಲಹ ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಉತ್ತಮ; ಆದರೆ ಆ ಮಾನದಿಂದ ಲಾಭ ಬಹಳ ಕಡಿಮೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸಾದಿ ಕೆಲಸ ಅನುಕೂಲ. ಉತ್ತರಾದ ೪ ನೇ ಮತ್ತು ಹಸ್ತಾದ ಮೊದಲನೆ ೩ ಚರಣಗಳಿಗೆ ಹೆಚ್ಚು ತೊಂದರೆ. ತಾ. ೨೧—೨೨ ಅನುಕೂಲ.

೨೫ ನೇ ತಾರೀಖಿಗೆ ಬರುವ ೧೨ ನೇ ಶನಿಯಿಂದ ಸಾಡೇಸಾತಿ ಸುರುವಾಯಿತೆಂದು ತಿಳಿದು ಎಚ್ಚರದಿಂದ ಇರ್ರಿ; ಈಶನಿಯಿಂದ ಲಾಭ ಒಂದು ಪಟ್ಟು ಆದರೆ ವೆಚ್ಚ ಹತ್ತು ಪಟ್ಟು. ರಾಜಕೀಯ ಸಂಕಟಗಳು ಮತ್ತು ಅದರಿಂದ ಹೊಡೆತ, ಕೈದು, ದಂಡ ಮೊದಲಾದ ದುರ್ಧರ ಪ್ರಸಂಗ; ಬರುವದಕ್ಕೆಲ್ಲ ಕರ್ತರಿ; ಆದರೆ ಕೊಡುವದು ಮಾತ್ರ ತಪ್ಪದಲ್ಲ. ಮಕ್ಕಳಿಗೆ ಕ್ಲೇಶ; ಜೀವಿತಕ್ಕೆ ಓಕರಿಕೆ. ವರ್ಚಸ್ಸು ಇಲ್ಲವೆ ಅಧಿಕಾರ ಭ್ರಷ್ಟರಾಗುವ ಸರತಿ ಮೊದಲಾದ ಫಲಗಳುಂಟಾಗುವವು.

ತುಲಾ

ನಿಮ್ಮ ಪ್ರಕೃತಿ ಅನುಕೂಲ; ಆದರೆ ಹೆಂಡತಿಯದು ಬಹಳ ಕೆಡುವದು. ಪ್ರಾಪಂಚಿಕ ಸುಖ ಸಾಮಾನ್ಯವಾಗಿ ಅನುಕೂಲ. ಉದ್ಯೋಗದಲ್ಲಿ ಉತ್ತಮ ಪ್ರಗತಿ, ವಿಶೇಷ ಪ್ರತಿಷ್ಠೆ ಮತ್ತು ಲಾಭ ಒಟ್ಟಿಗೆ ಅನುಕೂಲ. ವರಿಷ್ಠರು ಇಲ್ಲವೆ ಆಶ್ರಯದಾತರೊಡನೆ ಅಲ್ಪಸ್ವಲ್ಪ ಕಲಹ. ವಾದದಲ್ಲಿಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಶತ್ರುಗಳು ಬಹಳ ಫಿತೂರಿಯಿಂದ ನಿಮ್ಮ ಪಕ್ಷದಲ್ಲಿ ಒಡಕು ಹುಟ್ಟಿಸುವ ಪ್ರಯತ್ನ ಮಾಡುವರು. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಚಿತ್ರಾದ ೪ ನೆ ಮತ್ತು ಸ್ವಾತಿಯ ಮೊದಲನೆ ೩ ಚರಣಗಳಿಗೆ ಹೆಚ್ಚು ತೊಂದರೆ. ತಾ. ೧೯, ೨೦, ೨೩, ೨೪, ಅನುಕೂಲ.

ಬರುವ ೧೧ ನೇ ಶನಿ ಮಿತ್ರರಿಗೆ ಕ್ಲೇಶ; ಆದರೆ ಧಂದೆ ಕೂಲಿ ಮಾಡುವವರಿಗೆ ದುರ್ಘಟ ಕೆಲಸಗಳು ಸಾಧ್ಯವಾಗುವದಕ್ಕೆ ಮತ್ತು ಆರೋಗ್ಯಕ್ಕೆ ದ್ರವ್ಯಲಾಭಕ್ಕೆ ಉತ್ತಮನಿರುವನು.

ವೃಶ್ಚಿಕ

ಹೆಂಡತಿಗಿಂತ ನಿಮ್ಮ ಮತ್ತು ಮಕ್ಕಳ ಪ್ರಕೃತಿ ಹೆಚ್ಚು ಅನುಕೂಲ. ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಸಾಮಾನ್ಯ; ಆದರೆ ಲಾಭ ತುಂಬ. ಮಿತ್ರಸುಖ ಅನುಕೂಲ. ಕೀರ್ತಿಕಾ[illegible]ಗಳನ್ನು ಮಾಡುವದಲ್ಲಿ ಬಹಳ ಲಕ್ಷ. [illegible] ಮತ್ತು ಸ್ಪರ್ಧೆಯಲ್ಲಿಒಳ್ಳೆಯಶಸ್ಸು. [illegible] ಪ್ರವಾಸ ಮತ್ತು [illegible] ಅನುರಾಧಾದ [illegible] ನೇ ಮತ್ತು ಜ್ಯೇಷ್ಠಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೯, ೨೦, ೨೧ ೨೨ ಅನುಕೂಲ.

ಬರುವ ೧೦ ನೇ ಶನಿ ತಂದೆಗೆ ಮತ್ತು ನಿಮ್ಮ ಸಹಾಯಕರಿಗೆ ಅನಿಷ್ಟ. ಆದರೆ ಸ್ಥಾವರ ಜಂಗಮ ಆಸ್ತಿಯಲ್ಲಿ ಹೆಚ್ಚಳ. ಶತ್ರುಗಳಿಗೆ ವಿಜಯ. ಮಾನಕ್ಕಿಂತ ವರ್ಚಸ್ಸು ಹೆಚ್ಚು. ಲೌಕಿಕದಲ್ಲಿ ಹೆಚ್ಚಳ ಮೊದಲಾದ ಫಲಗಳನ್ನು ಕೊಡುವನು.

ಧನು

ಪ್ರಕೃತಿ ಸಾಧಾರಣವೆ. ಮಕ್ಕಳಿಂದ ಬಹಳ ತೊಂದರೆ; ಆದರೆ ಸ್ತ್ರೀ ಸುಖ ಉತ್ತಮ. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸಮಾಧಾನ ಕಡಮೆಯೇ. ಉದ್ಯೋಗದಲ್ಲಿ ಪ್ರಗತಿ ಕಡಮೆ; ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಜಗನ್ಮಾನ್ಯ ಜನರ ಭೆಟ್ಟಿ ಸಹವಾಸದ ಯೋಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸ ತೊಂದರೆಯದು; ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಉತ್ತಮ. ಮೂಲಾದ ೪ ನೇ ಮತ್ತು ಪೂರ್ವಾಷಾಢದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು ತಾ. ೧೯, ೨೦, ೨೧, ೨೨ ಅನುಕೂಲ.

ಕಳೆದ ಎರಡೂವರೆವರ್ಷ ಇದ್ದ ಸಾಡೆಸಾತಿಯನ್ನು ಪ್ರತ್ಯಕ್ಷ ನಿವರ್ತನಕ್ಕೆ ತಂದು ಕೊಡುತ್ತಿಪ್ಪ ೯ ನೇ ಶನಿ ೨೫ಕ್ಕೆ ೯ ನೆಯುವನಾಗುವನು. ಧಾರ್ಮಿಕ ಭಾವನೆಗಳಲ್ಲಿ ಹೆಚ್ಚಳ, ತೀರ್ಥಯಾತ್ರೆ, ಸಾಧುಸಂತರ ಸಮಾಗಮ ಮತ್ತು ಅನುಗ್ರಹ, ಮಹತ್ವಾಕಾಂಕ್ಷೆಯುಳ್ಳ ಬಹಳ ಕೆಲಸಗಳಲ್ಲಿ ಯಶಸ್ಸು, [illegible] ಬಹಳ ಹೆಚ್ಚಳ; ಆದರೂ ಅದರಲ್ಲಿ [illegible]ತ್ರಿಯ ಕಿಂಚಿತ್ ಕಲಂಕ ಹತ್ತುವ ಸಂಭವ ಬಂಧುವರ್ಗದವರಲ್ಲಿ ಕ್ಲೇಶ. [illegible] ಇಲ್ಲವೆ ಸಹಕಾರ್ಯಕರ್ತರೊಡನೆ ಕ್ಲೇಶ ಮೊದಲಾದ ಕಲಹಗಳು ನಡೆಯುವವು.

ಮಕರ

ಪ್ರಕೃತಿ ನಿಮ್ಮದು ಮತ್ತು ಹೆಂಡತಿಯದು ಸ್ವಲ್ಪ ಕೆಟ್ಟರೆ ಮಕ್ಕಳ ಪ್ರಕೃತಿ ಬಹಳ ಕೆಡುವ ಸಂಭವ; ಅಲ್ಲದೆ ನಿಮ್ಮ ನಿಮ್ಮಲ್ಲಿ ತೀವ್ರ ಮತಭೇದ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮಧ್ಯಮ; ಆದರೆ ಲಾಭ ಉತ್ತಮ. ಮಿತ್ರರಿಂದ ಉತ್ತಮ ಸುಖ ಮತ್ತು ಅಪೇಕ್ಷಿತ ಸಂಗತಿಗಳಲ್ಲಿ ಬಹಳ ಸಹಾಯ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಹಿಮ್ಮೆಟ್ಟುವದು. ಪರಸ್ತ್ರೀ ಬಗ್ಗೆ ಪಾಪಬುದ್ಧಿ; ಪ್ರವಾಸಾದಿ ಕೆಲಸ ಅತಿ ತೊಂದರೆಯಿಂದಲೂ ಮಧ್ಯಮವೇ. ಉತ್ತರಾಷಾಢದ ೪ ನೇ ಮತ್ತು ಶ್ರವಣದ ಮೊದಲನೆ ೩ ಚರಣಗಳಿಗೆ ಹೆಚ್ಚು ತೊಂದರೆ ತಾ. ೨೧, ೨೨, ೨೩, ೨೪ ಅನುಕೂಲ.

ಸಾಡೇಸಾತಿಯಂತೆಯೇ ಎನಿಸುವ ೮ ನೇ ಶನಿ ಪ್ರಕೃತಿಗೆ ಕ್ಲೇಶ, ಹೆಂಡತಿಯೊಡನೆ ವಿರೋಧ, ಯಾವದೊಂದು ಕೆಲಸದಲ್ಲಿ ಜೀವದ ಮೇಲೆ ಬರುವಷ್ಟು ಕ್ಲೇಶ ಮತ್ತು ನೆಚ್ಚವಾಗಿಯೂ ಯಶಸ್ಸು ಅಲ್ಪ, ದ್ರವ್ಯಲಾಭ ಅನುಕೂಲ ಆದರೆ ನಿರರ್ಥಕ ವೆಚ್ಚವೂ ಬಹಳ. ಮಾನಸಿಕ ತೊಂದರೆ ವಿಪರೀತ ಮೊದಲಾದ ಫಲಗಳನ್ನು ಕೊಡುವನು.

ಕುಂಭ

ಸ್ವತಃಕ್ಕೆ ಮತ್ತು ಹೆಂಡತಿಗೆ ಕಿರುಕುಳ ಕಾಹಿಲೆ. ಆದರೆ ಪ್ರಾಪಂಚಿಕ ಸುಖ ಬಹಳ ಉತ್ತಮ. ಮಕ್ಕಳಲ್ಲಿ ಒಬ್ಬಿಬ್ಬರ ಉನ್ನತಿ ಬಹಳ. ಉದ್ಯೋಗದಲ್ಲಿ ಪ್ರಗತಿ ಕಡಮೆ. ಆದರೆ ಪ್ರಗತಿ ಮತ್ತು ಲಾಭ ಉತ್ತಮ. ಅವಚಿತ ಲಾಭದ್ದೂ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಿಗೂ ಬಹಳ ಹಾನಿಯಾಗುವಂತೆ ಕೆಲ ಘಟನೆಗಳು. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಉತ್ತಮ. ಧನಿಷ್ಠಾದ ೪ ನೆ ಮತ್ತು ಶತತಾರಿಕೆಯ ಮೊದಲನೆ ೩ ಚರಣಗಳಿಗೆ ತೊಂದರೆ ಯಿಂದಲೆ ಯಶಸ್ಸು. ತಾ. ೧೯, ೨೦, ೨೪, ೨೫ ಅನುಕೂಲ.

ಬರುವ ೭ ನೇ ಶನಿ ಸ್ವತಃಕ್ಕೆ ಆರೋಗ್ಯ; ಆದರೆ ಹೆಂಡತಿಗೆ ಕಾಹಿಲೆ, ಮೊದಲೆ ಕೆಟ್ಟ ಯೋಗವಿದ್ದರೆ ಕ್ವಚಿತ್ ಅವಳ ವಿಯೋಗದ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಸ್ಥಾವರದಲ್ಲಿ ಹೆಚ್ಚಳ. ಭಾಗ್ಯವೃದ್ಧಿ. ಆದರೆ ಲೋಕನಿಂದ ಕಲುಷಿತ ಮೊದಲಾದ ಫಲಗಳನ್ನು ಕೊಡುವನು.

ಮೀನ

ಪ್ರಕೃತಿಮತ್ತು ಪ್ರಾಪಂಚಿಕ ಸುಖ ಉತ್ತಮ; ಆದರೆ ಪತಿ ಪತ್ನಿಯರಲ್ಲಿ ನಿರರ್ಥಕ ತಿಕ್ಕಾಟದ ಪ್ರಸಂಗ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತ ಲಾಭ ತುಂಬ; ಆದರೆ ವೆಚ್ಚವೂ ಬಹಳ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು ಪ್ರವಾಸಾದಿ ಕೆಲಸ ಹಿತದ್ದು. ಉತ್ತರಾಭಾದ್ರಪದದ ೪ ನೇ ಮತ್ತು ರೇವತಿಯ ಮೊದಲನೇ ೩ ಚರಣಗಳಿಗೆ ಹೆಚ್ಚು ಅನುಕೂಲ. ತಾ. ೧೯, ೨೦, ೨೧, ೨೨, ಅನುಕೂಲ.

ಬರುವ ೬ ನೇ ಶನಿ ಆರೋಗ್ಯ, ಶತ್ರುನಾಶ, ಸಂಕಟಗಳು ಅಲ್ಪಾಯಾಸದಿಂದ ಉಪಶಮನ ಹೊಂದುವವು. ಧಂದೆ ನವಕರಿಗೆ ಮತ್ತು ಕೂಲಿ ಕಾರರಿಗೆ ತುಂಬ ಲಾಭ ಮತ್ತು ಉತ್ಸಾಹವರ್ಧಕ ಸ್ಥಿತಿ, ಆದರೆ ವಿಷಬಾಧೆ. ಜನರಲ್ಲಿ ಅನಾದರಮತ್ತು ವೈಮನಸ್ಸು; ಮಿತ್ರ ವಿರೋಧ ಇಲ್ಲವೆ ವಿಯೋಗ; ವೆಚ್ಚ ವಿಪರೀತ ಮೊದಲಾದ ಸಮ್ಮಿಶ್ರ ಫಲಗಳನ್ನು ಕೊಡುವನು.

ಬ್ರಿ. ಉಸ್ಮಾನರ ಕೊನೆಯ ನುಡಿ

ನಮ್ಮ ಪ್ರದೇಶ ವೈರಿವಶವಾಗದಿರಲಿ

ಸೈನಿಕರನ್ನು ಹುರಿದುಂಬಿಸಿ ಕಾಶ್ಮೀರ ಯುದ್ಧರಂಗದ ಅತ್ಯಗ್ರಭಾಗದ ಠಾಣ್ಯದಿಂದ ಹಿಂತಿರುಗಿ ಬರುವಾಗ ಸಿಡಿಮದ್ದು ತಾಕಿ ಪ್ರಾಣಾಂತಿಕ ಗಾಯಗಳಾದಾಗಲೂ ಮರಣ ವೇದನೆಯನ್ನು ನುಂಗಿ ಬ್ರಿ. ಉಸ್ಮಾನರು ಕೊನೆಯ ಉದ್ಗಾರಗಳನ್ನು ಹೀಗೆ ತೆಗೆದರು. “ನಾನು ಹೋಗುತ್ತಿದ್ದೇನೆ. ನಾವು ಹೋರಾಡುತ್ತಿದ್ದ ಪ್ರದೇಶವು ಮಾತ್ರ ವೈರಿವಶವಾಗದಿರಲಿ.”

ಕ ರ್ನಾ ಟ ಕ

ಧಾರವಾಡ

ಹುಬ್ಬಳ್ಳಿಯಲ್ಲಿ ಶ್ರೀ ಗುರುದೇವ ಸಾಹಿತ್ಯ ಸಮಿತಿಯ ಪರವಾಗಿ ಶ್ರೀ ಕಂಬಳಿ ಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮೈಸೂರು ಘಟನಾ ಸಮಿತಿಯ ಉಪಾಧ್ಯಕ್ಷ ಶ್ರೀ ಗಾಂಜೀ ವೀರಪ್ಪನವರಿಗೂ ಶ್ರೀ ಮುನವಳ್ಳಿಯವರಿಗೂ ಸತ್ಕಾರ ಮಾಡಲಾಯಿತು. ಆಗ ಶ್ರೀ ವೀರಪ್ಪನವರು ಮೈಸೂರು ಸಹಿತ ಕರ್ನಾಟಕವು ಒಂದು ಪ್ರಾಂತವಾಗುವದು ಅಗತ್ಯವೆಂದೂ ಇದಕ್ಕೆ ಮೈಸೂರು ಜನತೆಯ ಸಂಪೂರ್ಣ ಬೆಂಬಲವಿದೆಯೆಂದೂ ಹೇಳಿದರು.

ಧಾರವಾಡದಲ್ಲಿಯ ಕರ್ನಾಟಕ ಗ್ರಂಥಾಲಯಕ್ಕೆ ಕುಮಾರಿ ಎಸ್ ಡಿ ಪತ್ರಾವಳಿ ಇವರು ಪುಸ್ತಕಭಂಡಾರಿಯಾಗಿ ನೇಮಿಸಲ್ಪಟ್ಟಿರುವರು.

ಗದಗ-ಬೆಟಗೇರಿ ಮುನಸಿಪಲ್ ಹದ್ದಿನಲ್ಲಿ ಆಹಾರದ ಯಾವತ್ತೂ ಪದಾರ್ಥಗಳ ಸಂಬಂಧದಲ್ಲಿ ಮಿಶ್ರಣ ಪ್ರತಿಬಂಧಕ ಕಾಯಿದೆಯು ಸಪ್ಟಂಬರ ೧ ರಿಂದ ಜಾರಿಯಲ್ಲಿ ಬರುವದು.

ಧಾರವಾಡ ಕೆ ಈ ಬೋರ್ಡ ಕಾಲೇಜಿನಲ್ಲಿ ಡಾ. ವಿ. ಕೆ. ಆರ್. ವಿ ರಾವ ಇವರು ೧೩ ನೇ ತಾರೀಕು ಭಾಷಣ ಮಾಡುತ್ತ 'ನಮ್ಮ ದೇಶದ ಸರ್ವಾಂಗೀಣ ಸಂಪತ್ತನ್ನು ಅರಿತು ಅದನ್ನು ಪ್ರೀತಿಸುವದೇ ಸ್ವತಂತ್ರ ಭಾರತದಲ್ಲಿಯ ವಿದ್ಯಾರ್ಥಿಗಳ ಆದ್ಯಕರ್ತವ್ಯ' ಎಂಬುದಾಗಿ ಉಪದೇಶಿಸಿದರು. ಪ್ರಿನ್ಸಿಪಾಲ ಜಠಾರರು ಅಧ್ಯಕ್ಷತೆ ವಹಿಸಿದ್ದರು. ಸಮಾನತೆಯ ಭದ್ರ ತಳಹದಿಯ ಮೇಲೆ ಕಟ್ಟಿದ ಸಮಾಜ ಮತ್ತು ರಾಷ್ಟ್ರ ಎಂಥ ವಿಪತ್ತನ್ನೂ ಎದುರಿಸಬಲ್ಲವೆಂದು ಅವರು ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘದ ೫೪ನೆಯ ಸಂಸ್ಥಾಪನಾದಿನೋತ್ಸವ ಬರುವ ೩೦ ನೇ ತಾ. ದಿನ ಸಾಯಂಕಾಲ ೬ ಗಂಟೆಗೆ ಸಂಘದಲ್ಲಿ ನಡೆಯುವದು. ಶ್ರೀ ನರಸಿಂಗರಾವ ಕಲ್ಲಾಪುರ ಎಂ. ಎಲ್. ಸಿ. ಇವರು ಅಧ್ಯಕ್ಷರಾಗಲು ಒಪ್ಪಿದ್ದಾರೆ.

ಮುಂಡರಗಿ ಗ್ರಾಮ ಪಂಚಾಯಿತಿಯ ಸಭೆ ಸೇರಿ ಸೋಶಲ್ ಕ್ಲಬ್ಬು ಸ್ಥಾಪಿಸಲ್ಪಟ್ಟಿತು. ಶ್ರೀ ವಿ. ದಾದಾಮಿಯ ಸಾಹೇಬರು ಅಧ್ಯಕ್ಷರಾಗಿಯೂ ಶಿರಸ್ತೇದಾರ ಶ್ರೀ ಬಿ ಎ ಹೊಸಕೇರಿ ಮತ್ತು ಎನ್. ಆರ್. ಕುಲಕರ್ಣಿಯವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ಕರ್ನಾಟಕ ಹಾಯಸ್ಕೂಲು ಹೆಡ್ ಮಾಸ್ತರ ಮತದಾರ ಸಂಘದಿಂದ ಧಾರವಾಡ ಕರ್ನಾಟಕ ಹಾಯಸ್ಕೂಲ ಹೆಡ್ ಮಾಸ್ತರ ಶ್ರೀ ಎಸ್. ಜಿ. ಶಿನೋಳೀಕರಇವರು ೪೧ ಮತಗಳನ್ನು ಪಡೆದು ಮುಂಬಯಿ ಸಿನೇಟಿನ ಸದಸ್ಯರಾಗಿ ಆರಿಸಿ ಬಂದರು. ಪ್ರತಿಸ್ಪರ್ಧಿಗಳಾದ ಶ್ರೀ ವರ್ಟಿ ಇವರಿಗೆ ೨೮ ಮತ್ತು ಜಂಬಗಿ ಇವರಿಗೆ ೫ ಮತಗಳು ಮಾತ್ರ ಬಿದ್ದವು.

ಬೆಳಗಾವಿ

ಲೀನವಾದ ದಕ್ಷಿಣ ಸಂಸ್ಥಾನಗಳ ನೋಕರರಿಗೆ ಮುಂಬಯಿ ಪ್ರಾಂತದ ತುಟ್ಟೀ ಭತ್ತೆಯ ಪ್ರಮಾಣಗಳನ್ನು ಅನ್ವಯಿಸಬೇಕೆಂಬ ಸಾಂಗಲಿ ವಿಭಾಗದ ಆಡಳಿತಾಧಿಕಾರಿಗಳ ಯೋಜನೆಗೆ ಮುಂಬಯಿ ಸರಕಾರದವರು ಒಪ್ಪಿಗೆಯಿತ್ತಿದ್ದಾರೆ.

ಎಂ. ಆರ್. ಪಾಟೀಲರು ಮೂರು ವರ್ಷಗಳ ವರೆಗೆ ಬೆಳಗಾವಿಯ ಎರಡನೇ ಆಸಿಸ್ಟಂಟ ಪಬ್ಲಿಕ್ ಪ್ರಾಸಿಕ್ಯೂಟರರಾಗಿ ನೇಮಿಸಲ್ಪಟ್ಟಿದ್ದಾರೆ.

ಬೆಂಗಳೂರು--ಮೈಸೂರು

ಹೈದರಾಬಾದ ಪರಿಸ್ಥಿತಿಯನ್ನು ವಿಚಾರಿಸುವದಕ್ಕಾಗಿ ಇದೇ ೧೮ ನೇ ತಾರೀಕಿಗೆ ಬೆಂಗಳೂರಿನಲ್ಲಿ ಕರ್ನಾಟಕ, ಮಹಾರಾಷ್ಟ್ರ, ಆಂಧ್ರ, ತಮಿಳನಾಡು ಹಾಗು ಕೇರಳ ಪ್ರಾಂತೀಯ ಕಾಂಗ್ರೆಸ ಅಧ್ಯಕ್ಷ ಮತ್ತು ಕಾರ್ಯಕಾರಿ ಮಂಡಳದ ಪರಿಷತ್ತು ಸೇರಲಿದೆ.

ರಾಮೇಶ್ವರಕ್ಕೆ ಹೊರಟಿರುವ ಶ್ರೀಮತಿ ಗಯಾಬಾಯಿ ಮನಮಾಡಕರ ಇವರಿಗೆ ೧೦ ನೇ ತಾರೀಕು ಮೈಸೂರು ಅರಮನೆಯಲ್ಲಿ ಔತಣವಿದ್ದಿತು. ಅವರು ತಮ್ಮ ಪರಿವಾರದೊಂದಿಗೆ ರಾಜಕುಟುಂಬದವರ ಸಮ್ಮುಖದಲ್ಲಿ ಅಂದು ಪೂಜೆ ಭಜನೆಗಳನ್ನು ಮಾಡಿದರು.

ವಿಜಾಪುರ

ವಿಜಾಪುರ ಜಿಲ್ಲಾ ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕಿನ ರಜತ ಮಹೋತ್ಸವ ೧೧ ನೇ ತಾರೀಕು ಡಾ. ವಿಜಯೀಂದ್ರರಾಯರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು.

ಹೊಸ ಹಿಂದುಸ್ತಾನದಲ್ಲಿ ಆದರಂತೆ ಹೊಸ ಕರ್ನಾಟಕದಲ್ಲಿ ಸಮಾಜವು ನ್ಯಾಯದ ತಳಹದಿಯದಿರಬೇಕು. ಜನರ ಆರ್ಥಿಕ ಶಕ್ತಿ ಮತ್ತು ಆದಾಯದಲ್ಲಿ ವಿಪರೀತ ವೈಷಮ್ಯಕ್ಕೆ ಆಸ್ಪದ ಸಿಕ್ಕಿರಬಾರದು ಎಂದು ಆ ಕಾಲಕ್ಕೆ ಅವರು ಭಾಷಣ ಮಾಡುತ್ತ ಅಭಿಪ್ರಾಯಪಟ್ಟರು. ಚೇರಮನ್ ಶ್ರೀ ನಾಡಗೌಡರು ಎಲ್ಲರನ್ನೂ ಸ್ವಾಗತಿಸಿ ಬ್ಯಾಂಕಿನ ಪ್ರಗತಿಯನ್ನು ವಿವರಿಸಿದರು.

ಬಾಗಲಕೋಟೆ ಮುನಿಸಿಪಾಲಿಟಿಯ ಹಿಂದಿನ ಅಧ್ಯಕ್ಷ ಶ್ರೀ ಕಿರಸೂರ ಸ್ವಾಮಿರಾಯಾಚಾರ್ಯರ ಭಾವಚಿತ್ರದ ಅನಾವರಣ ಸಮಾರಂಭವು ಶ್ರೀ ದಿವಾಕರ ರಂಗರಾಯರ ಹಸ್ತದಿಂದ ಕಳೆದ ೧೦ ನೇ ತಾರೀಕಿನ ದಿನ ಜರುಗಿತು. ಆಗ ಶ್ರೀ ದಿವಾಕರರು ದಿವಂಗತ ಕಿರಸೂರರ ಅಲೌಕಿಕ ಗುಣಗಳಲ್ಲಿ ಒಂದಾದ ಎಲ್ಲರೊಡನೆ ಕೂಡಿಕೊಂಡು ಹೋಗುವ ಗುಣವನ್ನು ವಿವರಿಸಿ ಎಲ್ಲರೂ ಆ ಗುಣವನ್ನು ತಮ್ಮಲ್ಲಿ ಅಳವಡಿಸಿಕೊಳ್ಳಬೇಕೆಂದು ಕೇಳಿಕೊಂಡರು. ಪ್ರಾರಂಭದಲ್ಲಿ ಶ್ರೀ ಧಾರವಾಡ ಯಲಗುರ್ದರಾಯರು ದಿವಂಗತ ಕಿರಸೂರರ ಜೀವನದ ಬಗ್ಗೆ ನಾಲ್ಕು ಮಾತು ಹೇಳಿದರು.

ಶ್ರೀ ರಂಗರಾವ ದಿವಾಕರ ಇವರು ೧೦ ನೇ ತಾರೀಕು ಬಾಗಲಕೋಟೆಯಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತ ರಾಷ್ಟ್ರದ ಶಕ್ತಿಯು ಅದರ ಶೀಲವನ್ನೇ ಅವಲಂಬಿಸುತಿದೆಯಾದ್ದರಿಂದ ಆ ಶೀಲವನ್ನು ಅಭಿವೃದ್ಧಿಪಡಿಸಿಕೊಳ್ಳುವತ್ತ ಭಾರತೀಯರೆಲ್ಲ ಗಮನಿಸಬೇಕೆಂಬುದಾಗಿ ಬಿನ್ನವಿಸಿಕೊಂಡರು.

ಬಾಗಲಕೋಟ ನಗರ ಸಭೆಯ ಸಧ್ಯದ ಸದಸ್ಯರ ಅವಧಿಯನ್ನು ಮತದಾರರ ಯಾದಿ ಇನ್ನೂ ತಯಾರಾಗದ್ದಕ್ಕಾಗಿ ಜಾನೇವರಿ ವರೆಗೆ ಬೆಳೆಸಲು ಸರಕಾರವು ಯೋಚಿಸಿದೆ.

ಕನ್ನಡ ಸಂಸ್ಥಾನ

ಸಾರ್ವಜನಿಕ ಭದ್ರತಾ ಕಾನೂನಿನನ್ವಯ ಬಂಧಿಸಲ್ಪಟ್ಟ ಸೆರೆಮನೆಯಲ್ಲಿದ್ದ ಕೊಲ್ಹಾಪುರ ಪ್ರಜಾಪರಿಷತ್ತಿನ ಅಧ್ಯಕ್ಷ ಶ್ರೀ ಮಾಧವರಾವ ಬಾಗಲ ಇವರನ್ನು ಬಂಧಮುಕ್ತಮಾಡಲಾಗಿದೆ. ಇದಕ್ಕೂ ಮೊದಲು ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ ಸಮಿತಿಯ ಅಧ್ಯಕ್ಷ ಶ್ರೀ ಹಿರೆಯವರು ಮಾಧವರಾಯರೊಡನೆ ಚರ್ಚೆ ಮಾಡಿದರು.

ಮೈಸೂರು ಸಂಸ್ಥಾನದ ಹಲವು ಭಾಗಗಳಲ್ಲಿ ಪಾನನಿರೋಧವು ಇತ್ತೀಚೆ ಜಾರಿಯಲ್ಲಿ ಬಂದುದರಿಂದ ಕಳ್ಳತನದಿಂದ ಭಟ್ಟಿ ಶರೆ ಮಾಡುವದು ಹೆಚ್ಚಾಗಿದೆ. ದಾವಣಗೆರೆ ತಾಲೂಕ ಕಲಪನಹಳ್ಳಿಯಗೊಲ್ಲರಹಟ್ಟಿ ಹಾಗು ಕೊಗ್ಗನೂರ ಲಮಾಣಿ ತಾಂಡಗಳಿಗೆ ಮುತ್ತಿಗೆ ಹಾಕಿ ೭ ಪ್ರಕರಣಗಳನ್ನು ಪತ್ತೆ ಹಿಡಿದು ಸಂಬಂಧಿಸಿದವರನ್ನು ಸೆರೆ ಹಿಡಿಯಲಾಗಿದೆ.

ಬೇಲೂರಲ್ಲಿ ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿ ಸಮಿತಿಯ ಸಭೆ ಶ್ರೀ ಬಿ. ಎಸ್. ಬೋರಣ್ಣಗೌಡರ ಅಧ್ಯಕ್ಷತೆಯಲ್ಲಿ ಸ್ಥಾಪಿತವಾಯಿತು ಲಕ್ಷ್ಮೀಸಾ ಮಿಲ್ಲಿನ ಒಡೆಯರಾದ ಶ್ರೀ ಎಂ ಡಿ ಚಾವುಡರವರು ೧೦೦೧ ರೂ. ವಾಗ್ದಾನ ಮಾಡಿದರು.

ಹಾಸನದಲ್ಲಿ ಶ್ರೀ ಗೋರೂರು ರಾಮಸ್ವಾಮಿ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಗಾಂಧೀ ರಾಷ್ಟ್ರೀಯ ಸ್ಮಾರಕ ಸಮಿತಿ ಸ್ಥಾಪಿತವಾಯಿತು.

ಮೈಸೂರು ಶಿಕ್ಷಣಶಾಖೆಯ ಡೈರೆಕ್ಟರ ಶ್ರೀ ಕಸ್ತೂರಿ ರಾಜ ಚೆಟ್ಟಿಯವರು ಹಾಸನ ತಾಲೂಕಿನಲ್ಲಿಯ ಗೋರೂರಲ್ಲಿ ಮಹಾತ್ಮಾ ಗಾಂಧಿ ಹಾಯಸ್ಕೂಲಿನ ಉದ್ಘಾಟನ ಸಮಾರಂಭವನ್ನು ನೆರವೇರಿಸಿದರು. ಜಿಲ್ಲಾ ಬೋರ್ಡಿನ ಕಾಯಿದೆಯಲ್ಲಿ ಸುಧಾರಣೆಯಾಗಿ ಶಿಕ್ಷಣಕ್ಕೆ ಹೆಚ್ಚು ವೆಚ್ಚ ಮಾಡುವ ಅಧಿಕಾರ ದೊರೆತಂದಿನಿಂದ ಹಳ್ಳಿಗಳಲ್ಲಿ ಸ್ಥಾಪಿತವಾದ ಹಾಯಸ್ಕೂಲು ಇದೇ ಮೊದಲನೆಯದು.

ಉತ್ತರ ಕನ್ನಡ

ಅಂಕೋಲೆ ತಾಲೂಕ ಅವರ್ಸಾದಲ್ಲಿ ಬೆಳ್ಳಿ ಬಂಗಾರ ಮೊದಲಾದ ಧಾತುಗಳಲ್ಲಿ ಕೆಲಸ ಮಾಡುವ ಕಾಮಗಾರ ಜನರು ಸಭೆ ಸೇರಿ ಸರಾಫರು ಕೂಲಿ ದರವನ್ನು ಇಳಿಸುತ್ತ ಬಂದದ್ದರಿಂದ ತಮಗೆ ಬಹಳ ತೊಂದರೆಯಾಗಹತ್ತಿರುವದೆಂದೂ ಆದುದರಿಂದ ಸರಕಾರದವರು ಕಾಯಿದೆಮಾಡಿ ಕೂಲೀ ದರ ನಿರ್ದಿಷ್ಟ ಪಡಿಸಬೇಕೆಂದೂ ಬಿನ್ನವಿಸಿಕೊಂಡರು. ಈ ಸಂಬಂಧದಲ್ಲಿ ಸರಕಾರಕ್ಕೆ ಅವರು ತಮ್ಮ ಠರಾವನ್ನು ಕಳಿಸಿಕೊಟ್ಟಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಈಗಲೆ ೨೦೪ ಯೋಗ್ಯದರದ ಅಂಗಡಿಗಳನ್ನು ತೆರೆದಿದ್ದು ಬೇಡಿಕೆ ಹೆಚ್ಚಾದಲ್ಲಿ ಹೆಚ್ಚು ಅಂಗಡಿಗಳನ್ನು ತೆರೆಯಲಾಗುವದೆಂದೂ ಈಗ ಸರಕಾರದ ಹತ್ತರ ಜಿಲ್ಲೆಯಲ್ಲಿ ೩೦೦೦ ಟನ್ ಅಕ್ಕಿ ೩೦೦ ಟನ್ ಗೋದಿ ಮತ್ತು ೧೮೦೦ ಟನ್ ಇತರ ಆಹಾರ ಧಾನ್ಯಗಳು ಇರುವವೆಂದು ಕಲೆಕ್ಟರರು ಪತ್ರಿಕಾ ಪರಿಷತ್ತಿನಲ್ಲಿ ಹೇಳಿದರು.

ಅಘನಾಶನಿಯಲ್ಲಿ ಇದೇ ೬ ನೇ ತಾರೀಕು ಶಾಲೆಯಲ್ಲಿ ಶ್ರೀ ವಿದ್ಯಾರಣ್ಯರ ಪುಣ್ಯತಿಥಿಯು ವಿಜೃಂಭಣೆಯಿಂದ ಸಾಂಗವಾಯಿತು. ಮುಂಜಾನೆ ಪ್ರಾರ್ಥನೆ ನಗರಸಂಕೀರ್ತನ ಧ್ವಜವಂದನಗಳಾಗಿ ಸಾಯಂಕಾಲ ಶ್ರೀ ಗಣಪತಿ ವಿಷ್ಣು ಸಭಾಹಿತ ಇವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಶ್ರೀಗಳ ಜೀವನ ಚರಿತ್ರೆಯ ಬಗ್ಗೆ ಭಾಷಣಗಳಾದವು. ವಿಶೇಷ ಆಮಂತ್ರಣದ ಮೇರೆಗೆ ಜ್ಯೋತಿರ್ವಿದಾನ್ ಹೊಲಗದ್ದೆ ಶ್ರೀ ಶಂಕರ ಶರ್ಮಾರವರೂ ಬಂದಿದ್ದರು.

ದಕ್ಷಿಣ ಕನ್ನಡ

ಮಂಗಳೂರು ಪೌರಸಭೆಯ ಸಭೆ ಅಧ್ಯಕ್ಷ ಶ್ರೀ ಎಚ್ ಸಿ ಪಾಯಸರ ಅಧ್ಯಕ್ಷತೆಯಲ್ಲಿ ಸೇರಿದಾಗ ಕಮ್ಯುನಿಸ್ಟ ಸದಸ್ಯ ಶ್ರೀ ಬಿ. ಕೊರಗಪ್ಪನವರು ಕಳೆದ ಫೆಬ್ರುಅರಿಯಿಂದ ಸಭೆಗಳಿಗೆ ಬಾರದ್ದರಿಂದ ಸದಸ್ಯತ್ವವನ್ನು ಕಳೆದುಕೊಂಡರು. ಆ ಸ್ಥಾನಕ್ಕೆ ಹೊಸ ಚುನಾವಣೆ ನಡೆಯಬೇಕೆಂದು ಗೊತ್ತಾಯಿತು. ನಗರ ಸಭಾಧ್ಯಕ್ಷರಿಗೆ ತಿಂಗಳಿಗೆ ೫೦ ರೂ. ಪ್ರಯಾಣ ಭತ್ತೆ ಕೊಡಬೇಕೆಂದು ಸರಕಾರವನ್ನು ಕೇಳಿಕೊಳ್ಳಲಾಯಿತು,

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ ಸಮಿತಿಯು ಕರ್ನಾಟಕ ಕಾಂಗ್ರೆಸ ಸಮಿತಿಯ ಕಾರ್ಯದರ್ಶಿ ಶ್ರೀ ಮಾಗಡಿಯವರ ಅಧ್ಯಕ್ಷತೆಯಲ್ಲಿ ಸೇರಿ ಶ್ರೀ ಪಿ. ಲಕ್ಷ್ಮೀನಾರಾಯಣ ನಾಯ್ಕ ಇವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಶ್ರೀದಾಮೋದರ ಬಾಳಿಗಾರು ಆರಿಸಿ ಬರಲಿಲ್ಲ. ಅಧ್ಯಕ್ಷರಿಗೆ ಕೊಟ್ಟ ಅಧಿಕಾರದನ್ವಯ ಅವರು ಕೆ ಈಶ್ವರ ಎಂ. ಎಲ್. ಎ. ಮತ್ತು ಡಾ. ಯು. ಪಿ. ಮಲ್ಯ ಎಂ. ಎಲ್. ಎ. ಇವರನ್ನು ಉಪಾಧ್ಯಕ್ಷರನ್ನಾಗಿ ಮತ್ತು ಕೆ. ಕೆ ಶೆಟ್ಟಿ (ಪ್ರಧಾನ) ಎನ್. ಉಪೇಂದ್ರನಾಯಕ ಇವರನ್ನು ಕಾರ್ಯದರ್ಶಿಗಳನ್ನಾಗಿ ಆರಿಸಿಕೊಂಡರು.

ಬಳ್ಳಾರಿ

ಅದವಾನಿಯಲ್ಲಿ ಯುದ್ಧ ಸಾಮುಗ್ರಿಯನ್ನು ಸಿದ್ಧಪಡಿಸುತಿದ್ದ ಕಾರಖಾನೆಯೊಂದನ್ನು ಪೋಲೀಸರು ಶೋಧಿಸಿದ್ದು ನಿಜಾಮರಿಗಾಗಿ ಸಿದ್ಧಪಡಿಸಲ್ಪಟ್ಟ ಮದ್ದು ಗುಂಡುಗಳು ಅವರಿಗೆ ದೊರೆತಿವೆ. ಎಂಟು ಸಾವಿರ ಸುತ್ತುಮದ್ದು ಹಾಗು ಎರಡು ಲಾರಿಗಳಷ್ಟು ಕಚ್ಚಾ ಸರಕನ್ನು ಪೋಲೀಸರು ವಶಪಡಿಸಿಕೊಂಡಿದ್ದಾರೆಂದು ತಿಳಿಯುತ್ತದೆ ಮತ್ತು ಮರ್ತುಜಾಸಾಹೇಬ, ಈಶ್ವರಮ್ಮ ಹಾಗು ಇನ್ನೊಬ್ಬನನ್ನು ಈ ಸಂಬಂಧದಲ್ಲಿ ಸೆರೆಹಿಡಿಯಲಾಗಿದೆ.

ಬೆಂಗಳೂರಲ್ಲಿ ಟೆಲಿಫೋನ ಕಾರಖಾನೆ

ಹಿಂದುಸ್ತಾನ ಸರಕಾರದ ನಿರ್ಧಾರ

ಹಿಂದುಸ್ತಾನ ಸರಕಾರದವರು ಇಂಡಿಯಾ ಟೆಲಿಫೋನ ಇಂಡಸ್ಟ್ರೀಜ ಎಂಬ ಸ್ವಯಂ ಪ್ರವರ್ತಕ ಟೆಲಿಫೋನುಗಳನ್ನು ತಯಾರಿಸುವ ಕಾರಖಾನೆಯನ್ನು ಸ್ಥಾಪಿಸಲು ಬೆಂಗಳೂರನ್ನು ಆಯ್ದುಕೊಂಡಿದ್ದಾರೆ. ಇದಕ್ಕೆ ೨॥ ಕೋಟಿ ರೂ. ಬಂಡವಲು ಹಾಕಲಾಗುವದು. ಇದರಿಂದ ೧೦ ಸಾವಿರ ಜನರಿಗೆ ಉದ್ಯೋಗ ದೊರೆಯುವದು. ಈ ಕಾರಖಾನೆಯ ಆಡಳಿತವನ್ನು ಹಿಂದುಸ್ತಾನ ಸರಕಾರದ ಸಂಪರ್ಕ ಖಾತೆಯೇ ವಹಿಸಿಕೊಳ್ಳುವದು. 'ಮುಂಬಯಿ ಟೆಲಿಫೋನ'ದ ಮ್ಯಾನೇಜರರಾಗಿದ್ದ ಶ್ರೀ. ಆರ್. ನಟರಾಜರನ್ನು ಈ ಕಾರಖಾನೆಯ ಜನರಲ ಮ್ಯಾನೇಜರರನ್ನಾಗಿ ನೇಮಿಸಲಾಗಿದೆ.

ಮಾನಸಶಾಸ್ತ್ರ ಮತ್ತು ಬಾಲಶಿಕ್ಷಣ

(೧೧ನೇ ಪುಟದಿಂದ)

ಹೋಗಬೇಕಾಗುತ್ತದೆ. ನಮ್ಮ ಪರಿಸ್ಥಿತಿಯಲ್ಲಿ ನಾವು ದಿನವೂ ನೋಡತಕ್ಕ ವಸ್ತುಗಳ, ವಿಷಯಗಳ ಮತ್ತು ಸಂಗತಿಗಳ ಆಧಾರದ ಮೇಲಿಂದ ಪಾಠಗಳನ್ನು ಹೇಳಿಕೊಟ್ಟರೆ ಅವು ಸುಲಭವಾಗಿ ಮನವರಿಕೆಯಾಗುವವು. ಮತ್ತು ಸ್ಮೃತಿಯಲ್ಲಿ ಶಾಶ್ವತವಾಗಿ ಉಳಿಯುತ್ತವೆ. ದೂರ ದೇಶಗಳಲ್ಲಿ ಇರತಕ್ಕ ವಸ್ತುಗಳ ಪಾಠಗಳನ್ನು ನಮ್ಮ ಬಾಲಕರಿಗೆ ಹೇಳಹೋದರೆ ಆ ವಿಷಯವು ಅವರ ಮನಸ್ಸಿನ ಮೇಲೆ ಮುದ್ರಿತವಾಗಲಾರದು ಎಂದೂ ಸಮುದ್ರವನ್ನು ನೋಡದ ಬಾಲಕರಿಗೆ ಹಡಗಿನ ವರ್ಣನೆಯನ್ನೂ ಜಲಪರ್ಯಟನವನ್ನೂ ಓದಹತ್ತಿದರೆ ಅವರಿಗೆ ಏನೂ ತಿಳಿಯದು. ಹೀಗೆ ಅನ್ಯದೇಶದ ವಿಷಯಗಳು ಭೌಗೋಲಿಕ ರೀತಿಯಲ್ಲಿ ನಮಗೆ ಪರಕೀಯವಾದಂತೆ ನಮ್ಮ ಪುರಾತನ ಪುರಾಣಗಳ ವಿಷಯವೂ ಕಾಲ ದೃಷ್ಟಿಯಿಂದ ಪರಕೀಯವಾಗುತ್ತವೆ. ಹಿಂದಿನ ಕಾಲದ ರಾಜರ ಯುದ್ಧ ವರ್ಣನೆಗಳನ್ನು ಓದುವಾಗ ಜ್ಞಾನವೃದ್ಧ ವಯೋವೃದ್ಧರಿಗೂ ಎಷ್ಟೋ ಸಂಶಯಗಳು ಉಳಿಯುತ್ತವೆ. ರಥಕ್ಕೆ ಗಾಲಿಗಳೆಷ್ಟು ಇದ್ದವು? ಸಾರಥಿಯು ಕೂಡುತ್ತಿದ್ದನೋ ಅಥವಾ ನಿಲ್ಲುತ್ತಿದ್ದನೊ? ರಥಿಯು ಎಲ್ಲಿ ಮತ್ತು ಹೇಗೆ ನಿಲ್ಲುತ್ತಿದ್ದನು? ನಾನಾ ವಿಧವಾದ ಆಯುಧಗಳನ್ನು ರಥದಲ್ಲಿ ಹೇಗೆ ತುಂಬುತ್ತಿದ್ದರು? ಇಂಥ ಮತ್ತು ಇತರ ಅನೇಕ ವಿಷಯಗಳು ನಮ್ಮ ಮನೋದೃಷ್ಟಿಗೆ ಸ್ಪಷ್ಟವಾಗಿ ಗೋಚರವಾಗಲಾರವು. ಇಂಥ ಮಂಜು ಮಂಜಾದ ಭೂಮಿಕೆಯ ಮೇಲೆ ನಿರ್ಮಿಸಿದ ವಿದ್ಯಾಮಂದಿರವು ಎಷ್ಟು ಕಡೆಗೆ ಕುಸಿದು ಬೀಳುವದೋ ದೇವರೆ ಬಲ್ಲ! ಆದರಂತೆ ಮಾತೃಭಾಷೆಯಲ್ಲಿ ಹೇಳಿದ ವಿಷಯವು ಅಲ್ಪಾಯಾಸದಿಂದ ಮನನವಾಗುತ್ತದೆ. ಕ್ರಮುಶಃ ತಿಳವಳಿಕೆಯ ಮಟ್ಟವನ್ನು ಎತ್ತರಿಸುತ್ತ ಹೋಗಬೇಕಾದರೆ ನಿಪುಣರಾದ ಶಿಕ್ಷಕರು ಬೇಕು.

ಬಾಲಕರ ಮನಸ್ಸು

ಬಾಲಕರ ಮನಸ್ಸೆಂದರೆ ಸ್ವಚ್ಛವಾದ ಪಾಟಿಯಲ್ಲ- ಪ್ರತಿಯೊಬ್ಬ ಬಾಲಕನಲ್ಲಿಯೂ ಕೆಲವು ಹುಟ್ಟುಗುಣ ದೋಷಗಳಿರುತ್ತವೆ. ಆನುವಂಶಿಕ ರೀತಿಯಿಂದ ವಂಶದಲ್ಲಿ ಬರತಕ್ಕ ಗುಣಗಳು ಮತ್ತು ಚಿಕ್ಕಂದಿನಲ್ಲಿ ಪರಿಸ್ಥಿತಿಯ ಪ್ರಭಾವದಿಂದ ಒಡಮೂಡಿದ ಗುಣಾವಗುಣಗಳು, ತಂದೆ ತಾಯಿಗಳ ಸ್ವಭಾವದಿಂದ ಉದ್ಭೂತವಾದ ಸ್ವಾಭಾವಿಕ ಗುಣದೋಷಗಳು, ಹೀಗೆ ನಾನಾವಿಧವಾಗಿ ಬಾಲ್ಯದಲ್ಲಿ ಬಾಲಕರ ಮನಸ್ಸಿನ ಮೇಲೆ ಸಂಸ್ಕಾರದ ಪಡಿಯಚ್ಚು ಬಿದ್ದಿರುತ್ತದೆ. ಇದಲ್ಲದೆ ನಮ್ಮ ಶಾಸ್ತ್ರಗಳಲ್ಲಿ ಹೇಳಿದಂತೆ ಪೂರ್ವಜನ್ಮದ ಸಂಸ್ಕಾರಗಳೂ ಈ ಜನ್ಮದಲ್ಲಿ ಬೀಜರೂಪದಿಂದ ಉದ್ಭವಿಸಬಹುದು. ಇಂಥ ಸಂಕಲನದಲ್ಲಿ ಗುಣಗಳ ವರ್ಧನೆಯನ್ನು ಮಾಡಿ ದೋಷಗಳ ಉಚ್ಚಾಟನೆಯನ್ನು ಮಾಡಬೇಕಾಗುತ್ತದೆ. ಈ ಕಾರ್ಯವು ದೊಡ್ಡ ವರ್ಗಗಳಲ್ಲಿ ಜರಗಿಸ ಸಾಮೂಹಿಕ ಶಿಕ್ಷಣದಿಂದ ಸಾಧಿಸಲಾರದು. ಪ್ರತಿಯೊಬ್ಬ ವ್ಯಕ್ತಿಗೂ ಪ್ರತ್ಯೇಕ ಲಕ್ಷ್ಯವನ್ನು ಕೊಡಬೇಕಾಗುತ್ತದೆ. ಮತ್ತು ಶಿಕ್ಷಕನಲ್ಲಿ ಮಾನಸಶಾಸ್ತ್ರದ ಮೂಲ ತತ್ವಗಳ ಅರಿವು ಇದ್ದರೆ ಮಾತ್ರ ಅವನು ಏನಾದರೂ ಸಾಧಿಸಬಲ್ಲನು. ಮನೋದೋಷಗಳು ಉಗ್ರರೂಪವನ್ನು ತಾಳಿ ರೋಗದಲ್ಲಿ ಪರ್ಯವಸಾನವನ್ನು ಹೊಂದಿದಾಗ ಮಾನಸಿಕ ವೈದ್ಯರ ಸಹಾಯವನ್ನು ಪಡೆಯಬೇಕಾಗುವದು. ಸಾಮಾನ್ಯ ಶಿಕ್ಷಕರಿಗೆ ಇಂಥ ಪ್ರಸಂಗದಲ್ಲಿ ಏನೂ ಮಾಡಲಿಕ್ಕಾಗುವದಿಲ್ಲ. ನಮ್ಮ ಬಡದೇಶದಲ್ಲಿ ಇಂಥ ಉಚ್ಚ ಶ್ರೇಯವುಳ್ಳ ಶಿಕ್ಷಕರಿಲ್ಲಿಂದ ಬರಬೇಕು? ಮತ್ತು ಅವರಿಗೆ ಮಾನಸಶಾಸ್ತ್ರದ ಜ್ಞಾನವು ಹೇಗೆ ಸಿಗಬೇಕು? ಮಾನಸಿಕ ವೈದ್ಯರಂತೂ ಅಭಾವ ರಾಜ್ಯದಲ್ಲಿ ಮೆರೆಯುತ್ತಾರೆ. ಏನೂ ಇಲ್ಲದ ನಮಗೆ ಬಡವನ ಹೆಬ್ಬಯಕೆಯಂತೆ ಇದೆಲ್ಲವೂ ಶಬ್ದಾಡಂಬರವೇ ಸೈ. ಆದರೂ ದೇವರೇ ಗತಿಯೆಂದು ಸುಮ್ಮನೆ ಕೂಡುವದಕ್ಕಿಂತ ಶಕ್ಯವಾದ ಮಟ್ಟಿಗೆ ಈ ದಿಶೆಯಲ್ಲಿ ಪ್ರಯತ್ನ ಮಾಡಿದರೆ ನಿಜವಾದ ಉನ್ನತಿಯು ಲಭ್ಯವಾಗುವದು.

ಧಾರವಾಡದಲ್ಲಿಯ ಬರ್ಮಾ ಶೆಲ್ ಕಂಪನಿಯ ಪೆಟ್ರೋಲ ಗುದಾಮಿಗೆ ಕೆಲ ಜನರು ಕಳೆದ ಗುರುವಾರ ರಾತ್ರಿ ಕನ್ನ ಹಾಕಿ ಒಳನುಗ್ಗಿ ಒಂಭತ್ತು ಡಬ್ಬ ಪೆಟ್ರೋಲನ್ನು ಕದ್ದುಕೊಂಡು ಹೋಗಿದ್ದಾರೆ. ಪೋಲೀಸರು ಈ ಸಂಬಂಧದಲ್ಲಿ ಇಬ್ಬರನ್ನು ಬಂಧಿಸಿದ್ದು ಕದ್ದ ಪೆಟ್ರೋಲು ಪತ್ತೆಯಾಗಿದೆ.

ಹಿಂದುಸ್ತಾನ

ಮುಂಬಯಿ

ರಾಷ್ಟ್ರೀಯ ಧ್ವಜವನ್ನು ಯಾವದೇ ವ್ಯವಹಾರದಲ್ಲಿ ಟ್ರೇಡಮಾರ್ಕೆಂದು ಉಪಯೋಗಿಸಕೂಡದೆಂದು ಮುಂಬಯಿ ಸರಕಾರದವರು ವಿಧಿಸಿದ್ದಾರೆ.

ಅಸ್ಪೃಶ್ಯತಾ ನಿವಾರಣೆಗಾಗಿ ಸರಕಾರಿ ನೌಕರರು ಹೆಣಗಿದ್ದಾದರೆ ಇದು ಅವರ ಕಾರ್ಯಕ್ಷಮತೆಯೆಂದು ಪರಿಗಣಿಸಲಾಗುವದೆಂದೂ ಆಯಾ ಖಾತೆಯ ಮುಖ್ಯಾಧಿಕಾರಿಗಳು ಹಾಗೂ ಅಧಿಕಾರಿಗಳು ಅವರಿಗೆ ಕಾಯದೆ ಬದ್ಧವಾದ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದೂ ಮುಂಬಯಿ ಸರಕಾರವು ಒಂದು ಪ್ರಕಟನೆ ಹೊರಡಿಸಿದೆ.

ಪಶ್ಚಿಮ ಪಾಕಿಸ್ತಾನದಿಂದ ಬಂದ ನಿರಾಶ್ರಿತ ನೌಕರರಿಗೆ ೩ ತಿಂಗಳ ಪಗಾರ ಇಲ್ಲವೆ ೨೫೦೦ ರೂಪಾಯಿ ಇವುಗಳಲ್ಲಿ ಕಡಿಮೆ ಯಾಗುವ ಹಣವನ್ನು ಬಡ್ಡಿಯಿಲ್ಲದೆ ಮುಂಗಡವಾಗಿ ಕೊಡಲಾಗುವದೆಂದು ಮುಂಬಯಿ ಸರಕಾರವು ಒಂದು ಪತ್ರಿಕಾ ಪ್ರಕಟನೆ ಹೊರಡಿಸಿದೆ.

ಮುಂಬಯಿ ಪ್ರಾಂತಿಕ ಲಂಚ ನಿರ್ಮೂಲನ ಶಾಖೆಯು ಎಪ್ರಿಲ್ ಮೇ, ಜೂನ ಈ ೩ ತಿಂಗಳಲ್ಲಿ ೬೦ ಕ್ಕಿಂತ ಹೆಚ್ಚು ಲಂಚ ಮತ್ತು ಕಳ್ಳಪೇಟೆಯ ಪ್ರಕರಣಗಳನ್ನು ಕಂಡು ಹಿಡಿದಿದೆ. ಈ ೩ ತಿಂಗಳಲ್ಲಿ ೨೦ ಕ್ಕಿಂತ ಹೆಚ್ಚು ಸರಕಾರಿ ನೌಕರರಿಗೆ ಈ ಬಗ್ಗೆ ಶಿಕ್ಷೆ ವಿಧಿಸಲಾಗಿದೆ. ಹೀಗೆ ಶಿಕ್ಷೆಗೆ ಗುರಿಯಾದವರಲ್ಲಿ ಒಬ್ಬ ಫಸ್ಟ್‌ಕ್ಲಾಸ ರೆಸಿಡೆಂಟ ಮ್ಯಾಜಿಸ್ಟ್ರೇಟರಿರುವರು.

ಅಧಿಕ ಆಹಾರ ಬೆಳೆದ ರೈತರಿಗೆ ಪಾರಿತೋಷಕ ಕೊಡಬೇಕೆಂದು ಮುಂಬಯಿ ಸರಕಾರವು ನಿರ್ಧರಿಸಿದೆ. ಇದಕ್ಕೆ ಪ್ರತಿವರ್ಷ ೫೪ ಸಾವಿರ ರೂ. ವೆಚ್ಚ ತಗಲಬಹುದೆಂದು ಅಂದಾಜಿದೆ. ಪ್ರತಿತಾಲೂಕಿಗೆ ೩ ಪಾರಿತೋಷಕಗಳನ್ನು ಇಡಲಾಗಿದ್ದು ೧ ನೆ ಬಹುಮಾನ ೭೫ ರೂ. ೨ ನೆಯದು ೫೦ ರೂ. ೩ ನೆಯದು ೨೫ ರೂ. ಹೀಗೆ ಹಂಚಲಾಗುವದು.

ತಾ. ೬ ಕ್ಕೆ ಮುಂಬಯಿಯಲ್ಲಿ ಪ್ರೌಢ ಶಿಕ್ಷಣ ಕಾರ್ಯಕರ್ತರ ಪ್ರಾಂತಿಕ ಪರಿಷತ್ತು ಸೇರಿತ್ತು. ಸರಕಾರಿ ಅಧಿಕಾರಿಗಳು ಇತರ ಪ್ರತಿಷ್ಠಿತರು ಕೂಡಿ ೪೦ ಜನರು ಪ್ರಾಂತದ ಬೇರೆ ಬೇರೆ ಭಾಗಗಳಿಂದ ಸರಕಾರೀ ಆಮಂತ್ರಣದ ಮೇರೆಗೆ ಪರಿಷತ್ತಿಗೆ ಆಗಮಿಸಿದ್ದರು. ಶ್ರೀ ಖೇರರು ಇದರ ಉದ್ಘಾಟನೆ ಮಾಡಿದರು. ಮಹತ್ವದನೊತ್ತುವಳಿಗಳಾಗಿ ಪ್ರೌಢ ಶಿಕ್ಷಣಕ್ಕೆ ಉಪಯುಕ್ತವಾದ ಪಠ್ಯಪುಸ್ತಕ ಮತ್ತಿತರ ಉಪಕರಣಗಳನ್ನು ಒದಗಿಸಬೇಕೆಂಬ ವಿಷಯಕ್ಕೆ ಹೆಚ್ಚು ಗಮನಕೊಡಲಾಯಿತು. ಸರಕಾರವು ಕೊಡುವ ಧನಸಹಾಯವನ್ನು ಮುಖ್ಯಮಂತ್ರಿಗಳು ಪುನಃ ಪರಿಶೀಲಿಸಬೇಕೆಂದು ಸಭೆ ಕೋರಿತು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಮೇಲಿನ ನಿರ್ಬಂಧ ತೆಗೆಯಬೇಕೆಂದು ಬಿನ್ನವಿಸಲು ಮತ್ತು ಈ ಸಂಸ್ಥೆ ಇನ್ನು ಮೇಲೆ ದೇಶ ವಿಘಾತಕ ಕಾರ್ಯ ಕೈಕೊಳ್ಳುವದಿಲ್ಲವೆಂದು ಆಶ್ವಾಸನ ಕೊಡಲು ಒಂದು ಶಿಷ್ಟಮಂಡಲವು ಪಂ. ನೆಹರು ಅವರ ಕಡೆಗೆ ಹೋಗಿದೆಯೆಂದು ತಿಳಿಯುತ್ತದೆ.

ತುಳಜಾಪುರದ ಜಗದಂಬಾ ದೇವಾಲಯವು ನಿಜಾಮರ ಗಡಿಯಲ್ಲಿದ್ದು ರಜಾಕಾರ ಪುಂಡರಿಂದ ಅದಕ್ಕೆ ಧಕ್ಕೆ ತಟ್ಟದಂತೆ ಸಂರಕ್ಷಣೆ ಕೊಡುವದು ಅಗತ್ಯವಿದೆಯೆಂದು ಆ ದೇವಾಲಯದ ಭಕ್ತರು ಮುಂಬಯಿ ಸರಕಾರಕ್ಕೆ ಅರ್ಜಿ ಮಾಡಿದ್ದಾರೆ.

ಮುಂಬಯಿಯಲ್ಲಿ ಮೊನ್ನೆ ನಡೆದ ಗಲಭೆಯ ಬಗ್ಗೆ ಭೂಲೇಶ್ವರ ರೋಡ ಮತ್ತು ಮಹಾರ ಬಾವಡಿಯಲ್ಲಿಯ ೪ ಮನೆಗಳ ರಹಿವಾಸಿಗಳ ಮೇಲೆ ೧೦ ಸಾವಿರ ರೂ. ಸಾಮೂಹಿಕ ದಂಡ ಹೇರಲಾಗಿದೆ.

ನವಭಾರತವೆಂಬ ಹೊಸ ಮರಾಠಿ ದೈನಿಕವೊಂದು ತಾ. ೮ ಕ್ಕೆ ಶ್ರೀ ಬಿ. ಆರ್. ಧುರಂಧರರ ಸಂಪಾದಕತ್ವದಲ್ಲಿ ಹೊರಟಿದೆ. ಈ ಹೊಸ ದೈನಿಕಕ್ಕೆ ಶ್ರೀ ರಾಜಾಜಿ, ಸರದಾರ ಪಟೇಲ, ಡಾ. ರಾಜೇಂದ್ರ ಪ್ರಸಾದ ಶ್ರೀಖೇರ ಮೊದಲಾದವರ ಶುಭ ಸಂದೇಶಗಳು ಬಂದಿದ್ದವು.

ಮುಂಬಯಿ ಪ್ರಾಂತಿಕ ಪ್ರಾಥಮಿಕ ಶಿಕ್ಷಕರ ಸಂಘದ ಅಧ್ಯಕ್ಷರಾದ ಶ್ರೀ. ಎಂ. ಎ. ಜೊಂಡೆಯವರು ಒಂದು ಪ್ರಕಟನೆ ಹೊರಡಿಸಿ ಮುಂಬಯಿ ಸರಕಾರವು ಪ್ರಾಥಮಿಕ ಶಿಕ್ಷಣವನ್ನು ತನ್ನ ನಿಯಂತ್ರಣದಲ್ಲಿ ತೆಗೆದುಕೊಳ್ಳಲು ನಿರ್ಧರಿಸಿದ ಮತ್ತು ಪ್ರಾಥಮಿಕ ಶಿಕ್ಷಕರ ಹೊಸ ಸಂಬಳದ ಪ್ರಮಾಣವನ್ನು ಜಾರಿಯಲ್ಲಿ ತರುವ ವಿಷಯಗಳು ಇನ್ನೂ ಕಾರ್ಯರೂಪಕ್ಕೆ ಇಳಿಯದಿದ್ದುದನ್ನು ಖಂಡಿಸಿದ್ದಾರೆ. ಈ ಪ್ರಶ್ನೆಯು ೫೦ ಸಾವಿರ ಜನರಿಗೆ ಸಂಬಂಧಪಟ್ಟದ್ದಿದ್ದ ಕಾರಣ ಸರಕಾರವು ಈ ವಿಲಂಬಕ್ಕೆ ಸ್ಪಷ್ಟೀಕರಣಕೊಡುವದು ಅಗತ್ಯವೆಂದೂ ಈ ವಿಲಂಬ ಅಕ್ಷಮ್ಯವೆಂದೂ ಹೇಳಿದ್ದಾರೆ.

ಹೊಸದಿಲ್ಲಿ

ನಿವೃತ್ತ ಸೈನಿಕರು ಲಖನೌದಲ್ಲಿ ಸಭೆಸೇರಿ ಒಂದು ಗೊತ್ತುವಳಿಯಲ್ಲಿ ಬ್ರಿ. ಉಸ್ಮಾನರ ಸ್ಮಾರಕಕ್ಕಾಗಿ ಒಂದು ಸೈನಿಕ ಶಿಕ್ಷಣಾಲಯ ತೆರೆಯಬೇಕೆಂದು ಸರಕಾರಕ್ಕೆ ಬಿನ್ನವಿಸಿದೆಯೆಂದು ತಿಳಿಯುತ್ತದೆ.

ಹಿಂದುಸ್ತಾನ ಸರಕಾರದವರು, ಪಾಕಿಸ್ತಾನದಿಂದ ಹಿಂದುಸ್ತಾನಕ್ಕೆ ಬರಬಯಸುವ ಮುಸಲ್ಮಾನರ ಸಲುವಾಗಿ ಪ್ರವೇಶ ಚೀಟಿಯ ಪದ್ಧತಿಯನ್ನು ಜಾರಿಯಲ್ಲಿ ತರಲು ನಿರ್ಧರಿಸಿದ್ದಾರೆ. ಇಲ್ಲಿಯೇ ನೆಲೆಯಾಗಿ ನಿಲ್ಲಲು ಬರುವವರಿಗೆ ಪ್ರವೇಶಚೀಟಿಯನ್ನು ಕೊಡಲಾಗುವದಿಲ್ಲ. ತಾತ್ಪೂರ್ತಿಕವಾಗಿ ತಮ್ಮ ಆಸ್ತಿಪಾಸ್ತಿಗಳ ವ್ಯವಸ್ಥೆಗೆ ಬರುವವರಿಗೆ ಮಾತ್ರ ಪ್ರದೇಶಚೀಟಿ ದೊರಕುವದು. ಪಾಕಿಸ್ತಾನ ಹಿಂದೀ ಹಾಯಕಮಿಶನರ ನೇತೃತ್ವದಲ್ಲಿ ಈ ಪ್ರವೇಶ ಚೀಟಿಗಳನ್ನು ಕೊಡಲಾಗುವದು.

ಲೋಕಸೇವಾಸಂಘವನ್ನು ಸೇರಲು ಅ. ಭಾ. ಕಾಂ. ಸಮಿತಿಯ ಶಾಶ್ವತ ಕಾರ್ಯದರ್ಶಿತ್ವಕ್ಕೆ ರಾಜೀನಾಮೆ ಕೊಟ್ಟ ಸಾದಿಕ ಅಲ್ಲಿಯವರ ಸ್ಥಳಕ್ಕೆ ಶ್ರೀ ಪಿ. ಚಕ್ರವರ್ತಿಯವರು ನೇಮಿಸಲ್ಪಟ್ಟಿದ್ದು ಅವರು ಅಧಿಕಾರ ಸ್ವೀಕರಿಸಿದರು.

ಸಂಯುಕ್ತ ರಾಷ್ಟ್ರ ಸಂಸ್ಥೆಯ ಕಾಶ್ಮೀರ ಮಂಡಳದ ಸದಸ್ಯರು ತಾ. ೧೦ ಕ್ಕೆ ಕರಾಚಿಯಿಂದ ದಿಲ್ಲಿಗೆ ೧೨॥ ಗಂಟೆಗೆ ಬಂದರು. ಈ ಮಂಡಳದ ಧುರೀಣರಾದ ಗ್ರಾಫೆಯವರು (ಬೆಲ್ಜಿಯಂ) ಕೂಡಲೆ ಒಂದು ಹೇಳಿಕೆ ಹೊರಡಿಸಿ, ಕಾಶ್ಮೀರ ಸಮಸ್ಯೆಯು ಸಮಂಜಸ ರೀತಿಯಲ್ಲಿ ಬಗೆಹರಿಯುವಂತೆ ಪಾಕಿಸ್ತಾನ ಹಿಂದುಸ್ತಾನಗಳಿಗೆ ತಾವು ಸಹಾಯ ನೀಡುವವಾಗಿ ಹೇಳಿದ್ದಾರೆ.

ಇಂಗ್ಲಂಡ ಮತ್ತು ಹಿಂದುಸ್ತಾನಗಳ ನಡುವೆ ತಾ. ೯ ಕ್ಕೆ ಸ್ಟರ್ಲಿಂಗ ಸಂಗ್ರಹದ ಒಡಂಬಡಿಕೆಗೆ ಎರಡೂ ರಾಷ್ಟ್ರಗಳ ಅಂಕಿತ ಬಿದ್ದಿತು. ಹಿಂದುಸ್ತಾನಕ್ಕೆ ೧೬ ಕೋಟಿ ಪೌಂಡ ಸ್ಟರ್ಲಿಂಗ ಹಣ ಕೊಡಲಾಗಿದೆ. ಈ ಒಡಂಬಡಿಕೆ ಅವಧಿಯು ೩ ವರ್ಷವಿರುವದು. ಹಿಂದುಸ್ತಾನಕ್ಕೆ ಬೇಕಾದ ಯಂತ್ರಾದಿ ಸಲಕರಣೆಗಳನ್ನು ಒದಗಿಸಲು ಬ್ರಿ. ಸರಕಾರವು ಒಪ್ಪಿದೆಯೆಂದು ತಿಳಿಯುತ್ತದೆ.

ಭಾರತದ ಗವರ್ನರ ಜನರಲ್‌ರಾದ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರಿಗೆ ದಿಲ್ಲಿ ನಗರ ಸಭೆಯು ತಾ ೧೧ ಕ್ಕೆ ಮಾನಪತ್ರ ಅರ್ಪಿಸಿತು. ಆಗ ಶ್ರೀ ರಾಜಗೋಪಾಲಾಚಾರ್ಯರು ಮಾತನಾಡುತ್ತ, ಪರಸ್ಪರ ಸ್ಪರ್ಧೆಬೇಧ, ಒಕ್ಕಟ್ಟು ಅವಶ್ಯ, ದೇಶೋನ್ನತಿಗಾಗಿ ಜಾಗತಿಕ ಶಾಂತಿಗಾಗಿ ಎಲ್ಲರೂ ಭಿನ್ನಾಭಿಪ್ರಾಯವನ್ನು ಬದಿಗೊತ್ತಬೇಕು ಎಂದು ಮುಂತಾಗಿ ಹೇಳಿದರು.

ತಿಕೀಟಿಲ್ಲದ ಪ್ರಯಾಣಿಕರಿಂದ ಹಿಂದುಸ್ತಾನ ಸರಕಾರಕ್ಕೆ ಪ್ರತಿವರ್ಷ ೧೦ ಕೋಟಿ ರೂ. ಗಳ ಹಾನಿಯಾಗುತ್ತದೆ. ಸರಕಾರದವರು ಈ ಹಾನಿಯನ್ನು ಸಾರ್ವಜನಿಕರಿಂದಲೇ ತುಂಬಿಕೊಳ್ಳಬೇಕಾಗುವದು. ಆದ್ದರಿಂದ ಪ್ರಯಾಣಿಕರು ಇಂತಹ ಲಾಂಛನಾಸ್ಪದ ಕಾರ್ಯ ಮಾಡಬಾರದೆಂದು ಮುಂಬಯಿ ಮುಖ್ಯಮಂತ್ರಿ ಶ್ರೀ ಬಿ ಜಿ. ಖೇರರು ಒಂದು ಬಿನ್ನಹ ಹೊರಡಿಸಿದ್ದಾರೆ.

ಮುಂಬಯಿ ಸಿ. ಆಯ್. ಡಿ. ಪೋಲೀಸರು ಲಂಚತಿಂದ ಆರೋಪದ ಮೇಲೆ ಶಾಹೆಯ ಮಾಮಲೆದಾರ ಶ್ರೀ ಬಳವಂತ ವಾಮನಭಿಡೆ ಅವರನ್ನು ಬಂಧಿಸಿದ್ದಾರೆ. ಇವರ ಫಾಯಿಲಿನಲ್ಲಿ ಗುರ್ತು ಹಾಕಿದ ೨೦೦೦ ರೂ. ಗಳ ನೋಟು ಸಿಕ್ಕಿದ್ದವು, ರೈತ ಮತ್ತು ಮಾಲಕರ ತಂಟೆಯಲ್ಲಿ ೫ ಸಾವಿರ ಲಂಚ ಗೊತ್ತು ಮಾಡಿಕೊಂಡಿದ್ದರಂತೆ.

ಹೈದರಾಬಾದ

ನಿಜಾಮ ಸರಕಾರದ ಪ್ರಸಿದ್ಧಿ ಶಾಖೆಯ ಅಧಿಕಾರಿಗಳಾದ ಕೆ. ಈಶ್ವರದತ್ತರು ರಾಜಕೀಯ ಕಾರಣಗಳಿಗಾಗಿ ಜುಲೈ ೩ ಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆಂದು ವಿಶ್ವಸನೀಯವಾಗಿ ತಿಳಿದುಬರುತ್ತದೆ.

ಹಿಂದುಸ್ತಾನ ಸರಕಾರವು ಹೈದರಾಬಾದ ಸಂಸ್ಥಾನದ ವಿರುದ್ಧ ಆರ್ಥಿಕ ಪ್ರತಿಕಾರೋಪಾಯಗಳನ್ನು ಕೈಕೊಳ್ಳುವ ಮೊದಲೇ ನಿಜಾಮರು ಬೆಲ್ಜಿಯಂ ಝುಕೊಸ್ಲೋವಾಕಿಯಾಗಳಿಂದ ಲಾಂಕೆಸ್ಟರ ಮಾದರಿಯ ೪೦ ಬಾಂಬರ ವಿಮಾನಗಳನ್ನು ಕೊಂಡಿದ್ದಾರೆಂದು ತಿಳಿದಿದೆ. ಇವನ್ನು ನಡೆಸಲು ವಿದೇಶಿ ವೈಮಾನಿಕರೂ ಇರುವರೆಂದು ತಿಳಿಯುತ್ತದೆ.

ಹೈದರಾಬಾದದಲ್ಲಿ ಬ್ಯಾರಿಸ್ಟರರಾಗಿದ್ದ ಮೀರ ಅಕಬರ ಅಲಿಖಾನರು ತಾ. ೮ ರಂದು ಒಂದು ಪ್ರಕಟನೆ ಹೊರಡಿಸಿ ಹೈ. ಸಂ. ಕಾ. ಅಧ್ಯಕ್ಷರಾದ ಸ್ವಾಮಿ ರಮಾನಂದರನ್ನು ಬಿಡುಗಡೆ ಮಾಡಬೇಕೆಂದೂ ಸ್ವಾಮಿರಮಾನಂದರೂ ಇತ್ತೇಹಾದ ಮಜಲೀಸಿನ ಕಾಶೀಂ ರಜವಿಯವರೂ ಒಂದೆಡೆ ಸೇರಿ ವಿಚಾರ ವಿನಿಮಯಮಾಡಿ ಹಿಂದುಸ್ತಾನ ಸರಕಾರದೊಡನೆ ಮತ್ತೆ ಸಂಧಾನ ಪ್ರಾರಂಭಿಸಬೇಕೆಂದೂ ಹೇಳಿದ್ದಾರೆ.

ಹಿಂದೆ ಅ. ಭಾ. ಕಾಂ. ಕಾರ್ಯಕರ್ತರಾಗಿದ್ದ ಹೈದರಾಬಾದದ ನಿವಾಸಿಗಳಾದ ಶ್ರೀ ಆರ್. ವೆಂಕಟರಾಯರು ಹೈದರಾಬಾದದ ಶಾಂತಿಗಾಗಿ ಮತ್ತು ಅಲ್ಲಿಯ ದಬ್ಬಾಳಿಕೆಯ ನಿಷೇಧಾರ್ಥವಾಗಿ ತಮ್ಮ ಮನೆಯ ಹೊರಗೆ ಕುಳಿತು ತಾ. ೭ ರಿಂದ ಅಮರಣ ಉಪವಾಸ ಕೈಕೊಂಡಿದ್ದಾರೆಂದು ತಿಳಿಯುತ್ತದೆ.

ಭಾರತ ಸೇವಕ ಸಮಾಜದ ಶ್ರೀ ಪಿ. ಕೋದಂಡರಾವ ಒಂದು ಪ್ರಕಟನೆ ಹೊರಡಿಸಿ ಹೈದರಾಬಾದ ಘಟನಾ ಸಮಿತಿಗೆ ಪ್ರತಿನಿಧಿಗಳನ್ನು ಆರಿಸಲು ಸಂಯುಕ್ತ ಮತದಾರ ಸಂಘಸ್ಥಾಪನೆಗೆ ನಿಜಾಮರು ಒಪ್ಪದಿದ್ದರೆ ಹೈದರಾಬಾದ ಘಟನಾ ಸಮಿತಿಯ ಚುನಾವಣೆಗೆ ದೇಶಪ್ರೇಮಿಗಳಾದ ಹೈದರಾಬಾದದ ಜನತೆಯು ಬಹಿಷ್ಕಾರ ಹಾಕಬೇಕೆಂದು ಬಿನ್ನವಿಸಿದ್ದಾರೆ.

ಈಗ ಹಿಂದುಸ್ತಾನದಲ್ಲಿ ವಾಸಿಸುತ್ತಿರುವವರು ಹೈದರಾಬಾದ ಸಂಸ್ಥಾನದ ನಾಗರಿಕರಿಗೆ ಹಿಂದುಸ್ತಾನದ ರಿಝರ್ವ ಬ್ಯಾಂಕಿನ ವಿಶೇಷ ಅಪ್ಪಣೆ ಪಡೆದುಕೊಳ್ಳದೆ ಹಣವನ್ನು ಕಳಿಸಕೂಡದೆಂದು ತಾ. ೧೨ ಕ್ಕೆ ಒಂದು ಸರಕಾರಿ ಆಜ್ಞೆ ಹೊರಟಿದೆ.

ಮದ್ರಾಸ

ದಕ್ಷಿಣ ಭಾಗದ ಸೇನಾಪತಿಗಳಾದ ಲೆ. ಜ. ಮಹಾರಾಜ ಶ್ರೀ. ರಾಜೇಂದ್ರ ಸಿಂಹರು ಹೈದರಾಬಾದದ ಗಡಿಯ ಬಗ್ಗೆ ಮಾತನಾಡುತ್ತ ಸೈನಿಕರನ್ನಿಟ್ಟ ಪ್ರದೇಶದ ಜನತೆ ಎಳ್ಳಷ್ಟೂ ಹೆದರುವ ಕಾರಣವಿಲ್ಲವೆಂದೂ ಸಣ್ಣ ಪುಟ್ಟ ಘಟನೆಗಳೇನಾದರೂ ಆಗಿದ್ದರೆ ಅವನ್ನು ಪತ್ರಿಕಾಕರ್ತರು ದೊಡ್ಡದು ಮಾಡಿ ತೋರಿಸಬಾರದೆಂದೂ ಹೇಳಿದರು.

ಮದ್ರಾಸ ಸರಕಾರವು ೪೦ ರಿಂದ ೧೫೦ ರೂ. ವರೆಗೆ ವೇತನ ಪಡೆಯುವ ನಾನ್‌ಗ್ಯಾಝಿಟೆಡ್ ಸರಕಾರಿ ನೌಕರರಿಗೆ ಅವರ ವೇತನದ ಪ್ರಮಾಣಕ್ಕನುಸರಿಸಿ ಮನೆಬಾಡಿಗೆ ಭತ್ತೆ ಕೊಡಲು ನಿರ್ಧರಿಸಿದೆ. ಈ ಯೋಜನೆಯಿಂದ ಸರಕಾರಕ್ಕೆ ಸುಮಾರು ೭ ಲಕ್ಷ ರೂ. ಹೆಚ್ಚು ವೆಚ್ಚ ತಗಲುವದು.

ಬಿಹಾರ

ಕಳೆದ ಚುನಾವಣೆಗಳಲ್ಲಿ ಕಾಂಗ್ರೆಸ ಉಮೇದವಾರರೊಡನೆ ಸ್ಪರ್ಧಿಸಿ ಚುನಾವಣೆಗೆ ನಿಂತಿದ್ದಕ್ಕಾಗಿ ಬಿಹಾರ ಪ್ರಾಂತಿಕ ಕಾಂಗ್ರೆಸ ಕಾರ್ಯಕಾರೀ ಸಮಿತಿಯವರು ೪೮ ಕಾಂಗ್ರೆಸಿಗರನ್ನು ಕಾಂಗ್ರೆಸ ಸಂಸ್ಥೆಯಿಂದ ಹೊರಗೆ ಹಾಕಿದ್ದಾರೆಂದು ತಿಳಿಯುತ್ತದೆ.

ಪೂರ್ವ ಪಂಜಾಬ

ಪೂರ್ವ ಪಂಜಾಬ ಪ್ರಾಂತಿಕ ಸರಕಾರದವರು ತಮ್ಮ ಪ್ರಾಂತಕ್ಕೆ ಹೊಸ ಹೆಸರನ್ನು ಸೂಚಿಸಬೇಕೆಂದು ಕೇಳಿದ್ದಕ್ಕೆ ಸುಮಾರು ೭೦೦ ಕ್ಕಿಂತಲೂ ಹೆಚ್ಚು ಜನರು ಪೂರ್ವ ಪಂಜಾಬವನ್ನು ಪಾಂಚಾಲದೇಶ ಎಂದು ಕರೆಯಬೇಕೆಂದು ಸೂಚಿಸಿದ್ದಾರೆ.

ರೈತರು ಬೀಡಿ ಕಟ್ಟಬಾರದು

ರೈತರು ಸಾಗುವಳಿಯ ಕಾಲದಲ್ಲಿ ಬೀಡಿ ಕಟ್ಟಲು ಹೋಗಕೂಡದೆಂದು ಮಧ್ಯಪ್ರಾಂತ ಗವರ್ನರರು ಒಂದು ಆಜ್ಞೆ ಹೊರಡಿಸಿದ್ದಾರೆ, ಸಾಗುವಳಿ ಕಾರ್ಯದಲ್ಲಿ ಕೂಲಿಕಾರ ಕೊರತೆಯನ್ನು ಹೋಗಲಾಡಿಸುವದೇ ಈ ಆಜ್ಞೆಯ ಉದ್ದೇಶವಾಗಿದೆ.

ಕ್ರಾಂತಿಕಾರ ಕರ್ತಾರಾಮರ ನಿಧನ

ಸುಭಾಸ ಬೋಸರ ಸಂಗಡಿಗರು

ಉಜ್ವಲ ಕ್ರಾಂತಿಕಾರರಾದ ಶ್ರೀ ಚೌಧರಿ ಕರ್ತಾರಾಮರು ತಮ್ಮ ವಯಸ್ಸಿನ ೬೧ ನೇ ವರ್ಷದಲ್ಲಿ ೫ ತಾ. ಗೆ ಜೇಮಶೇದಪುರದಲ್ಲಿ ನಿಧನಹೊಂದಿದರು. ಇವರು ೩೮ ವರ್ಷಗಳ ದೀರ್ಘಕಾಲ ಜರ್ಮನಿಯಲ್ಲಿ ಅಜ್ಞಾತವಾಸದಲ್ಲಿದ್ದರು. ೧೯೪೧ ರಲ್ಲಿ ಸುಭಾಸಚಂದ್ರರು ಬರ್ಲಿನಕ್ಕೆ ಹೋದಾಗ ತಮ್ಮ ಗುರುತು ಕೊಟ್ಟ ಕೆಲವೇ ಜನರಲ್ಲಿ ಶ್ರೀಕರ್ತಾರಾಮರು ಒಬ್ಬರಾಗಿದ್ದರು. ಕರ್ತಾರಾಮರು ಆಜಾದ ಹಿಂದ ಸೈನ್ಯದ ಸಂಘಟನೆಯಲ್ಲಿ ಮಹತ್ವದ ಭಾಗವಹಿಸಿದ್ದರು. ಸ್ವತಂತ್ರ ಹಿಂದುಸ್ತಾನದಲ್ಲಿ ಮಾತ್ರ ಕಾಲಿಡುವೆನೆಂದು ಇವರು ೧೯೪೬ ರಲ್ಲಿ ಇಂಗ್ಲಂಡದಲ್ಲಿದ್ದ ಹಿಂದೀ ಹಾಯಕಮೀಶನರರಿಗೆ ಹೇಳಿದ್ದರು. ಅದರಂತೆ ಹಿಂದುಸ್ತಾನವು ಸ್ವತಂತ್ರವಾದ ನಂತರವೇ ಇಲ್ಲಿಗೆ ಮರಳಿದ್ದರು.

ಇಪಿ ಫಕೀರನ ದುರ್ಗಕ್ಕೆ ಮುತ್ತಿಗೆ

ಇಪಿ ಫಕೀರನ ದುರ್ಗಕ್ಕೆ ಪಾಕಿಸ್ತಾನ ಸರಕಾರವು ಮುತ್ತಿಗೆ ಹಾಕಿ ೩೧ ಜನರನ್ನು ಬಂಧಿಸಿದೆ. ಅಲ್ಲದೆ ವಜೀರಸ್ತಾನದಲ್ಲಿ ಇಪಿ ಫಕೀರನ ವರ್ಚಸ್ಸಿನ ಸ್ಥಾನಗಳಾದ ತೋರಿಖೇಲ, ಬಾಜಿಖೇಲಗಳ ಗುಡ್ಡಗಾಡು ಜನರ ಮೇಲೆ ಪಾಕಿಸ್ತಾನ ಸರಕಾರದವರು ವಿಮಾನ ಮೂಲಕ ಬಾಂಬ ಎಸೆದಿರುವರೆಂದೂ ಗಡಿನಾಡ ಗಾಂಧಿ ಖಾನ ಅಬ್ದುಲಗಫರಖಾನ ಮತ್ತು ಅವರ ೧ ಸಾವಿರ ಅನುಯಾಯಿಗಳ ಬಂಧನದಿಂದ ಉಂಟಾದ ಅಲ್ಲಿಯ ಜನರಲ್ಲಿಯ ಅಸಂತೃಪ್ತಿಯು ಈಗ ವಿಕೋಪಕ್ಕೆ ಹೋಗಿದೆಯೆಂದೂ ತಿಳಿಯುತ್ತದೆ. ಇಪಿ ಫಕೀರನ ಅನುಯಾಯಿಗಳು ಕಾಶ್ಮೀರ ದಾಳಿಯ ಬಗ್ಗೆ ಅನಾಸ್ಥೆ ವ್ಯಕ್ತಪಡಿಸಿ 'ಜೇಹಾದ' ದಲ್ಲಿ ಭಾಗವಹಿಸಲು ನಿರಾಕರಿಸಿದ್ದೇ ಹೀಗೆ ಬಾಂಬು ಹಾಕಲು ಮುಖ್ಯ ಕಾರಣವಾಗಿವೆಯೆಂದು ತಿಳಿಯುತ್ತದೆ.

ಸಂಸ್ಥಾನಿಕರ ಖಾಸಗಿ ವೆಚ್ಚ ೧೦ ಲಕ್ಷಕ್ಕೆ ಮಿಕ್ಕಬಾರದು

ಸರದಾರ ಪಟೇಲರು ರಾಜಧಾನಿಗೆ ತಿರುಗಿ ಬರುತ್ತಲೇ ಮಾಡಿದ ಮಹತ್ವದ ಕೆಲಸವೆಂದರೆ ಮಾಳವಾ ಒಕ್ಕೂಟದ ಅರಸರ ಸಭೆ ಸೇರಿಸಿ ಅವರವರ ಖಾಸಗೀ ವೆಚ್ಚದ ಮಿತಿಯನ್ನು ನಿರ್ಧರಿಸಿದುದು.

ಗ್ವಾಲೇರ ಮತ್ತು ಇಂದೂರ ಮಹಾರಾಜರಿಗೆ ವರ್ಷಕ್ಕೆ ಅನುಕ್ರಮವಾಗಿ ೨೫ ಲಕ್ಷ ೧೫ ಲಕ್ಷ ರೂ. ಗಳೆಂದು ನಿರ್ಧರಿಸಲಾಗಿದೆ. ಉಳಿದ ಅರಸರ ವೆಚ್ಚಕ್ಕಾಗಿ ಭಾರತ ಸರಕಾರವು ಅವರವರ ಆದಾಯಕ್ಕನುಗುಣವಾಗಿ ಒಂದು ಪ್ರಮಾಣವನ್ನು ಗೊತ್ತುಪಡಿಸಿದ್ದು ಯಾವ ಅರಸರಿಗೂ ವೆಚ್ಚವು ಒಂದು ವರ್ಷಕ್ಕೆ ೧೦ ಲಕ್ಷಕ್ಕೆ ಮಿಕ್ಕಕೂಡದಾಗಿ ಗೊತ್ತಾಗಿದೆ. ಇಂದೂರ ಗ್ವಾಲೇರಗಳು ಮಧ್ಯಭಾರತ ಒಕ್ಕೂಟದಲ್ಲಿಯ ಮುಖ್ಯ ಘಟಕಗಳಾಗಿದ್ದರಿಂದ ಅವುಗಳನ್ನು ಈ ನಿಯಮಕ್ಕೆ ಅಪವಾದವೆಂದು ಎಣಿಸಲಾಗಿದೆ.

ಶಾಸನ ಸಭಾ ಸದಸ್ಯರು

ಶಾಸನ ಸಭೆಗಳ ಸದಸ್ಯರಾಗಿರುವವರು ಸರಕಾರೀ ಗುತ್ತಿಗೆ ಕೆಲಸಗಳನ್ನು ಹಿಡಿಯಬಹುದೆ ಎಂಬ ಬಗ್ಗೆ ಸರಕಾರದ ಧೋರಣವನ್ನು ಸ್ಪಷ್ಟೀಕರಿಸಬೇಕೆಂದು ಮದ್ರಾಸ ಪ್ರಾಂತದ ಶಾಸನ ಸಭೆಯಲ್ಲಿ ಕೇಳಿದ ಒಂದು ಪ್ರಶ್ನೆಯನ್ನು ಮದ್ರಾಸ ಮಂತ್ರಿಮಂಡಲವು ಸಭೆಗೂಡಿ ಶಾಸನ ಸಭೆಯ ಸದಸ್ಯರಾದವರು ಸರಕಾರದ ಗುತ್ತಿಗೆ ಕೆಲಸ ಹಿಡಿಯ ಕೂಡದೆಂದು ನಿರ್ಣಯಿಸಿತು. ಈ ಬಗ್ಗೆ ಯೋಗ್ಯ ಕಾಯದೆಯನ್ನೂ ಬೇಗ ರಚಿಸಲಾಗುವದು.

ಶ್ರೀ ಜಗನ್ನಾಥಪುರಿಗೆ ಬರುವ ಯಾತ್ರಿಕರಿಗೆ, ಮಹಾತ್ಮಾ ಗಾಂಧಿಯ ಬಗ್ಗೆ ಅವರಿಗಿದ್ದ ಶ್ರದ್ಧೆಯನ್ನು ಅರ್ಪಿಸಲು ಅನುಕೂಲವಾಗಲೆಂದು ಸಮುದ್ರದ ದಂಡೆಯ ಮೇಲೆ ಒಂದು ಧ್ವಜಸ್ತಂಭವನ್ನು ನಿಲ್ಲಿಸಬೇಕೆಂದು ನಿರ್ಧರಿಸಲಾಗಿದೆ. ಅದರ ಮೇಲೆ ರಾಷ್ಟ್ರಧ್ವಜವನ್ನು ಏರಿಸಲಾಗುವದು. ರಾತ್ರಿಯೆಲ್ಲ ಅದರ ಮೇಲೆ ಪ್ರಕಾಶಮಯ ದೀಪವನ್ನು ಇರಿಸಲಾಗುವದು. ಈ ಸೂಚನೆಯು ಓರಿಸಾದ ಗವರ್ನರರಾದ ಅಸಫ ಅಲ್ಲಿ ಅವರ ಮುಖಾಂತರ ಬಂದುದಾಗಿದೆ.

ಬೆಳಿಗ್ಗೆ ಕಾಫೀ ಕುಡಿದು, ಟೈಪ್‌ನಿಂದ ಕೈಯನ್ನು ಒರೆಸಿಕೊಳ್ಳುತ್ತಾ ಹೊರಬಂದೆ. ಅಗಲೇ ಸರಿಯಾಗಿ ಒಬ್ಬ ಸನ್ಯಾಸಿ ಮನೆಯ ಬಾಗಿಲ ಸಮೀಪ ನಿಂತಿದ್ದ. ಅವನನ್ನು ಒಳಗಿನಿಂದಲೇ ದಿಟ್ಟಿಸಿ ನೋಡುತ್ತಾ ನಿಂತೆ. ಅವನೊಬ್ಬ ಆರಡಿ ಎತ್ತರದ ಧಾರಿ ಮನುಷ್ಯ. ಆ ಎತ್ತರಕ್ಕೆ ತಕ್ಕಷ್ಟೇ ಸಧೃಢವಾಗಿ ಬೆಳೆದ, ಅಗಲವಾದ ಎದೆಯು, ಉಕ್ಕಿಗಿಂತಲೂ ಕಠಿಣವಾದ ದೇಹಪ್ರಕೃತಿ. ಪ್ರಾಯವೋ— ನಲವತ್ತು ವರ್ಷ ದಾಟಿ ನಿಮಿಷ ಸಹ ಹೆಚ್ಚಾಗಿರಲಾರದು. ಅದಕ್ಕೆ ಸರಿಯಾಗಿ ಅವನು ತೊಟ್ಟುಕೊಂಡ ಬಟ್ಟೆ ಶುದ್ಧ ಕಾವಿಯದೆ. ಅವನ ಈ ಅವತಾರವನ್ನು ಕಂಡು ನನಗನಿಸಿತು— "ಇವನೊಬ್ಬ ಸೋಗಿನ ಅರ್ಜುನಸನ್ಯಾಸಿ." ಎಂದು ನಿಜ ಹೇಳುವುದಾದರೆ ಇವನಿಗೆ ಕೂಲಿ ಮಾಡುವುದರಲ್ಲಿ ನಮ್ಮಂಥ ಒಳ್ಳೆ ಬಲಶಾಲಿ ಆಳನ್ನು ಅಭ್ಯಾಸವಿಲ್ಲದಿದ್ದರೂ ನಾಲ್ಕಾರು ದಿನಗಳ ಪರಿಮಿಯಿಂದಲೇ ಸೋಲಿಸಿ ಬಿಡಬಹುದಾದಂತಹ ಧೀಮಶಕ್ತಿ ಇದೆ. ಇಂಥಾ ದುಡಿಯಬಲ್ಲ, ನಿರೋಗಿಯಾದ ಮನುಷ್ಯ— ಅದೂ ಬೆಳಗಿನ ಸಮಯದಲ್ಲಿ- ಭಿಕ್ಷೆಗಾಗಿ ಮನೆಯ ಮುಂದೆ ಬಂದು ನಿಂತರೆ, ಸಿಟ್ಟು ಬರುವುದು ದೊಡ್ಡ ಮಾತೇ? ಅಗಲೇ ಆ ತಿರುಕ— ''ಭವತಿ ಭಿಕ್ಷಾಂದೇಹಿ.'' ಎಂಬ ಸಪ್ತಾಕ್ಷರೀ ಮಂತ್ರವನ್ನು ಉಚ್ಚರಿಸಿದ.

ನಾನು— ಸಿಟ್ಟಿಗೆದ್ದ ಸರ್ಪದ ಹಾಗೆ— ಬುಸುಗುಟ್ಟುತ್ತಾ ಹೊರಬಂದು ಅಬ್ಬರಿಸಿದೆ— 'ತಿರುಪೆಯ ಅನ್ನದಿಂದ ಮೈಯನ್ನು ಬೆಳಸಿಕೊಂಡಿದ್ದೀಯಾ, ನಾಚಿಕೆಯಾಗುವುದಿಲ್ಲವೇ? ದುಡಿದು ತಿನ್ನಲಿಕ್ಕೇನಾಗಿದೆ ನಿನಗೆ.'

ಅವನು ಬಹು ಸಮಾಧಾನದ ಧ್ವನಿಯಲ್ಲಿ,- ''ನೀವು ಕೊಟ್ಟರೂ ಸಂತೋಷವೇ, ಕೊಡದಿದ್ದರೂ ಸಂತೋಷವೆ. ಹಾಗಾದರೆ ನಾನು ಹೋಗಲೇ?'' ಎಂದ.

ನಾನು. ''ಇವನ ಈ ಕಪಟಸೋಗಿನಿಂದ ಎಷ್ಟು ಜನ ಹೆಣ್ಣುಜೀವಿಗಳ ಮನಗಳು ಹಾಳಾಗಿವೆಯೋ?" ಎಂದುಕೊಂಡೆ. ಈ ಈ ಮಾತು ಮನದಲ್ಲಿ ಮೂಡುತ್ತಲೇ ದೇಹದಲ್ಲಿ ಕೋಪದ ಅಲೆಗಳು ಇನ್ನೂ ಮೇಲೆ ಮೇಲೇರತೊಡಗಿದುವು. ಕೂಡಲೇ ಹಸಿದ ಸಿಂಹದಂತೆ ಗರ್ಜಿಸಿ ''ಹೋಗಿಲ್ಲಿಂದ. ಹೀಗೆ ದೇಹ ಸಾಕಬೇಡ. ನಿನಗೆ ನನ್ನ ಮನೆಯಲ್ಲೇ ಅನ್ನಬೇಕಿದ್ದರೆ, ತಂಪಸೌದೆಯ ಕುಂಟಿಗಳಿವೆ. ಅವನ್ನು ಒಡೆ. ಕೂಲಿ ಕೊಡುತ್ತೇನೆ.'' ಹೇಳಿದೆ. ಮಾತಿನ ಪರಿಣಾಮವಾಗಿ ಅವನ ಮುಖದಲ್ಲಿ ನಗೆ ಮೂಡಿತು. ಹಾಗೆಯೇ ಅವನ ಬಾಯಿಂದ ಮಾತುಗಳೂ ಹೊರಬಂದುವು. ''ದೇವರು ನಿಮಗೆ ಒಳ್ಳೆಯದನ್ನು ಮಾಡಲಿ. ನಾನು ಬರುತ್ತೇನೆ.'' ಮತ್ತವನು ಅಲ್ಲಿ ನಿಲ್ಲದೆ ಮುಂದಿನ ಮನೆಯ ಮುಂದೆ ಹೋಗಿ ಮೇಲಿನ ಸಪ್ತಾಕ್ಷರೀ ಮಂತ್ರವನ್ನು ಉಚ್ಚರಿಸಿದ.

ನಾನು, ಇವನಿಗೆ ಇಂಥಾ ಮಾತುಗಳನ್ನು ಹೋದ ಹೋದ ಮನೆಗಳಲ್ಲಿ, ಕೇಳಿ, ಕೇಳಿ ಮನೋಬುದ್ಧಿಗಳು ಒರಟಾಗಿ ಹೋಗಿವೆ ಎಂದುಕೊಂಡೆ.

''ನೋಡು ಸುಮಾ! ಈಗೊಬ್ಬ ಇಲ್ಲಿಗೆ ಅರ್ಜುನಸನ್ಯಾಸಿ ಬಂದಿದ್ದ. ಅವನು ಅಂಗಹೀನನಲ್ಲ; ಪ್ರಾಯಹೋದ ಮುದುಕನೂ ಅಲ್ಲ; ನೋಲಾಗಿ, ರೋಗವನ್ನಾಗಿ ತನ್ನ ಜೀವಮಾನದಲ್ಲಿ ಒಮ್ಮೆಯೂ ಕಂಡಿರಲಾರ!

ಒಳ್ಳೆ ಭೂತ ಬೆಳೆದ ಹಾಗೆ ಬೆಳದಿದ್ದಾನೆ. ಇಂಥವರಿಗೇಕೆ-ಅದೂ ಈ ಹಾಳು ರೇಶನಕಾಲದಲ್ಲಿ—ಅಕ್ಕಿಯನ್ನೊ, ನಾಲ್ಕು ಕಾಸನ್ನೊ ಕೊಡಬೇಕು. ?ಬೇಕಿದ್ದರೆ ಅಲ್ಲೇ ಹೋಗುತ್ತಿದ್ದಾನೆ, ನೋಡಿಕೊ.'' ಎಂತ ಹೇಳಿ ಅತ್ತ ಕೈ ತೋರಿಸಿದೆ.

ಅವನನ್ನು ದಿಟ್ಟಿಸಿ ನೋಡಿಕೊಳ್ಳುತ್ತಾ, ಸುಮಿತ್ರ- ''ಅಂಥವರಿಗೆ ಕೊಡದಿದ್ದರೂ ಬಾಧೆಯಿಲ್ಲ. ಆದರೆ ನಾನಾಗಿದ್ದರೆ ಕೊಡುತ್ತಿದ್ದೆ." ಎಂದಳು.

''ಅವನೊಬ್ಬ ದೊಡ್ಡ ಕಪಟಿ, ಕಾಣೆ. ಅವನಿಗೆ ನೀನೆಲ್ಲಿಯಾದರೂ ಭಿಕ್ಷೆ ಕೊಟ್ಟರೆ, ನೋಡಿಕೊ, ನಿನಗೆ ಕೋದಂಡ ಹಾಕಿ ಬಿಡುತ್ತೇನೆ.'' ಎಂತ ಎಚ್ಚರಿಕೆಯ ಅಬ್ಬರದ ಮಾತುಗಳನ್ನಾಡಿ, ನಾನು ಸ್ನಾನಕ್ಕೆಂತ ಹೊರಟು ಹೋದೆ.

೨

ಮರುದಿನ ಕೆಲಸ ತೀರಿಸಿ ಮನೆಗೆ ಬರುವ ಸಮಯಕ್ಕೆ ಸರಿಯಾಗಿ ಸುಮಿತ್ರ—ನಾನು ನಿನ್ನೆ ಬೈದು ಓಡಿಸಿದ್ದ ಅದೇ ಕಾವೀ ಹೊದ್ದ ಕಪಟ ಸನ್ಯಾಸಿಗೆ ಅಕ್ಕಿಯನ್ನು ಭಕ್ತಿಭಾವ

ಚಿಕ್ಕಕತೆ ಸನ್ಯಾಸಿ

ಲೇಖಕ:— ''ನರಸಿಂಹ''

ದಿಂದ ಅರ್ಪಿಸುತ್ತಿದ್ದಳು. ಇದನ್ನು ಕಾಣುತ್ತಲೇ ನನ್ನ ಕೋಪ ಉಗ್ರ ರೂಪವನ್ನು ತಾಳಿತು. ನನ್ನ ನಿನ್ನಿನ ಮಾತುಗಳಿಗೆ ಇವಳು ಬೆಲೆ ಕೊಡಲಿಲ್ಲವಲ್ಲಾ ಎಂಬುದೇ ಇದಕ್ಕೆ ಕಾರಣ. ''ಯಾತಕ್ಕೆ ನೀನು ಈ ಮಹಾ ಡಾಂಭಿಕನಿಗೆ ಅದೂ ನನ್ನ ಮಾತನ್ನು ಉಲ್ಲಂಘಿಸಿ ಅಕ್ಕಿ ಕೊಟ್ಟೆ. ನಿನಗೆ ಈ ಹಾಳು ರೇಶನಿಂಗ್ ಕಾಲದಲ್ಲೂ ಅಕ್ಕಿ ಹೆಚ್ಚಾಯಿತೇ?" ಎಂತ ಅರ್ಭಟಿಸಿದೆ.

ಅವಳಿಗೂ ಕೋಪ ಬಂದಿರಬೇಕು. ಅಂತಲೇ— ''ಕೊಡುವುದು ನನ್ನ ಇಷ್ಟ. ಇಷ್ಟಬಂದು ಕೊಟ್ಟಿದ್ದೇನೆ.'' ಎಂಬ ತಿರಸ್ಕಾರದ ಮಾತುಗಳನ್ನಾಡಿದಳು.

ಅವಳು ನಕ್ಕು ಆಡಿದ ಈ ತಿರಸ್ಕಾರದ ನುಡಿಗಳು ನನ್ನ ಹೃದಯದಲ್ಲಿ ಶೂಲಗಳಂತೆ ಬಂದು ಚುಚ್ಚಿಕೊಂಡವು; ತಂಗಡಲೇ ಸುಪ್ತ ರೋಷವೂ ಕರಾಳ ರೂಪವನ್ನು ಧರಿಸಿ ತಾಂಡವವಾಡಿತು. ಆ ಭರದಲ್ಲೇ ನಾನು ಅವಳ ಕೆನ್ನೆಗೆ ಸರೀ ಒಂದು ಬಿಚ್ಚಿಗೆ ತಾಗಿಸುವ ಯೋಚನೆಯಿಂದ ಕೈ ಎತ್ತಿಕೊಂಡೇ ಮುಂದೆ ಧಾವಿಸಿದೆ ಇನ್ನೇನು ಅವಳ ಕೆನ್ನೆಗೆ ಏಟು ಬೀಳಬೇಕು ಎನ್ನುವಾಗಲೇ ಹಿಂದೆಯೇ ನಿಂತಿದ್ದ ಸನ್ಯಾಸಿ ನನ್ನ ಬಲಗೈಯನ್ನು ಗಟ್ಟಿಯಾಗಿ ಹಿಡಿದ. ನಾನೋ—ಉಳಿದಿದ್ದ ಎಡಗೈಯಿಂದಲೇ ಸನ್ಯಾಸಿಯ ಬಲಗೆನ್ನೆಗೆ ಸರಿಯಾಗಿ ಏರಿಸಿದೆ. ಅವನು ಅಗಲೇ ನನ್ನ ಬಲಗೈಯನ್ನು ಬಿಟ್ಟ. ಕೇಳುವುದೇನಿನ್ನು? ಅದರಿಂದಲೇ ಅವನ ಎಡಗೆನ್ನೆಗೂ ಅಪ್ಪಳಿಸಿದೆ. ಇಷ್ಟಾದರೂ ಅವನು ನಗುತ್ತಾ,

"ನಿಮಗೆ ದೇವರು ಒಳ್ಳೆಯದನ್ನು ಮಾಡಲಿ" ಎಂದಾಶೀರ್ವದಿಸಿಯೇ ಮುಂದೆ ಹೋದ. ಆದರೆ ನನ್ನ ಸಿಟ್ಟು ನನ್ನ ಬುದ್ಧಿಯ ತೀಕ್ಷ್ಣತೆಯನ್ನು ಕಡೆದು ಸಿಲ್ಲಿಸಿದ್ದಿತು. ಇದರಿಂದಲೇ ನೋ ಅವನ ಅರ್ಥಪೂರ್ಣ ನಗೆಯ ಅರ್ಥವೇ ನನಗಾಗಲಿಲ್ಲ.

ಅಗಲೇ ಸುಮಿತ್ರ— ''ನೀವು ಅವನ ಬಗ್ಗೆ ತಿಳಿದುಕೊಂಡುದೇ ಒಂದು; ಅವನ ಜೀವನದ ರಹಸ್ಯವೇ ಇನ್ನೊಂದು.'' ಎಂದಳು.

''ನಿನ್ನಂತೆಯೇ ಮರುಳಾಗಿ ಹೋಗಿದ್ದ ಸ್ತ್ರೀಯರ ಅವಸ್ಥೆಯಲ್ಲಾ ಏನೇನಾಗಿ ಹೋಗಿದೆಯೋ?'' ತಿರಸ್ಕಾರದಿಂದಲೇ ಅವಳ ಮುಖ ನೋಡುತ್ತಾ ನಾನು ಹೇಳಿದೆ.

ಅವಳಿಗೆ ನನ್ನ ಮಾತು ರುಚಿಸಲಿಲ್ಲ; ಸನ್ಯಾಸಿಯ ಮೇಲಿನ ನಂಬಿಗೆ ಮಾಸಲೂ ಇಲ್ಲ.

೩

ಅದೇ ಅವಾಂತರದ ದಿನ ನಾನು ಬೇಂಕಿಗೆ ತಲುಪುವಾಗ ನನಗಾಗಿ ಒಂದು ಆಜ್ಞಾಪತ್ರ ಕಾದಿತ್ತು. ಅದರಲ್ಲಿ- '' ನೀನು ಮೈಸೂರಿಗೆ, ಅಲ್ಲಿನ ಅಫೀಸಿನ ಉಸ್ತುವಾರಿಯನ್ನು ನಾಲ್ಕು ದಿನಗಳ ಮಟ್ಟಿಗೆ ನೋಡಿಕೊಳ್ಳಲಿಕ್ಕಾಗಿ ಈ ವಾರಾಂತ್ಯಕ್ಕೆ ಹೋಗಬೇಕು" ಎದ್ದಿತು. ಈಗ ನಾನು ಉಭಯಸಂಕಟದಲ್ಲಿ ಸಿಕ್ಕಿಬಿದ್ದೆ. ಯಾಕೆಂದರೆ ಈಗ ಊರಲ್ಲಿ ಪ್ಲೇಗಿನ ಹಾವಳಿ. ಪ್ಲೇಗಿನ ದೆಸೆಯಿಂದ ನಾನು ಊರಲ್ಲಿರುವದು ಅತ್ಯಗತ್ಯ. ಅತ್ತ ಆಜ್ಞಾಪತ್ರವನ್ನೂ ಉಲ್ಲಂಘಿಸಬರುವಂತಿಲ್ಲ. ಅಗತೂ ಹೀಗೆ ಯೋಚನಾಪರವಶನಾದೆ.

ಮಧ್ಯಾಹ್ನದ ಊಟಕ್ಕೆಂತ ಮನೆಗೆ ಬರುವಾಗ್ಗೆ ಸುಮಿತ್ರ ನನ್ನ ಬರುವಿಕೆಗಾಗಿಯೇ ಕಾದಿದ್ದಳು. ಅವಳಿಗೆ ನನ್ನ ಮೇಲೆ ಬಹಳ ಕೋಪವಿರಬಹುದೆಂಬ ಭಾವನೆ ನನ್ನಲ್ಲಿ ಮೂಡಿದ್ದಿತು. ಆದರೆ ಅವಳು ಎಂದಿನಂತೆ ಅದೇ ಮುಗುಳು ನಗೆಯೊಡನೆ ನನ್ನನ್ನು ಸ್ವಾಗತಿಸಿ ಊಟಕ್ಕೆ ಕೂರಿಸಿದಳು. ಹಾಗೆಯೇ ಯಾವತ್ತಿನಂತೆ ಅವಳೂ ನನ್ನ ಪಕ್ಕದಲ್ಲೇ ಊಟಕ್ಕೆ ಕೂತಳು. ಪಾಪ! ಅವಳಲ್ಲಿ ಕೋಪವೇಕೆ, ಅದರ ಭಾವನೆ ಸಹ ಇರಲಿಲ್ಲ. ನನಗೆ ಬಹು ಬೇಸರವಾಗಿ, ನನ್ನ ಬೆಳಿಗ್ಗಿನ ರಂಪಾಟಕ್ಕಾಗಿ ಕ್ಷಮಾಪಣೆಯನ್ನು ಊಟವಾಗುವ ಮುಂಚೆಯೇ ಯಾಚಿಸಿಕೊಂಡು ಬಿಟ್ಟೆ.

ಅಗ ಅವಳು ನಗುತ್ತ '' ಅದೇನ್ಲಾ ಬಹು ದೊಡ್ಡ ಮಾತು '' ಎಂದುಬಿಟ್ಟಳು.

ಊಟವಾದ ನಂತರ ಪದ್ಧತಿಯಂತೆ ಸ್ವಲ್ಪ ಹರಟೆ ಹೊಡೆದವು. ಆ ಮಧ್ಯೆ ನನ್ನ ಆಜ್ಞಾಪತ್ರದ ಅರಿವು ಅವಳಿಗಾಯಿತು. ಅದನ್ನು ಓದಿಕೊಳ್ಳುತ್ತ ಅವಳು 'ಯಾವಾಗ ಪಯಣ' ಕೇಳಿದಳು.

'ಇನ್ನು ೫-೬ ದಿನಗಳಲ್ಲಿ'

'ಅದಕ್ಕೇನಂತೆ. ಹೋಗಿಬನ್ನಿ' ಇದು ಅವಳ ಒಪ್ಪಿಗೆಯ ಮಾತು.

ಮತ್ತೆ ನಾನು ಉಡುಪು ಧರಿಸಿ ಆಫೀಸಿಗೆಂತ ಹೊರಟೆ. ಅಗಲೇ ಸುಮಿತ್ರ 'ಎದುರು ಮನೆ ಪದ್ಮಮ್ಮನಿಗೆ ಪ್ಲೇಗಂತೆ' ಎಂದಳು.

ನನಗೆ ಸಿಡಿಲು ಬಡಿದಂತಾಯಿತು. ಮನಸ್ಸಿನ ಮಾತುಗಳು ನಾಲಿಗೆಯುರುಳಲೆ ಅಲ್ಲೇ ಉಳಿದು ಹೋದವು. ನನ್ನವಸ್ಥೆ ಕಂಡು ಸುಮಾ ಮೆಲ್ಲನೆ ಹುಸಿಹುಸಿಯಾಗಿ ನಕ್ಕು ''ತುಂಬಾ ಭಯವಾಯಿತೇ? ಯಾತಕ್ಕೆ ಹೆದರಿಕೊಳ್ಳುತ್ತೀರಿ, ಪಾಪ! ನನಗೆ ಜ್ವರ ಬಂದಿದ್ದಾಗ, ಹೊರಗಾಗಿದ್ದಾಗಲೆಲ್ಲ ಅವಳು ನಮಗಾಗಿ ಎಷ್ಟು ಕೆಲಸ ಮಾಡಿಕೊಟ್ಟಳು? ಎಷ್ಟು ಸಲಿಗೆಯಿಂದ ವರ್ತಿಸಿ ನಮ್ಮ ಪ್ರೀತಿಗೆ ಪಾತ್ರಳಾದಳು' ಹೇಳಿದಳು.

ನಾನು ಬಹು ಪ್ರಯಾಸದಿಂದ 'ಇಲ್ಲಾ, ಏನ್ನಲಿಕ್ಕಾಗುತ್ತದೆಯೇ?' ಎಂದೆ. 'ಹಾಗಾದರೆ ನಾನೊಮ್ಮೆ ಹೋಗಿ ಬರಲೇ?'

ನಾನು ಅವಾಕ್ಕಾದೆ, ಮಾತಾಡುವ ಶಕ್ತಿಯೂ ಪೂರ್ತ ಕುಂದಿಹೋಯಿತು. ''ಹೋಗಿ ಬರಲೇ?'' ಪುನಃ ಅವಳು ಕರುಣಾಜನಕ ದೃಷ್ಟಿಯನ್ನೊಮ್ಮೆ ನನ್ನ ಮೇಲೆ ಚಲ್ಲಿ, ಬೇಡಿಕೆಯ ಕಂಠದಲ್ಲಿ ಪ್ರಾರ್ಥಿಸಿಕೊಂಡಳು.

ನಾನು ಏನೋ ಯೋಚಿಸಿ,-ಅವಳ ಧೈರ್ಯಕ್ಕೂ ಮರುಳಾಗಿ 'ಹಿಡಿ ಹೋಗಿದ್ದ ಸುಪ್ತ ಚೈತನ್ಯಗಳನ್ನು ಒಟ್ಟುಗೂಡಿಸಿ ''ಧೈರ್ಯವಿದ್ದರೆ ಹೋಗಿ ಬಾ ಆದರೆ ನಾನು ಮೈಸೂರಿಗೆ ಹೋಗುವದಿಲ್ಲ?"ಎಂದೆ.

ನನ್ನ ಒಪ್ಪಿಗೆ ದೊರೆತದ್ದೇ ಅವಳಿಗೊಂದು ಬೆಲೆ ಬಾಳುವ ಮಾಣಿಕ್ಯ ದೊರೆತಷ್ಟು ಸಂತೋಷವಾಯಿತು. ಆ ಸಂತೋಷದ ಭರದಲ್ಲೇ ಅವಳು ''ಮೈಸೂರಿನ ವಿಷಯ ಸಾಯಂಕಾಲ ಯೋಚಿಸುವಾ" ಎಂದಳು.

ನಾನು ಆಫೀಸಿಗೆ ತಲುಪಿದೆ. ನನ್ನ ಟೇಬಲ ಮೇಲೊಂದು ಟೆಲಿಗ್ರಾಮು ಬಂದಿದ್ದಿತು. ಅದರಲ್ಲಿ ''ಮೈಸೂರಿಗೆ ಕೂಡಲೇ ಹೊರಡು." ಎಂದಿದ್ದಿತು.

೪

ಮೈಸೂರಿಂದ ನಾನು ಊರಿಗೆ ಹೊರಡ [illegible] ವಾಯಿದೆ ಮೀರಿ ಎರಡು ದಿನಗಳಾಗಿ [illegible] ದ್ದುವು. ಗಾಡಿಯಲ್ಲೇ ಏನೊ [illegible] ಅಜ್ಞಾತವೇದನೆ ನನ್ನ ಹೃದಯವನ್ನು [illegible] ಚುಚ್ಚಿ, ಮನಸ್ಸನ್ನು ಪೂರ್ತಿ ಕಲುಕಿದ್ದಿತು. ಸರಿಯಾಗಿ ಮನೆ ಬಾಗಿಲಿಗೆ ಬರುತ [illegible] ಮುಗುಳುನಗೆಯೊಡನೆ ಹೊಸ್ತಿಲ ಬಳಿ ನಿಂ[illegible] ಸ್ವಾಗತಿಸುತ್ತಿದ್ದ ಸುಮಿತ್ರಳನ್ನು [illegible] ಲಿಲ್ಲ. ಇಲ್ಲದ ಯೋಚನೆ ಮನದಲ್ಲಿ ಮೂಡುತ್ತಲೇ, ಕಣ್ಣುಗಳಲ್ಲಿ ನೀರ ಹನಿಗಳು ಉಕ್ಕಿ ಬಂದುವು. ಅಗಲೇ ನನ್ನ ದೃಷ್ಟಿ ಮನೆ ನಡುಕೋಣೆಯತ್ತ ಹರಿಯಿತು. ನನ್ನ ಮಿತ್ರರಾಗಿದ್ದ ಒಬ್ಬ ಡಾಕ್ಟರರು ನಡುಕೋಣೆಯ ಮೇಜಿನ ಮೇಲೆ ದೃಷ್ಟಿಯನ್ನಿಡುತ್ತ- ಮುರಿದ ಕುರ್ಚಿಯ ಮೇಲೆ ಕುಳಿತಿದ್ದರು. ನಾನು ಕಣ್ಣೀರನ್ನು ಸರಿ ಒರೆಸಿಕೊಳ್ಳುತ್ತ—

''ಡಾಕ್ಟರರೇ, ಸುಮಳಿಗೆ [illegible]? ಒಂದೇ ಸಮನೆ ಕೇಳಿಕೊಂಡೆ.

''ಅವಳಿಗೆ ಪ್ಲೇಗು. ಆದರೆ ಭಯವೇನೂ ಇಲ್ಲ.''

ಪ್ಲೇಗೆಂದರೆ ಮೊದಲೇ ಹೆದರುತ್ತಿದ್ದ ನನಗೆ [illegible] ಮೇಲೆ ಉಪ್ಪು [illegible] ದಂತಾಯಿತು. [illegible] ಕಣ್ಣು [illegible] ಇನ್ನು [illegible]. ''ಪ್ಲೇಗು ಎನ್ನುತ್ತೀರಾ? ಭಯವು ಇಲ್ಲ [illegible] ತ್ತೀರಾ? ಎಂಥಾ [illegible] ಮಾತು" ಎಂದೆ.

''ಭಯಕ್ಕೆ ಏನೂ [illegible] ನರಸಿಂಹ್. ಆ ಸನ್ಯಾಸಿಗೇ [illegible] ದ್ದಾರೆ. ಅಲ್ಲ. [illegible] ತ್ತೀರಿ?"

ನನಗೆ—ಯಾವ ಸನ್ಯಾಸಿಯೋ!—ಆ ಸನ್ಯಾಸಿಯ ವಿಷಯ [illegible] ನಾನು ''ಯಾವ ಕಪಟ ಸನ್ಯಾಸಿಯೋ! ಏನೋ?

[illegible] ನನ್ನ [illegible] ಅಲ್ಲಿ [illegible] ಮನೆಯ [illegible] ಮತ್ತು [illegible]. [illegible] ನನ್ನ [illegible] ಗಳನ್ನು [illegible] ಸನ್ಯಾಸಿ [illegible] ಸುಮಿತ್ರಳನ್ನು [illegible]. ಸನ್ಯಾಸಿ [illegible] ಹುಟ್ಟು [illegible].

ಆದರೆ ನನ್ನ ಸುಮಿತ್ರ [illegible] ಆ ಮುಗುಳು ನಗೆಯನ್ನು [illegible] ಕಣ್ಣುಗಳನ್ನು [illegible] ನನ್ನ [illegible]. [illegible] ನನ್ನನ್ನು [illegible] ವಾಗಿದ್ದಿತು.

ನನ್ನ ಕಾಲುಗಳ ಮೊದಲೇ ಸನ್ಯಾಸಿ, '' [illegible] '' ಎಂದ. ಮತ್ತೆ ''ದೇವರು ನಿಮಗೆ ಒಳ್ಳೆಯದನ್ನು ಮಾಡುತ್ತಾನೆ'' ಎಂತ ಮುಂದುವರಿಸಿ, ಸನ್ಯಾಸಿ ಗಮನ [illegible], [illegible] ಯನ್ನು [illegible], ಸುಮಿತ್ರಳ [illegible] ವನ್ನು ಮಾಡಿ, [illegible] ಹೊರಟುಹೋದ.

ನಾನು-ಯಂತ್ರದ ಗೊಂಬೆಯಂತೆ, ಮನ್ನ [illegible] ನಿಂತು—ಒಂದು ಮಾತನ್ನು ಸಹ [illegible], [illegible] ಯೋಯ ಚಲನವಲನಗಳನ್ನು ನೋಡುತ್ತ ನಿಂತಿದ್ದೆ. ಆದರೆ ಕಣ್ಣುಗಳಿಂದ [illegible]

—[illegible] ಹುಬ್ಬಳ್ಳಿ

ಪುಸ್ತಕ ಪರಿಚಯ

(ನಮಗೆ ಬಂದ ಎಲ್ಲ ಪುಸ್ತಕಗಳನ್ನು ಸಾದರದಿಂದ ಸ್ವೀಕರಿಸಿದ ಉಲ್ಲೇಖ ಮಾಡುವೆವಾದರೂ ಆ ಎಲ್ಲವುಗಳ ವಿಮರ್ಶೆ ಮಾಡಿಯೇ ತೀರುವೆವೆಂದು ಗ್ರಹಿಸಕೂಡದಾಗಿ ಈ ಮೂಲಕ ತಿಳಿಸಬಯಸುತ್ತೇವೆ. —ಸಂ.)

ವಿಜ್ಞಾನದ ವಿಚಿತ್ರಗಳು

ಬರೆದವರು ಶ್ರೀ ಕೆ. ವಿಠ್ಠಲ ಶೆಟ್ಟಿ, ಅವರು ಪ್ರಕಾಶಕರು ಶ್ರೀ ಕೆ. ಆರ್. ಶೆಟ್ಟಿ, ಕೋರ್ಟ್ ರೋಡ್ ಉಡುಪಿ. ಪುಟ ೧೫೬, ಬೆಲೆ ರೂ ೨.

ಈ 'ವಿಜ್ಞಾನದ ವಿಚಿತ್ರಗಳಲ್ಲಿ, ೧೬ ಪ್ರಕರಣಗಳಿವೆ. ಅವುಗಳಲ್ಲಿ ಛಾಯಾಗ್ರಹಣ, ನವೀನ ಸಾಮಗ್ರಿ, ವಾತಾವಾರಣ ವಿಸ್ಮಯ, ಬೆರಗಿನ ಪ್ರಕಾಶ, ಪೆಟ್ರೋಲು, ಗಾಳಿ ಹಡಗು, ಮೂರ್ತಿಗಳ ಯಂತ್ರ; ಅಣುಶಕ್ತಿ ಮುಂತಾದ ಹಲವಾರು ವೈಜ್ಞಾನಿಕ ವಿಷಯಗಳನ್ನು ಮನೋಹರವಾಗಿ ವರ್ಣಿಸಲಾಗಿದೆ. ಭಾಷಾಶೈಲಿ ಸರಳವೂ ಸುಲಭವೂ ಆಗಿರುವುದು. ಇದು ವಿಜ್ಞಾನಪ್ರಬಂಧಗಳಲ್ಲಿ ಒಂದು ವಿಶಿಷ್ಟತೆ. ಅದನ್ನು ಇಲ್ಲಿ ಕಾಣಬಹುದು. ಶ್ರೀಯುತ ಶೆಟ್ಟಿ ಅವರು ಇಂಥ ಉಪಯುಕ್ತವಾದ ಜ್ಞಾನಪ್ರಸಾರಕ ಗ್ರಂಥಗಳನ್ನು ಬರೆದು ಕನ್ನಡ ಓದುಗರ ಕೃತಜ್ಞತೆಗೆ ಪಾತ್ರರಾಗದಿರರೆಂಬುದನ್ನು ಈ ಅಚ್ಚುಕಟ್ಟಾಗಿ ಪ್ರಕಟವಾದ ಹೊಸ ಹೊತ್ತಿಗೆ ಸಾರಿ ಹೇಳುವಂತಿದೆ.

ಚೇತನ

ಪ್ರಕಾಶಕರು ವಾಸುದೇವ ಮತ್ತು ಕಂಪನಿ ಚಿತ್ರದುರ್ಗ ಪುಟ ೬೨, ಬೆಲೆ ೪ ಆಣೆ.

ಇದೊಂದು ಹೊಸ ಮಾಸಪತ್ರಿಕೆ. ಅಂದವಾಗಿ ಮುದ್ರಿಸಲ್ಪಟ್ಟಿದೆ. ಆಕಾರ ಚೇತನದಲ್ಲಿ ಮಾಸಪ್ಪ ದೊಡ್ಡದು. ಅಂತರೆ ಎಳೆಯವಳೂ ಅಲ್ಲ. ಬೆಳೆದವಳೂ ಅಲ್ಲ ಎಂಬ ೧೫ ವರ್ಷದ ಹುಡುಗಿಯಂತೆ ಇರುವ ಮುಖಚಿತ್ರ ಬೇರೆ ಇದಕ್ಕೆ ನಿದರ್ಶನವಾಗಿದೆ. ಪ. ರಾ. ಸುಬ್ಬರಾಯರೆಂಬ ಪ್ರಗತಿಶೀಲ ಲೇಖಕರು ಇದರ ಸಂಪಾದಕರು. ಒಳ್ಳೆಯ ಲೇಖನಗಳಿವೆ. ಸಹೋದ್ಯೋಗಿಗಳಿಗೆ ಗೆಲವನ್ನು ಬಯಸುತ್ತೇವೆ.

ನಾಲ್ಕು ಸಣ್ಣ ಕಥೆಗಳು

ಬರೆದವರು ಶ್ರೀ. ಎಂ ಗೋವಿಂದರೆಡ್ಡಿ ಪ್ರಕಾಶಕರು ಅವರೇ. ಪುಟ ೪೦, ಬೆಲೆ ಎಂಟಾಣೆ.

ಇದೊಂದು ಕಥಾಸಂಗ್ರಹ. ಹೊಸ್ನ್ನದು [illegible] ಮರಣಶಾಸನ, ಧರ್ಮಸಂಕಟ, ಗುಂಡಪ್ಪನ ಸಂಸಾರ [illegible] ಬಂದಿದು ತಂಗಿ ಎಂಬ ನಾಲ್ಕು ಕಥೆಗಳು ಪುಸ್ತಕದಲ್ಲಿವೆ. ಪುಸ್ತಕದ ಗಾತ್ರಕ್ಕೆ [illegible] ಬೆಲೆ ಹೆಚ್ಚಾಯಿತು. ಕಥೆಗಳು ತಕ್ಕಮಟ್ಟಿಗೆ ಚೆನ್ನಾಗಿವೆ.

Mahatma Gandhi and other Martyrs of India.

by Nadiga Krishna Murthy. Journal Press Columbia Missouri U. S. A. Crown Folio 80 P. P. Price $ 2.

ಪತ್ರಿಕಾ ವ್ಯವಸಾಯದಲ್ಲಿ ನೈಪುಣ್ಯ ಪಡೆಯಲಿಕ್ಕೆಂದು ಕರ್ನಾಟಕದಿಂದ ಅಮೇರಿಕೆಗೆ ಹೋದ ಶ್ರೀಮಾನ್ ನಾಡಿಗ ಕೃಷ್ಣಮೂರ್ತಿಯವರು ಆ ವ್ಯವಸಾಯದಲ್ಲಿ ಪದವಿಯನ್ನು ಪಡೆಯುತ್ತಿದ್ದಾಗಲೆ ಈ ಪುಸ್ತಕವನ್ನು ಬರೆದು ಪ್ರಸಿದ್ಧಿಸಿ ಕರ್ನಾಟಕದ ಮತ್ತು ಭಾರತದ ಕೀರ್ತಿಯನ್ನು ಅಮೇರಿಕೆಯಲ್ಲಿ ಹೊಳಗಿಸಲು ಕಾರಣರಾಗಿರುವರು. ಪ್ರಸ್ತುತ ಪುಸ್ತಕದ ಮೊದಲನೇ ಭಾಗದಲ್ಲಿ ಮಹಾತ್ಮಾ ಗಾಂಧಿಯವರ ಸಂಕ್ಷಿಪ್ತ ಜೀವನ ಚರಿತ್ರೆ ಸಹ್ಯ ಅಹಿಂಸೆಯ ಶ್ರೇಷ್ಠತೆಗಾಗಿ ಅವರು ಮಾಡಿದ ಆಜೀವ ತಪಸ್ಸು ಹೃದಯಂಗಮವಾಗಿ ಚಿತ್ರಿತವಾಗಿದೆ. ಗಾಂಧೀಜಿಯ ಸತ್ಯಾಗ್ರಹಶಾಸ್ತ್ರದ ಹಿರಿಮೆಯನ್ನು ಹೊಗಳಿದ್ದಾಗಿದೆ. ಗಾಂಧೀಜಿ ಇಂದು ನಮ್ಮನ್ನಗಲಿ ಹೋಗಿದ್ದರೂ ಅವರ ವಾಣಿಯು ಅವರ ವಾಗಿದ್ದು ನಮ್ಮನ್ನು ಸತ್ಯ ಅಹಿಂಸಾ ಕಾರ್ಯಕ್ಷೇತ್ರಕ್ಕೆ ಸನ್ನದ್ಧ ಮಾಡುತಿದೆ. ಗಾಂಧೀಜಿಯ ಅತ್ಯಂತ ಶಿಷ್ಯರಲ್ಲಿ ಒಬ್ಬರಾದ ಶ್ರೀ ನಾಡಿಗರು ಅಮೇರಿಕೆಯಲ್ಲಿ ಅಮೇರಿಕನ್ನರಿಗಾಗಿ ಗಾಂಧೀಜಿಯ ಸ್ಮರಣೆ ಮಾಡಿ ಕೊಟ್ಟಿದ್ದು ಅಭಿನಂದನೀಯವಾಗಿದೆ. ಎರಡನೆಯ ಭಾಗದಲ್ಲಿ ಕನ್ನಡ ನಾಡಿನ ಹಲವು ಹುತಾತ್ಮರ ಚರಿತ್ರೆಯನ್ನು ಶ್ರೀ ನಾಡಿಗರು ಕೊಟ್ಟು ತಾಯ್ನಾಡಿನ ಹಿರಿಮೆಯನ್ನು ವಿದೇಶದಲ್ಲಿ ಹರಡಿದ್ದು ಅನುಕರಣೀಯವಾಗಿದೆ. ಕರ್ನಾಟಕದ ವೀರರು ಕಳೆದ ಸ್ವಾತಂತ್ರ್ಯಸಮರದಲ್ಲಿ ಮಾಡಿದ ಸ್ವಾರ್ಥತ್ಯಾಗ ಅನುಪಮವಾಗಿದೆ. ಹುತಾತ್ಮರಾದ ಮಹಾದೇವಪ್ಪ, ಶಂಕರಪ್ಪ, ಈಸೂರ ಹುತಾತ್ಮರು ಮತ್ತು ಸತ್ತೆಪ್ಪ ಮೊದಲಾದವರ ಜೀವನ ನಿಜವಾಗಿ ಆದರ್ಶನವಾಗಿದೆ. ಅಮೇರಿಕೆಯ ಜನರಿಗೂ ಇವರ ಸ್ವಾರ್ಥತ್ಯಾಗದ ಕಲ್ಪನೆ ಬರುವಂತೆ ಶ್ರೀ ನಾಡಿಗರು ಯೋಜಿಸಿದ್ದು ಸ್ತುತ್ಯವಾಗಿದೆ. ಮಹಾತ್ಮರ ರಾಜಕೀಯ ವಾರಸುದಾರರಾದ ಪಂಡಿತ ಜವಾಹರಲಾಲರು ಬಾಪೂನ ಬಗ್ಗೆ ಬರೆದ ಲೇಖವನ್ನು ಇದರಲ್ಲಿ ಪ್ರಸಿದ್ಧಿಸಲು ಅನುಮತಿ ಪಡೆದಿದ್ದು ಪುಸ್ತಕದ ಶ್ರೇಷ್ಠತೆಯನ್ನು ಹೆಚ್ಚಿಸುತ್ತದೆ. ಮಹಾತ್ಮರ ಸತ್ಯಾಗ್ರಹ ಶಾಸ್ತ್ರವನ್ನು ಚೆನ್ನಾಗಿ ಅಭ್ಯಸಿಸಿ ಆ ಬಗ್ಗೆ ಪುಸ್ತಕವೊಂದನ್ನು ಬರೆದ ಶ್ರೀ ದಿವಾಕರ ರಂಗರಾಯರು ಈ ಪುಸ್ತಕಕ್ಕೆ ಮುನ್ನುಡಿ ಬರೆದಿದ್ದಾರೆ. ಈ ಗ್ರಂಥದ ಅರ್ಪಣೆಯ ಭಾಗವನ್ನು ಕನ್ನಡ ಭಾಷೆಯಲ್ಲಿ ಕನ್ನಡ ಲಿಪಿಯಲ್ಲಿ ಮುದ್ರಿಸಿ ಶ್ರೀ. ನಾಡಿಗರು ಮಾತೃಭಾಷೆಯ ಮೇಲಿನ ತಮ್ಮ ಮಮತೆಯನ್ನು ವ್ಯಕ್ತಪಡಿಸಿದ್ದು ಅನುಕರಣೀಯವಾಗಿದೆ. ಪರದೇಶದಲ್ಲಿ ಪ್ರಸಿದ್ಧಿ ಹೊಂದಿದ ಶ್ರೀ ನಾಡಿಗರನ್ನು ಕನ್ನಡಿಗರು ಎಲ್ಲ ಬಗೆಯಿಂದಲೂ ಪ್ರೋತ್ಸಾಹಿಸದೆ ಇರಲಾರರೆಂದು ನಂಬುತ್ತೇನೆ.

Homage to Mahatma Gandhi

ಬರೆದವರು ವಿವಿಧ ವ್ಯಕ್ತಿಗಳು. ಪ್ರಕಾಶಕರು ದಿಲ್ಲಿ ಸರಕಾರದ ಪ್ರಕಟನಾ ಶಾಖೆಯವರು. ಪುಟ ಸಂಖ್ಯೆ ೧೧೨ ಬೆಲೆ ರೂ. ೧||.

ಈ ಪುಸ್ತಕದಲ್ಲಿ ಮಹಾತ್ಮಾ ಗಾಂಧಿಯವರ ಸ್ಮರಣೆಗಾಗಿ ಜಗತ್ತಿನ ಮಹಾ ವ್ಯಕ್ತಿಗಳು ಮಾಡಿದ ಪ್ರಶಂಸೆಗಳನ್ನು ಕೆಲವೆಡೆ ಪೂರ್ಣವಾಗಿ ಮತ್ತು ಕೆಲವೆಡೆ ಅಪೂರ್ಣವಾಗಿ (ಸ್ಥಳಾಭಾವದಿಂದ) ಕೊಡಲಾಗಿದೆ. ಅಂಥ ಪ್ರಶಂಸಕರಲ್ಲಿ ಶ್ರೀಗಳಾದ ಮೌಂಟ್ ಬ್ಯಾಟನ್, ಪಂಡಿತ ನೆಹರು, ಪಟೇಲ್, ರಾಜಗೋಪಾಲಾಚಾರಿ, ಹೊರೇಸ್ ಅಲೆಗ್ಝಾಂಡರ್, ನಾರ್ಮನ್ ಕ್ಲಿಫ್, ಕಿಂಗ್ಸ್ಲಿ ಮಾರ್ಟಿನ್ ಮತ್ತು ಶ್ರೀಮತಿಯರಾದ ಸರೋಜಿನೀ ನಾಯುಡು, ಅಮೃತಕುವರಿ, ಸೋಫಿಯಾ ವಾಡಿಯಾ ಇವರೂ ಇನ್ನೂ ಇತರ ಅನೇಕ ಮಹನೀಯರೂ ಮುಖ್ಯರು. ಪ್ರತಿಯೊಂದು ಪ್ರಶಂಸೆಯಲ್ಲೂ ಗಾಂಧಿಯವರ ಒಂದೊಂದು ಮಹಾ ಗುಣಗಳನ್ನು ಹೃದಯಂಗಮವಾಗಿ ವರ್ಣಿಸಲಾಗಿದೆ. ರಾಷ್ಟ್ರಪಿತ ಎನಿಸಿದ ಮಹಾತ್ಮನ ನೆನಪು ಸ್ಥಿರವಾಗಿ ಜನಮನದಲ್ಲಿ ಮೂಡಲು ಇಂತಹ ಇನ್ನೂ ಅನೇಕ ಪ್ರಕಟನೆಗಳು ಅವಶ್ಯಕವೆಂದು ನಾವು ಹೇಳಬಹುದಾಗಿದೆ. ಇಂಥ ಉತ್ತಮ ಗ್ರಂಥ ಸಂಕಲನವನ್ನು ಬಹು ಮುದ್ದಾಗಿ ಸಚಿತ್ರವಾಗಿ ಅಚ್ಚು ಹಾಕಿಸಿ ಪ್ರಕಾಶಿಸಿದ ಕೇಂದ್ರ ಸರಕಾರದ ಪ್ರಕಟನ ಶಾಖೆ ನಿಜವಾಗಿಯೂ ಅಭಿನಂದನಾರ್ಹವಿದೆ.

ಡಲ್ಲಾಸ್ ನಗರಕ್ಕೆ ಹೋಗಿದ್ದ ಮೇರಿ ಛಾರ್ಲ್ಸ್ ಳು ಅಲ್ಲಿ ಬಾಂಬಿನಿಂದ ತಲೆಮರೆಸಿಕೊಳ್ಳುವ ರಕ್ಷಣಾ ಸ್ಥಳಕ್ಕೆ ಇಳಿಸೊಂದು ಕೂಸಿಗೆ ಜನ್ಮವಿತ್ತಳು!

ನಾರದ ಕತೆ

(೧೫ನೇ ಪುಟದಿಂದ)

ಹರಿಮೂ ಹರಿದು, ಕಿನ್ನಿಗಳೆರಡನ್ನೂ ಒದ್ದೆಯಾಗಿಸುತ್ತಲೇ ಇದ್ದವು. ಅವನ್ನು ಒರೆಸಿಕೊಳ್ಳುವ ಯೋಚನೆ ಸಹ ನನಗೆ ಬರಲಿಲ್ಲ.

▪

ಮರುದಿನ ಬೆಳಗ್ಗೆ ಸುಮಿತ್ರಳ ಹಾಸಿಗೆ ಪಕ್ಕ ನಾನು ಹೋಗಿ ನಿಂತೆ. ಅವಳು ನಿನ್ನೆ ರಾತ್ರಿಗಿಂತ ಎಷ್ಟೋ ಪಾಲು ಸುಧಾರಿಸಿದ್ದಳು. ಇವಳನ್ನು ಯಮನ ದವಡೆಯಿಂದ ರಕ್ಷಿಸಿದ—ನನ್ನ ಒರಟು ವರ್ತನೆಗಳಿಗೆ ಎಳ್ಳಷ್ಟು ಪ್ರತಿಫಲವನ್ನು ಬಯಸದ-ಆ ಸನ್ಯಾಸಿವರ್ಯರನ್ನು ಮನದಲ್ಲಿಯೇ ವಂದಿಸಿದೆ. ಆಗಲೇ ಸುಮಿತ್ರ—

"ಕೇಳಿದಿರಾ?" ಎಂತ ಮಾತಿಗೆ ಮೊದಲು ಮಾಡಿದಳು.

"ಏನು?" ನಾನು ವಿಚಾರಿಸಿದೆ.

"ದೇವರು ಬಂದ ಹಾಗೆ ಆ ಮಹಾತ್ಮ ಬಂದು ನಮ್ಮ ಗ್ರಾಮದ ರಕ್ಷಕನಾದ. ಇಲ್ಲವಾಗಿದ್ದರೆ ಊರಿಗೆ ಊರೇ ಮಣ್ಣುಮುಕ್ಕಿ ಹೋಗಿ ಇಷ್ಟರಲ್ಲೇ ಇಲ್ಲಿ ಕಾಡು ಬೆಳೆಯುತ್ತಿತ್ತೇನೋ? ಪದ್ಮಮ್ಮನೂ ಇವನ ಉಪಚಾರದಿಂದಲೇ ಬದುಕಿಕೊಂಡಳು." ಕೃತಜ್ಞತೆಯ ಕಣ್ಣೀರು ಅವಳ ಕಣ್ಣುಗಳಲ್ಲಿ ಕಾಣಿಸಿತು.

"ನಾನು ಅವನನ್ನು ತುಂಬಾ ನೋಯಿಸಿದೆ; ಈಗ ಪಶ್ಚಾತ್ತಾಪವಾಗುತ್ತಿದೆ. ಏನು ಮಾಡಲಿ, ಸುಮಾ!"

ನಮ್ಮ ಗ್ರಾಮದ ಜನರ ಆಸ್ಥೆಯನ್ನು "ತನ್ನ ಒಬ್ಬನೇ ಒಬ್ಬ ಪ್ರೀತಿಯ ಮಗನನ್ನು ತಾಯಿ ಸಹ-ಅವನು ಮಾಡಿದ ಹಾಗೆ ಮಾಡಲಾರಳು."

"ನನ್ನ ತಿಳಿಗೇಡಿತನಕ್ಕೆ ತುಂಬಾ ಬೇಸರವಾಗುತ್ತಲ್ಲ ಸುಮಾ!"

"ಅವನ ಅಮೃತಚರಣಗಳಿಗೆರಗಿ ಕ್ಷಮೆ ಬೇಡಿಕೊಳ್ಳಿ."

"ಆಗಲಿ ಸುಮಾ! ಅದಕ್ಕೇನಂತೆ. ಆದರೆ ಅವರ ಬಳಿ ಯಾವ ಮುಖವನ್ನು ಹೊತ್ತು ಹೋಗಲಿ."

"ಹಾಗೊ? ದೊಡ್ಡವರು ದೊಡ್ಡವರೇ. ಅವರು ಅಪರಾಧಿಗಳನ್ನು ಕ್ಷಮಿಸುತ್ತಾರೆ.

ನಾನು ಸನ್ಯಾಸಿಯನ್ನು ಕಾಣುವ ತವಕದಿಂದ ಬೀದಿ ಬೀದಿಗಳಲ್ಲೆಲ್ಲ ಅಲೆದಾಡಿದೆ. ಆದರೆ ಆ ಮಹಾತ್ಮರನ್ನು ಎಲ್ಲೂ ಕಾಣಲಿಲ್ಲ. ಬದಲು ಬೀದಿ ತುಂಬಾ ಅವರ ಗುಣಗಾನ ಮಾತ್ರ ಧ್ವನಿತವಾಗಿ ಕಿವಿಗೆ ಇಂಪಾದ ಸಂಗೀತಕ್ಕಿಂತಲೂ ಇಂಪಾಗಿ ಕೇಳಿಸುತ್ತಿದ್ದಿತು.

ನಮ್ಮ ಬೀದಿಯಲ್ಲೇ ನಾಗಪ್ಪಯ್ಯನನ್ನು ಕಾಣುತ್ತಲೇ ಅವರ ವಿಷಯ ಹೀಗೆ ಹೇಳಿದ. "ಅವನೊಬ್ಬ ದೇವತಾ ಮನುಷ್ಯ. ಬರೇ ಮೂರೇ ಮೂರು ಮಾಳಿಕೆಗಳಿಂದ ನಮ್ಮ ಇಡೀ ಕುಟುಂಬವನ್ನು ರಕ್ಷಿಸಿದ ಮಹಾ ಮಹಾತ್ಮನವ"

ಇದಕ್ಕೆ ಪ್ರತಿಯಾಗಿ ನೀವೇನಾದರೂ ಕಾಣಿಕೆ. ಗೀಣಿಕೆ....

ಕಾಣಿಕೆ ಮಾತೇ? ನಾನು ಐದು ರೂಪಾಯಿ ಸಾಲಮಾಡಿ ಅವರ ಚರಣಗಳಿಗೆ ಅರ್ಪಿಸಹೋದೆ. ಆಗ ಅವರು "ನಿನ್ನ ಮನೆಯ ಒಂದು ಹಿಡಿ ಅಕ್ಕಿ ಈ ಐದು ರೂಪಾಯಿಗಿಂತ ಎಷ್ಟೋ ಪಾಲು ಬೆಲೆಯುಳ್ಳದ್ದು" ಎಂದುಬಿಟ್ಟರು. ಎಂಥ ತ್ಯಾಗಿಗಳವರು!

ಇಂಥ ತ್ಯಾಗಿಯನ್ನು ಹೊಡೆದು ಅಪಮಾನಗೊಳಿಸಿದ ಕೀಳ ನಾನು. ಈಗ ಊರಲ್ಲಿ ಅವರ ಅವಿಶ್ರಾಂತವಾದ ಸೇವೆಯ ಫಲದಿಂದ ರೋಗವೆಲ್ಲ ಉಪಶಮನವಾಗಿದೆ. ಅವರೆ ಇನ್ನೊಮ್ಮೆ ಕಾಣೋಣವೆಂದರೆ ಆ ಸನ್ಯಾಸಿಯೇ ಸಿಕ್ಕನು. ಲೋಕೋಪಕಾರದ ತಮ್ಮ ಕೆಲಸ ತೀರುತ್ತಲೇ ಮಹಾನುಭಾವರು ಒಂದರೆಗಳಿಗೆಯೂ ಒಂದೆಡೆಗೆ ನಿಲ್ಲುವದಿಲ್ಲ. ಎಂದೇ ಇವರಿಗೆ ಕಿತ್ತಡಿಗಳೆಂಬ ಹೆಸರಲ್ಲವೇ?

ನನಗೆ ಇಂದಿಗೂ—ಯಾವ ಭಿಕ್ಷುಕನನ್ನೇ ಆಗಲಿ-ಕಂಡಾಗಲೆಲ್ಲಾ ಆ ಸನ್ಯಾಸಿವರ್ಯರ ಭವ್ಯ ನಿರ್ಮಲಾಕೃತಿ ಮನಪಟದೆದುರು ನಿಲ್ಲುತ್ತದೆ. ಅದರ ಹಿಂದೆಯೇ ಪಶ್ಚಾತ್ತಾಪದ ಒಂದೆರಡು ನೀಳುಸಿರೂ ಹೊರಹೊಮ್ಮುತ್ತವೆ. ಆಗ ಸುಮಿತ್ರಳೂ ನೀಳವಾದ ಉಸಿರೊಂದನ್ನು ಬಿಟ್ಟು ನನ್ನನ್ನು ಸಾಂತ್ವಿಸಲೆತ್ನಿಸುತ್ತಾಳೆ.

ತಾ. ೧೦ನೆಯ ದಿನ ಗದಗಿನಿಂದ ಹುಬ್ಬಳ್ಳಿಗೆ ಬರುತ್ತಿದ್ದ ಒಂದು ಮೋಟಾರ ಬಸ್ಸು ಹುಲಕೋಟಿಯಿಂದ ೨ ಮೈಲು ಅಂತರದ ಮೇಲೆ ಎಮ್ಮೆ ಅಡ್ಡ ಬರಲು ಅದನ್ನು ತಪ್ಪಿಸುವಾಗ ಉರುಳಿ ಬಿದ್ದದರಿಂದ ಸುಮಾರು ೨೭ ಪ್ರವಾಸಿಕರು ಗಾಯಗೊಂಡಿರುವರಲ್ಲದೆ ಮೋಟಾರ ಕ್ಲೀನರನಿಗೆ ತೀವ್ರ ಗಾಯಗಳಾಗಿವೆ.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಪೋತದಾರರಿಯವರಿಂದ ಮುದ್ರಿಸಿ ಪ್ರಕಟವಾಯಿತು.